...ದುಗರೊಡನೆಯ ಹರಟೆಗಳು



ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ

ಬೆಂಗಳೂರು-ಹುಬ್ಬಳ್ಳಿ-ಕಲಬುರ್ಗಿ

ಓದುಗರೊಡನೆಯ ಹರಟೆಗಳು

ಪಾ.ವೆಂ. ಆಚಾರ್ಯರ

ಸಮಗ್ರ ಸಾಹಿತ್ಯ ಸಂಪುಟ - ೧೩

ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಪ್ರಥಮ ಮುದ್ರಣ ೨೦೦೩

ಮುದ್ರಕರು
ಎ.ಸಿ. ಗೋಪಾಲ
ಲೋಕ ಶಿಕ್ಷಣ ಟ್ರಸ್ಟ್
ಹುಬ್ಬಳ್ಳಿ-ಬೆಂಗಳೂರು.

ಪ್ರಕಾಶಕರು
ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ
ಹುಬ್ಬಳ್ಳಿ-ಬೆಂಗಳೂರು.

ODUGARODANEYA HARATEGALU

A collection of articles by Late P.V. Acharya. Edited by Dr. Shrinivas Havanoor.

Published by A.C. Gopal for Loka Shikshana Trust Granthamale, Koppikar Road Hubli-20 and No.2 Residency Road, Bangalore-25.

First Edition-2003

Pages - 88

Copics - 1000

Price - Rs. 20

ಓದುಗರೊಡನೆಯ ಹರಟೆಗಳು

ದಿ. ಪಾ.ವೆಂ. ಆಚಾರ್ಯರು ಬರೆದ 'ಹರಟೆ'ಗಳ ಸಂಗ್ರಹ

ಸಂಪಾದಕರು: ಡಾ. ಶ್ರೀನಿವಾಸ ಹಾವನೂರ

ಪ್ರಕಾಶಕರು: ಎ.ಸಿ. ಗೋಪಾಲ, ಲೋಕ ಶಿಕ್ಷಣ ಟ್ರಸ್ಟ್, ಗ್ರಂಥಮಾಲೆ,

ಕೊಪ್ಪೀಕರ ರಸ್ತೆ, ಹುಬ್ಬಳ್ಳಿ-೨೦,

ನಂ.2, ರೆಸಿಡೆನ್ಸಿ ರಸ್ತೆ, ಬೆಂಗಳೂರು-೨೫.

ಪ್ರಥಮ ಮುದ್ರಣ - ೨೦೦೩

ಪುಟ - ೮೮

ಪ್ರತಿಗಳು - ೧೦೦೦

ಬೆಲೆ - ೨೦ ರೂ.

ಪ್ರಕಾಶಕರ ಮಾತು

ಪಾಡಿಗಾರು ವೆಂಕಟರಮಣ ಆಚಾರ್ಯರೆಂದರೆ 'ಸಂಯುಕ್ತ ಕರ್ನಾಟಕ' ಬಳಗದ ಹೆಮ್ಮೆ, ಕನ್ನಡದ ಏಕೈಕ ಡೈಜೆಸ್ಟ್ 'ಕಸ್ತೂರಿ'ಯ ಪರಿಮಳವನ್ನು ನಾಡಿನ ಮನೆಮನೆಗೆ ತಲುಪಿಸಿದವರು ಅವರು. ಅವರ ವಿಷಯ ಸಂಗ್ರಹಣೆಯ ಕಾತರ, ಒಳ್ಳೆಯದನ್ನೆ ಒಳ್ಳೆಯ ರೀತಿಯಲ್ಲಿ ನೀಡಬೇಕೆಂಬ ಛಲ, ಬೌದ್ಧಿಕ ಬಲ 'ಕಸ್ತೂರಿ'ಯನ್ನು ಸಮೃದ್ಧ ಗೊಳಿಸಿತು. ಜನಪ್ರಿಯಗೊಳಿಸಿತು. ಈ ವೈಶಿಷ್ಟ್ಯಪೂರ್ಣ ಮಾಸಿಕವನ್ನು ರೂಪಿಸುವಲ್ಲಿ, ಸುಂದರವಾಗಿ ಬೆಳೆಸುವಲ್ಲಿ ಅವರು ಪಟ್ಟ ಪರಿಶ್ರಮ ಅಪಾರ.

'ಸರಳ ವ್ಯಕ್ತಿತ್ವ-ಉನ್ನತ ವಿಚಾರ' ತತ್ವದ ಸಾಕಾರ ರೂಪವಾಗಿದ್ದ ಆಚಾರ್ಯರು ಪತ್ರಿಕೋದ್ಯಮಕ್ಕೆ ನೀಡಿದ ಕೊಡುಗೆ ಅಪಾರ. ಲೇಖಕರಾಗಿ ತಾವಷ್ಟೇ ಬೆಳೆಯಲಿಲ್ಲ, ಅನೇಕರನ್ನು ಬೆಳೆಸಿದರು. ತಿದ್ದಿ ತಿದ್ದಿ ಬರೆಸಿದರು. ತಮಗೆ ಸಂಪೂರ್ಣ ತೃಪ್ತಿ ಎನಿಸಿದ ನಂತರವೇ ಅವರು ಲೇಖನವನ್ನು ಪ್ರಕಟಿಸುತ್ತಿದ್ದರು. ಅವರ ಕಾರ್ಯವೈಖರಿ ಇಂದಿನವರಿಗೂ ಮಾದರಿ.

ವಿವಿಧ ಸಂದರ್ಭಗಳಲ್ಲಿ ಆಚಾರ್ಯರು ಬರೆದ ಹರಟೆಗಳನ್ನು ಸಂಗ್ರಹಿಸಿ ಈ ಪುಸ್ತಕದಲ್ಲಿ ಕೊಡಲಾಗಿದೆ. ಖ್ಯಾತ ಲೇಖಕ, ಸಂಶೋಧಕ ಡಾ. ಶ್ರೀನಿವಾಸ ಹಾವನೂರ ಅವರು ಪರಿಶ್ರಮಪಟ್ಟು ಈ ಹರಟೆಗಳನ್ನು ಸಂಪಾದಿಸಿದ್ದಾರೆ. ನಮ್ಮವರೇ ಆಗಿದ್ದ ದಿ. ಪಾ.ವೆಂ. ಆಚಾರ್ಯರ ಈ 'ಓದುಗರೊಡನೆಯ ಹರಟೆ' ಪುಸ್ತಕ ಪ್ರಕಟಿಸಲು ಲೋಕ ಶಿಕ್ಷಣ ಟ್ರಸ್ಟ್‌ಗೆ ಹೆಮ್ಮೆ ಎನಿಸುತ್ತಿದೆ. ಸದಾ ಪ್ರಸ್ತುತ ಎನಿಸುವ ಆಚಾರ್ಯರ ಬರಹ ಅಂದಿನವರಿಗಷ್ಟೆ ಅಲ್ಲ, ಇಂದಿನವರಿಗೂ ಹಿಡಿಸುತ್ತದೆ ಎಂಬ ವಿಶ್ವಾಸ ನಮ್ಮದು.

ಅಧ್ಯಕ್ಷ
ಲೋಕ ಶಿಕ್ಷಣ ಟ್ರಸ್ಟ್
ಹುಬ್ಬಳ್ಳಿ-ಬೆಂಗಳೂರು.

ಪ್ರಸ್ತಾವನೆ

'ಕಸ್ತೂರಿ'ಯ ಸಮರ್ಥ ಸಂಪಾದಕರು, ಪ್ರಥಮ ದರ್ಜೆಯ ಚಿಂತಕರು, ಸರ್ವ ಕುತೂಹಲಿ-ಸರ್ವಜ್ಞಾಚಾರ್ಯರು, ಪ್ರತಿಭಾವಂತ ಪಂಡಿತರು, ಓದುಗರೊಡನೆ ಹರಟೆ ಹೊಡೆದ ಲಾಂಗೂಲಾಚಾರ್ಯರು,

ಈ ರೀತಿಯ ನಾನಾ ಉಪಾಧಿಗಳನ್ನು ಪಡೆದಿದ್ದ ದಿವಂಗತ ಪಾಡಿಗಾರು ವೆಂಕಟರಮಣ ಆಚಾರ್ಯರ ಕೃತಿ ಇದು.

ಕೃತಿ ರಚನೆ

ಪಾ.ವೆಂ. ಅವರ ಸಾಹಿತ್ಯ ಕಾರ್ಯವನ್ನು ಈ ಮೂರು ಕಾಲಖಂಡಗಳಲ್ಲಿ ಗುರುತಿಸಬಹುದು.

೧೯೩೨ ರಿಂದ ೧೯೪೨: ಉಡುಪಿಯಲ್ಲಿದ್ದಾಗ, 'ಅಂತರಂಗ', 'ಜಯಕರ್ನಾಟಕ' ಮುಂತಾದ ಪತ್ರಿಕೆಗಳಲ್ಲಿ ಬಂದಂಥ ಕಥೆ-ಕವನಗಳ ರಚನೆ, ಅವರ ಮೊದಲ ಕವನ 'ಉದ್ಧಾರ' ಎಂಬುದು 'ಜಯಕರ್ನಾಟಕ' ದಲ್ಲಿ ಪ್ರಕಟವಾಗಿದೆ. (೧೯೩೩). ಅವರ ಪ್ರಥಮ ಸಣ್ಣಕಥೆ 'ಮಧುವನ' ಎಂಬ ಕಥಾಸಂಗ್ರಹದಲ್ಲಿ ಬಂದಿದೆ (೧೯೩೫).

೧೯೪೨ ರಿಂದ ೧೯೭೪: ಕರ್ಮವೀರ, ಕಸ್ತೂರಿಗಳಲ್ಲಿ ಪ್ರತಿ ಸಂಚಿಕೆಯಲ್ಲಿಯೂ ಪ್ರಕಟವಾದ ಬರಹಗಳು. ಅವರ ಸಾಹಿತ್ಯ ಕೃತಿಗಳ ಬಲುದೊಡ್ಡ ಮೊತ್ತ ಈ ಕಾಲದ್ದು.

೧೯೭೪ ರಿಂದ ೧೯೯೨: ನಿವೃತ್ತರಾದ ಮೇಲೆ ತುಷಾರ, ಸುಗುಣಮಾಲಾ, ತರಂಗ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದ ಸರ್ವ ವಿಧದ ಬರಹಗಳು. ತುಳು ಕವನಗಳ ರಚನೆಯೂ ಇದೇ ಅವಧಿಯದು. ಜೊತೆಗೆ ತಮ್ಮ 'ಕಸ್ತೂರಿ' ಯಲ್ಲಿಯೇ ಪ್ರತಿ ತಿಂಗಳು ವಿವೇಚಿಸಲಾದ 'ಪದಾರ್ಥ ಚಿಂತಾಮಣಿ'.

ಪಾ.ವೆಂ. ಅವರ ಒಟ್ಟಿನ ಬರವಣಿಗೆ ಹತ್ತು ಸಾವಿರ ಪುಟಗಳನ್ನು ಮೀರುವುದಾಗಿದ್ದರೂ ಪುಸ್ತಕರೂಪದಲ್ಲಿ ಬಂದದ್ದು ತೀರಾ ಕಡಿಮೆ. 'ರಶಿಯದ ರಾಜ್ಯಕ್ರಾಂತಿ' ಮತ್ತು 'ಸ್ವತಂತ್ರ ಭಾರತ' ಎಂಬೆರಡು ಪ್ರಚಲಿತ ರಾಜಕೀಯ ವಿಶ್ಲೇಷಣೆಗಳು, ನಾಲ್ಕು ಹರಟೆಗಳ ಸಂಗ್ರಹಗಳು ಮತ್ತು ಎರಡೇ ಕವನ ಸಂಗ್ರಹಗಳು. ಅಲ್ಲದೆ ಎದ್ದು ಕಾಣುವ ಕೃತಿಗಳೆಂದು 'ಸುಭಾಷಿತ ಚಮತ್ಕಾರ' ಹಾಗೂ 'ಪದಾರ್ಥ ಚಿಂತಾಮಣಿ' ಇವನ್ನು ಹೆಸರಿಸಬೇಕು.

ಪಾ.ವೆಂ. ಆಚಾರ್ಯರ ಕೃತಿರಚನೆಯ ಭೂಮಿಕೆಯನ್ನು ಐದು ಮುಖಗಳಲ್ಲಿ ರೇಖಿಸಬಹುದು. ಅವೆಂದರೆ-ಕಲ್ಪಕತೆ, ಚಿಂತನಪರತೆ, ಶಬ್ದಾಸಕ್ತಿ, ಪತ್ರಿಕಾಧರ್ಮ; ಅಣಕ ಪ್ರವೃತ್ತಿ.

ಕಲ್ಪಕತೆ ಅವರ ಕವನ, ಕಥೆಗಳಲ್ಲಿ ವ್ಯಕ್ತವಾದರೆ, ಚಿಂತನಪರತೆಯು ಜೀವನ ಸಮಸ್ಯೆಗಳ ಕುರಿತ ವಿಚಾರಮಂಥನದಲ್ಲಿ ವ್ಯಕ್ತವಾಗಿದೆ. ಶಬ್ದಾಸಕ್ತಿಯಂತೂ 'ಕಸ್ತೂರಿ' ಯು ಆರಂಭವಾದ ಕಾಲದಿಂದ ತೋರಿ ಬಂದಿದೆ. ಪತ್ರಿಕಾಧರ್ಮದ ಬಗೆಯನ್ನು ಅವರು ಪಾಲಿಸುವುದಕ್ಕೂ 'ಕಸ್ತೂರಿ'ಯೇ ಕಾರಣವಾಯ್ತು. ಅಣಕ ಪ್ರವೃತ್ತಿ ಅವರಿಗೆ ಜನ್ಮಜಾತವಾಗಿದ್ದು, ಅವರ ಹೆಚ್ಚಿನ ಕೃತಿರಚನೆಗೆ ಅರ್ಥಾತ್ ಹರಟೆಗೆ ಪ್ರಮುಖ ಪ್ರೇರಣೆಯಾಗಿ ನೆಲೆಗೊಂಡಿದೆ. ಇವು ಐದೂ ಭೂಮಿಕೆಗಳ ಹಿಂದೆ ಅಖಂಡವಾದ ವ್ಯಾಸಂಗಪ್ರಿಯತೆ ಇದ್ದುದನ್ನು ನಾವು ಗಣಿಸತಕ್ಕುದು. ತುಸು ವಿವರಗಳನ್ನು ಕೊಡೋಣವೆ?

ಅನೇಕರಂತೆ ಪಾ.ವೆಂ. ತಮ್ಮ ಲೇಖನವನ್ನು ಕವನಿಸುವುದರಿಂದಲೇ ಆರಂಭಿಸಿದರು, ಹನ್ನೊಂದು ವರ್ಷದವರಿದ್ದಾಗ. ಆ ಮುಂದೆಯೂ ಕವಿತಾರಚನೆಗೆ ಮನಗೊಟ್ಟರೂ, ನಿಯಮಿತವಾಗಿ ಬರೆಯುವುದಕ್ಕೆ ಆಗಲೇ ಇಲ್ಲ. ಆದರೆ ಕಾಲ ಮುಂದೆ ಸರಿದಂತೆ ಅವರ ಪ್ರಯೋಗಶೀಲ ಪ್ರವೃತ್ತಿ ಕವಿತೆಯಲ್ಲಿ ನವನವೀನ ಪ್ರಯೋಗ ಮಾಡುವುದಕ್ಕೆ ಪ್ರೇರಿಸಿತು. ಅವರ ಮೊದಲ ಕವನ ಸಂಗ್ರಹ 'ನವನೀರದ' ಕ್ಕೆ ಆಗಿನ ಮುಂಬಯಿ ಸರಕಾರದಿಂದ ಪಾರಿತೋಷಕವೂ ಲಭಿಸಿತು. ಅನಂತರ ಪ್ರಕಟವಾದ ಸಂಗ್ರಹದ ಹೆಸರು 'ಕೆಲವು ಪದ್ಯಗಳು' ಈ 'ಕೆಲವು' ಎನ್ನುವುದು ಅವರ ಒಟ್ಟಿನ ಕವನ ರಚನೆಗೂ ಅನ್ವಯಿಸುತ್ತದೆ.

ವಿಶೇಷವೆಂದರೆ 'ಮಂಕುತಿಮ್ಮ' ನ ಮಾದರಿಯಲ್ಲಿ ಅವರು 'ಪೆಂಗೋಪದೇಶ' ದ ಪದ್ಯಗಳನ್ನು ರಚಿಸಿದ್ದಾರೆ. ಹೆಚ್ಚಿನವು ಈ ಮುಂಚೆ ಪ್ರಕಟವಾಗಿಲ್ಲ. ಇದೊಂದು ಮಾದರಿ.

ಬದುಕು ಖಟರಾ ಬಸ್ಸು; ವಿಧಿಯದರ ಡ್ರೈವರನು
ಕುಡಿದು ಹೊಡೆಯುತ್ತಾನೆ ಎರಡು ಕಾಣುತ್ತ
ಗಟರವೊ ಮರವೊ ಸಂಕವೊ ಟ್ರಕ್ಕೊ ಗೋಡೆಯೊ
ಮಡಿವವನಿಗಾಗುವದೇನೊ ಎಲವೊ ಪೆಂಗೇ.

ಅವರು ಕಥೆಗಳನ್ನು ಬರೆದದ್ದಾದರೂ ಕಡಿಮೆಯೇ. ಹೆಚ್ಚಾಗಿ ಉಡುಪಿಯಲ್ಲಿದ್ದಾಗ ಬರೆದವುಗಳು. ಅವು ೧೯೩೦ ರ ದಶಕದ ಕಥೆಗಳಾದರೂ ವಿಶಿಷ್ಟ ಸನ್ನಿವೇಶ ಹಾಗೂ ಅನಿರೀಕ್ಷಿತ ಕೊನೆಯಿಂದ ಕೂಡಿದವುಗಳಾಗಿವೆ. ಆ ಕಾಲದಲ್ಲಿ ಬರೆದ 'ಅಪರಜೀವನ' ಎಂಬ ಕಥೆಯು ಕನ್ನಡದಲ್ಲಿ ಅತೀಂದ್ರಿಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡಂಥ ಮೊಟ್ಟ ಮೊದಲಿನ ಕಥೆಯಾಗಿದೆ.

ಸಾಹಿತ್ಯಿಕ ಬರಹಗಳಲ್ಲಿ ಪಾವೆಂ ಅವರದು ಇನ್ನೊಂದು ಬಗೆಯ ವಿಶಿಷ್ಟ ಕೊಡುಗೆ, ಸಂಸ್ಕೃತ ಸಾಹಿತ್ಯ, ಹಳಗನ್ನಡ ಮತ್ತು ಭಾಷಾ ವಿಷಯಗಳಿಗೆ ಸಂಬಂಧಿಸಿದ ಲೇಖಗಳು, ಮೌಲಿಕ ಅಂಶಗಳನ್ನು ಒಳಗೊಂಡಿವೆ. 'ಸಂಸ್ಕೃತ ಕಾವ್ಯಗಳಲ್ಲಿಯ ಪ್ರಣಯ ವಿವೇಚನೆ' ಎಂಬ ಲೇಖನ ಗಮನಾರ್ಹವಾಗಿದೆ. ಇತ್ತ ನೇಮಿಚಂದ್ರ, ಕುಮಾರವ್ಯಾಸರ ಬಗೆಗೆ ನವೀನ ಆಲೋಚನೆಗಳನ್ನು ಮಂಡಿಸಿದ್ದಾರೆ. ಸಮಕಾಲೀನ ಕನ್ನಡ ಸಾಹಿತ್ಯದ ಬಗ್ಗೆ ಆಳವಾಗಿ ಯೋಚಿಸಿ ಬರೆದದ್ದು ಕಂಡು ಬಾರದಿದ್ದರೂ ತಮ್ಮ ಸಮಕಾಲೀನ ಆದರೆ ಹಿರಿಯರಾದ ಸಾಹಿತಿ, ಪತ್ರಕರ್ತರ ಬಗ್ಗೆ ಮನನೀಯವಾದ ವ್ಯಕ್ತಿಚಿತ್ರಗಳನ್ನು ಕೊಟ್ಟಿದ್ದಾರೆ. ಶಿವರಾಮ ಕಾರಂತ, ಶಂ.ಬಾ. ಜೋಶಿ ಇವರ ವ್ಯಕ್ತಿಚಿತ್ರಣದ ಜೊತೆಗೆ ಅವರ ಕೃತಿಗಳ ಆಳವಾದ ಅಭ್ಯಾಸಮಾಡಿ ಬರೆದ ಪ್ರಬಂಧಗಳು ಆಚಾರ್ಯರ ವೈದುಷ್ಯಕ್ಕೆ ನಿದರ್ಶನಗಳಾಗಿವೆ. ಇತ್ತ ತಮ್ಮ ಸ್ನೇಹಿತರಾಗಿದ್ದ ದ.ಬಾ.ಕುಲಕರ್ಣಿಯವರ ವ್ಯಕ್ತಿಚಿತ್ರದಲ್ಲಿ ಆತ್ಮೀಯತೆ ಎದ್ದು ತೋರುವಂತಿದೆ.

ಇವೆಲ್ಲವನ್ನು ಮೀರಿಸಿದುವೆಂದರೆ ಅವರ ಮೌಲಿಕ ಚಿಂತನೆಯನ್ನೊಳಗೊಂಡ ಪ್ರಬಂಧಗಳು, ಅವು ಆಚಾರ್ಯರ ವ್ಯಾಸಂಗಪ್ರೇರಿತವಾದ ಆದರೆ ಮೂಲಭೂತವಾದ ವಿಚಾರಗಳನ್ನು ಒಳಗೊಂಡಿವೆ. 'ಜೀವನಕ್ಕೆ ಅರ್ಥವುಂಟೆ?' ಅದರಂತೆ, 'ಮಾನವ ಪ್ರವೃತ್ತಿ ಹಾಗೂ ಮೌಲ್ಯಗಳು', ಪಾಪಪ್ರಜ್ಞೆ, ಆಜ್ಞಾಪಾಲನೆ, ಆತ್ಮಸಾಕ್ಷಿ ಈ ಬಗೆಯ ಹತ್ತಾರು ವಿಷಯಗಳನ್ನು ಅವರು ಎತ್ತಿಕೊಂಡಿದ್ದಾರೆ. ಪಕ್ವ ಆಲೋಚನೆಯ ಅಭಿವ್ಯಕ್ತಿ ಇಲ್ಲಿದೆ. ಕೆಲವು ಪ್ರಬಂಧಗಳು ಧಾರ್ಮಿಕ, ಶೈಕ್ಷಣಿಕ ಸಮಸ್ಯೆಗಳನ್ನು ವಿವೇಚಿಸುತ್ತವೆ. ಉದಾಗೆ ಶಾಸ್ತ್ರಗಳನ್ನು ಏಕೆ ಪಾಲಿಸಬೇಕು? ಶಿಕ್ಷಣ

ಮತ್ತು ಜೀವನ ಮೌಲ್ಯಗಳು, ಸಾಮಾಜಿಕ ಬದಲಾವಣೆ ಹಾಗೂ ಮನೋವೃತ್ತಿಗಳು, ಇವನ್ನು ಪರಿಶೀಲಿಸಿದಾಗ ಪಾವೆಂ ಪ್ರಥಮ ದರ್ಜೆಯ ಚಿಂತಕರೆಂಬುದು ಮನವರಿಕೆಯಾಗುವುದು. ಅವರ 'ಬ್ರಾಹ್ಮಣರೇನು ಮಾಡಬೇಕು?' ಎಂಬ ಸವಿವರ ವಿಶ್ಲೇಷಣಾ ಪ್ರಬಂಧವನ್ನೂ ವಿಶೇಷವಾಗಿ ಹೆಸರಿಸಬೇಕು. ಅತ್ಯಂತ ನಿಷ್ಪಕ್ಷವಾದ ರೀತಿಯಲ್ಲಿ ವಿಷಯ ಮಂಡನೆ ಮಾಡಿದ್ದಾರೆ.

'ಕಸ್ತೂರಿ' ಗಾಗಿ ಬರೆದ ಲೇಖಗಳು ೬೦೦ ರ ಸಂಖ್ಯೆಯನ್ನು ಮೀರಿವೆ. ಅವನ್ನು ಹೀಗೆ ವರ್ಗೀಕರಿಸಬಹುದು.

ಅ) ಜಗದ್ವಿಖ್ಯಾತ ವ್ಯಕ್ತಿಗಳ ಚರಿತ್ರೆ
ಆ) ದೇಶ-ವಿದೇಶಗಳ ಪರಿಚಯ
ಇ) ಜಗತ್ತಿನಲ್ಲಿ ನಡೆದ ವೈಚಿತ್ರ್ಯಗಳು
ಈ) ಭಾರತದ ಆಗು-ಹೋಗುಗಳು
ಉ) ವೈಜ್ಞಾನಿಕ ವಿಷಯಗಳು.

ಇಷ್ಟೊಂದು ವೈವಿಧ್ಯಮಯ ಲೇಖಗಳಿಗಾಗಿ ಪಾ.ವೆಂ. ಮಾಹಿತಿಯನ್ನು ಕಲೆಹಾಕುವಲ್ಲಿ ಅವನ್ನು ಪರಿಶೋಧಿಸಿ ವ್ಯವಸ್ಥಿತವಾಗಿ ನಿರೂಪಿಸುವಲ್ಲಿ ಪಟ್ಟಶ್ರಮ ಅಷ್ಟಿಷ್ಟಲ್ಲ.

ಮೇಲಿನವುಗಳಲ್ಲಿ ಅವರ ವೈಜ್ಞಾನಿಕ ಲೇಖನಗಳನ್ನು ಎತ್ತಿ ಹೇಳಬೇಕು. ಕಸ್ತೂರಿಗಾಗಿ ಇತರ ವಿಷಯಗಳ ಬಗ್ಗೆ ಲೇಖಗಳು ವಿಪುಲವಾಗಿ ಬರುತ್ತಿದ್ದರೂ, ವಿಜ್ಞಾನದ ಬಗ್ಗೆ ಬರೆಯುವ ಶ್ರಮವನ್ನು ವಹಿಸುವವರಿರಲಿಲ್ಲ, ಆದರೆ ಆ ವಿಷಯ ಕಸ್ತೂರಿಯಲ್ಲಿ ಬರಲೇಬೇಕಲ್ಲವೆ? ಹೀಗಾಗಿ 'ಕಸ್ತೂರಿ' ಯ ದಿನಗಳಲ್ಲಿ ಪಾವೆಂ ಅವರ ವಾಚನದ ಬಹುಪಾಲು ವಿಜ್ಞಾನ ವಿಷಯಕ್ಕೇ ಮೀಸಲಾಗಿಟ್ಟಿತು. ಅವರೇನೂ ವಿಜ್ಞಾನವನ್ನು ಕಾಲೇಜ ಮಟ್ಟದಲ್ಲಿ ಓದಿದವರಲ್ಲ. ಈಗ ಅಂಥ ಬರಹಗಳನ್ನು ಇಂಗ್ಲಿಷ್‌ನಲ್ಲಿ ಓದಿ ತಾವು ಅದನ್ನು ಮೊದಲಿಗೆ ಅರ್ಥ ಮಾಡಿಕೊಳ್ಳಬೇಕಿತ್ತು. ಅದರ ವಿಷಯ ಪೂರ್ಣತೆಗೆ ಬೇರೆ ಲೇಖಗಳನ್ನು 'ಓದಬೇಕಿತ್ತು, ಕನ್ನಡ ಪಾರಿಭಾಷಿಕ ಪದಗಳನ್ನು ಸೃಷ್ಟಿಸಿಕೊಂಡು ಆಮೇಲೆ ಕನ್ನಡ ಲೇಖವಾಗಿ ಸಿದ್ಧಗೊಳಿಸಬೇಕು. ಪಾವೆಂ ಮೊದಲ ಸಂಚಿಕೆಯಿಂದ ಹಿಡಿದು ೧೮ ವರ್ಷಗಳ ಪರ್ಯಂತ ಹಾಗೇ ಮಾಡಿದ್ದಾರೆ. ಆ ಲೆಕ್ಕದಲ್ಲಿ ಕನ್ನಡದ ಗಣ್ಯ ವಿಜ್ಞಾನ-ಲೇಖಕರೆಂದೇ ಪರಿಗಣಿಸತಕ್ಕದ್ದು.

ಅವರು ಪ್ರಾಯಶಃ ವಿಜ್ಞಾನದ ಎಲ್ಲ ಪ್ರಕಾರಗಳಲ್ಲಿಯೂ ಕೈಯಾಡಿಸಿದ್ದಾರೆ. ಖಗೋಳಶಾಸ್ತ್ರ ಭೂ ಭೌತಿಕ, ಸಸ್ಯ-ಪ್ರಾಣಿ ಪ್ರಪಂಚ. ಜೊತೆಗೆ ಮನೋವಿಜ್ಞಾನ, ಲೈಂಗಿಕ ವಿಜ್ಞಾನಗಳೂ ಅವರ ಗಮನವನ್ನು ಸೆಳೆದಿವೆ. ಆದರೆ ಈ ವಿಜ್ಞಾನ ಲೇಖನ ಸಮುದಾಯದಲ್ಲಿ ವೈದ್ಯಕೀಯಕ್ಕೆ ಹೆಚ್ಚಿನ ಪಾಲು ಸಂದಿದೆ. ರೋಗಗಳ ಸ್ವರೂಪವನ್ನೂ ತಿಳಿದು ಜನ ಆರೋಗ್ಯವಂತರಾಗಿ ಬಾಳಬೇಕೆಂಬ ಸದಾಶಯವನ್ನು ನಾವು ಅಲ್ಲಿ ಗುರುತಿಸಬಹುದು. ಕೆಲವು ಪ್ರಸಿದ್ಧ ವಿಜ್ಞಾನಿಗಳ ಸಾಧನೆಯನ್ನು ವಿವರಿಸುವ ಚರಿತ್ರೆಗಳನ್ನೂ ಬರೆದಿದ್ದಾರೆ.

'ಕಸ್ತೂರಿ' ನಿಮಿತ್ತದ ಅವರ ಪತ್ರಿಕಾಧರ್ಮವನ್ನು ತುಸು ವಿವರಿಸಬೇಕು. ಈಗಿನ ಪತ್ರಿಕಾವೃತ್ತಿಯೆಂದರೆ ತತ್ಕಾಲದ ಸಂಚಿಕೆಗೆ ಏನು ಬೇಕೊ ಅದನ್ನು ಸೆಳೆದುಕೊಂಡು, ಎಷ್ಟು ಬೇಕೊ ಅಷ್ಟಕ್ಕೇನೆ ಗೀಚುವುದನ್ನು ಮುಗಿಸಿ, ಆಮೇಲೆ ಆ ಲೇಖವನ್ನು (ಆ ಲೇಖಕನನ್ನೂ) ಮರೆತುಬಿಡುವುದಾಗಿದೆ. ಪಾ.ವೆಂ. ಅವರಿಗೆ ಅದೊಂದು ಶ್ರದ್ಧೆಯಿಂದ ಮಾಡಬೇಕಾದ ಧರ್ಮಕಾ

ರ್ಯವೇ ಎಂಬಂತಿದ್ದಿತು. ವಿಷಯವೊಂದರ ಬಗ್ಗೆ ಕುತೂಹಲದ ಆಸಕ್ತಿ ಮೂಡಿತೆಂದರೆ ತಾವು ಪೂರ್ವಭಾವಿಯಾಗಿ ತಿಳಿದುಕೊಂಡು ಸೂಕ್ತ ಲೇಖಕರನ್ನು ಹುಡುಕುತ್ತಿದ್ದರು. ಅವರಿಂದ ಬರೆಯಿಸುವುದು, ಅದರ ಸುಧಾರಣೆಗೆ ಸಲಹೆ ಕೊಟ್ಟು ಮತ್ತೆ ಬರೆಯಿಸುವುದು, ಅನಂತರವೇ ಅದನ್ನು ಪ್ರಕಟಿಸುವುದಾಗಬೇಕು. ಈ ಸಂದರ್ಭದಲ್ಲಿ ಪಾ.ವೆಂ. ಹಿರಿಕಿರಿಯರೆನ್ನದೆ ಸತತವಾಗಿ ಪತ್ರವ್ಯವಹಾರ ಮಾಡುತ್ತಿದ್ದರು. ಹಳೆಯ 'ಕಸ್ತೂರಿ'ಯ ಲೇಖಕರು ಯಾರನ್ನು ಕೇಳಿದರೂ ಪಾ.ವೆಂ. ಅವರ ಈ ವಿಶೇಷತೆಯನ್ನು ಬಾಯ್ತುಂಬ ಹೊಗಳುತ್ತಾರೆ.

ಕಸ್ತೂರಿ ವಸ್ತುಶಃ ಡೈಜೆಸ್ಟ್ ಪತ್ರಿಕೆ. ನಾನಾ ಕಡೆಗಳಿಂದ ಮಧುವನ್ನು ತಂದು ಇರಿಸಿದ ಜೇನ್ಗೂಡಿನ ಹಾಗೆ. ಪಾವೆಂ ಅವರ ಮೇಲ್ಕಂಡ ಪತ್ರಿಕಾಧರ್ಮದಿಂದಾಗಿ ಆ ಜೇನುತುಪ್ಪ ತರುಣರಿಂದ ಮುದುಕರ ವರೆಗೆ ಸರ್ವಗ್ರಾಹ್ಯವಾಯಿತು.

ಈ 'ಕಸ್ತೂರಿ' ಪತ್ರಿಕೆಯೇ ಅವರ ಶಬ್ದಾಸಕ್ತಿಗೆ ಪುಟಕೊಟ್ಟಿತು. ಮುದ್ದಣ, ಗೋವಿಂದ ಪೈಗಳಂಥ ಶಬ್ದಾಸಕ್ತರು ಬಾಳಿದ ಪ್ರದೇಶದಿಂದ ಅವರು ಬಂದವರಾಗಿ, ಅವರಲ್ಲಿ ಈ ಪ್ರವೃತ್ತಿ ಮೊದಲಿನಿಂದಲೇ ಇದ್ದಿರಬೇಕು. ಕಸ್ತೂರಿಯ ಆರಂಭದ ಸಂಚಿಕೆಗಳಲ್ಲಿ ಕ್ರಮವಾಗಿ ಬರತೊಡಗಿದ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ಎಂಬುದರಲ್ಲಿ ಅನಂತರ ಬರತೊಡಗಿದ 'ಪದ-ಅರ್ಥ ಚಿಂತಾಮಣಿಯ' ನಿಯಮಿತ ವಿವೇಚನೆಯಲ್ಲಿ ಅದು ಸುವ್ಯಕ್ತವಾಗಿದೆ. ಶಬ್ದದ ಪೂರ್ವಾಪರ, ಅದರ ಜ್ಞಾತಿಪದಗಳು, ಅದರಿಂದ ತಿಳಿದು ಬರುವ ಸಾಂಸ್ಕೃತಿಕ ಅಂಶಗಳು ಇವುಗಳ ಆಳಕ್ಕೆ ಇಳಿದು 'ಚಿಂತಾಮಣಿ' ರತ್ನವನ್ನೇ ಹೊರತೆಗೆದರೆನ್ನಬೇಕು. ಇಲ್ಲಿ ಶಬ್ದಗಳ ಗಂಟನ್ನು ಬಿಚ್ಚುವುದಲ್ಲದೆ, ಅನ್ಯ ಭಾಷಾ ಶಬ್ದಗಳ ನಂಟನ್ನು ತೋರ್ಪಡಿಸಿದ್ದು ಕಂಡು ಬರುತ್ತದೆ. ಈ ವೈದುಷ್ಯದಿಂದಾಗಿ ಕಿಟೆಲ್, ಡಿ.ಎಲ್ ನರಸಿಂಹಾಚಾರ್ಯ ಮತ್ತು ಜಿ. ವೆಂಕಟಸುಬ್ಬಯ್ಯ ಇವರಿಗೆ ಸಮನಾಗಿಯೇ ಪಾ.ವೆಂ. ಅವರನ್ನು ಹೆಸರಿಸಬೇಕಾಗುವುದು.

ಪಾ.ವೆಂ. ಅವರ ಇನ್ನೊಂದು ವಿಶೇಷತೆ ಎಂದರೆ ಹತ್ತಾರು ವಿಷಯಗಳಲ್ಲಿ ಏಕಕಾಲಕ್ಕೆ ಚಿಂತನೆ ನಡೆಸುತ್ತಿದ್ದುದು. ಬರಹವಂತೂ ಸರಿಯೇ, ಅವರೊಡನೆ ಮಾತಿಗೆ ನಿಂತಾಗಲೂ ಇದು ಮನವರಿಕೆಯಾಗುವಂತಿತ್ತು. ವಿಧವಿಧವಾದ, ಎಷ್ಟೋ ಸಲ ಒಂದಕ್ಕೊಂದು ಸಂಬಂಧವಿಲ್ಲ ಎನಿಸುವಂತಹ ವಿಚಾರಗಳು ಕಾರಂಜಿಯ ನೀರಿನಂತೆ ಚಿಮ್ಮುತ್ತಿದ್ದುವು. ಸ್ಫುರಣ ಎನ್ನುವುದು ಹೀಗೆ ಕಾಣಿಸಿಕೊಳ್ಳುವುದಲ್ಲವೆ, ಈ ಸ್ಫುರಣವೇ ನವನವೋನ್ಮೇಷ ಶಾಲಿನಿಯಾದ ಪ್ರತಿಭೆ ಎನಿಸಿಕೊಳ್ಳುತ್ತದೆ. ಇಂಥ ಪ್ರತಿಭೆ ಬೇಂದ್ರೆಯವರಲ್ಲಿ ಇದ್ದಿತು. ಅವರ ಅನಂತರ ಹೆಸರಿಸಬೇಕಾದವರು ಪಾ.ವೆಂ. ಆಚಾರ್ಯರೇ.

ಪಾ. ವೆಂ. ಆಚಾರ್ಯರು ಕಲಿತದ್ದು ಕಡಿಮೆ, ಓದಿದ್ದೇ ಜಾಸ್ತಿ. ಅವರ ಈ ಓದು ಬಿಡುವರಿಯದ್ದು. ಅದೇನೂ ವ್ಯವಸ್ಥಿತವಾದದ್ದಲ್ಲ. ಆದರೆ ಓದಿದನ್ನು ತಮ್ಮ ಬೌದ್ಧಿಕ ಜರಡಿಯಲ್ಲಿ ಹಿಡಿದು ಗಟ್ಟಿಯಾದ ಆಲೋಚನೆಗಳನ್ನಷ್ಟೆ ಉಳಿಸಿಕೊಂಡರು. ಇನ್ನು ಸಮಕಾಲೀನ ಘಟನೆಗಳಿದ್ದರೆ ತೀವ್ರ ಪ್ರಭಾವಕ್ಕೊಳಗಾಗುತ್ತಿದ್ದರು. ಅನಂತರದ ತಮ್ಮ ಪ್ರತಿಕ್ರಿಯೆಯನ್ನು, ಹಿಂದು ಮುಂದುಗಳನ್ನು ಪರಾಮರ್ಶಿಸಿ, ಸಾರಾಸಾರ ವಿವೇಕದಿಂದ ನಿರೂಪಿಸುತ್ತಿದ್ದರು. ಈ ಕ್ರಮದಲ್ಲಿ ಸ್ವಂತ ಅಭಿರುಚಿ. ಮತ್ತು ಸ್ವತಂತ್ರ ದೃಷ್ಟಿ ಇವನ್ನು ತಮ್ಮ ಬದುಕು ಮತ್ತು ಬರಹಗಳಲ್ಲಿ ಉಳಿಸಿಕೊಂಡಿದ್ದರು.

ಇನ್ನೀಗ ಹರಟೆಗಳು. ಅವರ ಒಟ್ಟಿನ ಕೃತಿರಚನೆಯ ದೊಡ್ಡ ಮೊತ್ತ 'ಲಾಂಗೂಲಾ

ಚಾರ್ಯ' ಹೆಸರಿನ ಹರಟೆಗಳಿದ್ದೇ. ಐದುನೂರನ್ನು ಮಿಕ್ಕಿದ ಇಷ್ಟೊಂದು ಹರಟೆಗಳನ್ನು ಕನ್ನಡದಲ್ಲಿ ಬೇರಾರೂ ಬರೆದಂತಿಲ್ಲ, ಹೆಚ್ಚಿನವು ಕರ್ಮವೀರದಲ್ಲಿ ಬಂದವುಗಳು.

ಹರಟೆ ಬರೆಯುವುದಕ್ಕೆ ಏನಾದರೊಂದು ಪ್ರಕೋಪನ (Provocation) ಬೇಕು. ಒಂದು ಯಃಕಶ್ಚಿತ ಘಟನೆ, ಸಣ್ಣ ವಿಚಾರ ಇಲ್ಲವೆ ಆಡಿದ ಒಂದು ಮಾತು. ಇಷ್ಟರ ಮಟ್ಟಿಗಿನ ಪ್ರಕೋಪನೆ ಅವರಿಗೆ ಸಾಕಿತ್ತು. ಹಾಗೆ ಆರಂಭಿಸಿ ತಮ್ಮ ಬಹುಶ್ರುತತ್ವದ ಬೆಂಬಲದಿಂದ ವಿಷಯವನ್ನು ವ್ಯಂಗ್ಯದ ಧಾಟಿಯಲ್ಲಿಯೆ ಮುಂದುವರಿಸುತ್ತಿದ್ದರು.

ಅನೇಕ ಹರಟೆಗಳ ಶೀರ್ಷಿಕೆಗಳೇ ಪ್ರಚೋದಕವಾಗಿವೆ. 'ನಗ್ನಾಪರಾಧ', 'ಗೋಹತ್ಯೆ ಮಾಡಿರಿ' 'ಮನುಷ್ಯ ನಗದಿದ್ದರೆ', 'ಶ್ಮಶ್ರು (ಗಡ್ಡ) ಚಿಂತಾರತ್ನಂ', 'ನೀವು ಹೆಂಡತೀನ್ನ ಹೊಡೆಯುವುದನ್ನು ಬಿಟ್ಟಿದ್ದೀರಾ?

ಅವರ ಯಾವ ಹರಟೆಯನ್ನು ತಗೊಂಡರೂ, ಅದರ ವಿಸ್ತಾರ ವ್ಯಾಸಂಗದ ಮಾರ್ಪೂಳಪು ಇದ್ದೇ ಇರುತ್ತದೆ. ಪಾಶ್ಚಾತ್ಯ ವಿದ್ವಾಂಸರ, ವಿಚಾರವೇತ್ತರ ಹೆಸರುಗಳು (ಕೆಲವನ್ನು ನಾವು ಕೇಳಿಯೆ ಇಲ್ಲದವು ಉದಾಗೆ ರೋಸ್ಟ್ಯಾಂಡ್ ಯಾರೀತ?) ಮಿಂಚಿನಂತೆ ಕಾಣಿಸಿಕೊಂಡು ಮಾಯವಾಗುತ್ತವೆ. ಹಾಗೇನೆ ಕವಿವರ್ಯರ ಉಕ್ತಿಗಳು, ಅವರ ಬತ್ತಳಿಕೆಯಲ್ಲಿ ಸದಾ ಸಿದ್ಧವಿದ್ದು ನಿರಾಯಾಸವಾಗಿ ಸದ್ದಿಲ್ಲದೆ ಹೊರಬರುತ್ತವೆ. 'ಚಂದ್ರಲೋಕದಲ್ಲಿ ಮೈಭಾರ ಕಡಿಮೆಯಾಗಿ ಯಾರೂ ಜಿಗಿಯಬಹುದು, ಹೈಜಂಪ್‌ನವರು ಹಾರಬಹುದು' ಎಂದು ವಿಜ್ಞಾನಿಗಳು ಹೇಳುತ್ತಾರಲ್ಲದೆ, ಆಗ ಪಾ.ವೆಂ. ಅವರಿಗೆ ಕುವೆಂಪು ಕವನದ ಸಾಲೊಂದು ನೆನಪಾಯಿತು. ನೀ ಹಾರಬಲ್ಲೆಯ ನಾನೇರುವೆತ್ತರಕೆ?

ಕವಿ ಬೇಂದ್ರೆ ಕಾಣಿಸಿಕೊಳ್ಳುವ ಬಗೆಗೆ ವಿಶಿಷ್ಟವಾದುದು. 'ಶ್ರೀ ಮನ್ನಾರಾಯಣನ ನಿವೃತ್ತಿ' ಎಂಬ ಪ್ರಬಂಧವಿದೆ. ನಿವೃತ್ತಿಯ ಅಪೇಕ್ಷೆಗೆ ಏನು ಕಾರಣ? ದೇವದೇವತೆಗಳು ನಿಷ್ಕ್ರಿಯರಾಗಿ 'ಕೊಳೆಯದ ಶವ'ದಂತಾಗಿದ್ದಾರೆ ಎಂದು ತನ್ನ ಕಾರಣ ಕೊಡುತ್ತಾನೆ. ಅದನ್ನು ಓದಿದ ನಾರದರಿಗೆ ಈ ಕೊಳೆಯದ ಶವ ಎಂಬ ಪದವನ್ನು ಎಲ್ಲಿಯೊ ನೋಡಿದ ಹಾಗಿದೆ- ಎಂದೆನಿಸಿತಂತೆ? ಹಾಂ ಹೊಳೆಯಿತು! ಬೇಂದ್ರೆಯವರು ಈ ಶಬ್ದವನ್ನು Coin ಮಾಡಿದ್ದು- ಅದನ್ನು ಎತ್ತಿಕೊಂಡು ಶ್ರೀಮನ್ನಾರಾಯಣನು ಕೃತಿಚೌರ್ಯ ಮಾಡಿದನಲ್ಲವೆ- ಎಂಬುದಾಗಿ ಯೋಚಿಸುತ್ತಾರಂತೆ.

ಹೋಲಿಕೆಗಳಿಂದ ಹಾಸ್ಯವನ್ನು ಹೊರಹೊಮ್ಮಿಸುವುದು ಪಾವೆಂ ಅವರ ಒಂದು ವೈಶಿಷ್ಟ್ಯ. ಸ್ತ್ರೀ ಮಗುವಿಗೆ ಮುತ್ತುಕೊಡುತ್ತಾಳೆ. ತನ್ನ ಪ್ರಿಯಕರನಿಗೂ ಕೊಡುವಳು- ಎನ್ನುವ, ಎರಡರಲ್ಲಿಯೂ ಸುಖವಿದೆ. ಆದರೆ ಬಹಿರಂಗವಾಗಿ ಕೊಟ್ಟಾಗ? ಒಂದನೆಯದು ಸಹ್ಯ, ಎರಡನೆಯದು ಅಪರಾಧ. ಅದರಂತೆ ನೊಣ, ಸೊಳ್ಳೆಗಳ ಉಪದ್ರವದ ಹೋಲಿಕೆ, ಮನುಷ್ಯನಿಗೆ ಸೊಳ್ಳೆಯ ಕಡಿತ ಸಮರ್ಥನೀಯ, ಏಕೆಂದರೆ ಅವುಗಳಿಗೆ ಹಸಿವಾಗಿರುತ್ತದಂತೆ. (ಹಾಗೆ ಕಚ್ಚುವುದು ಯಾವಾಗಲೂ ಹೆಣ್ಣು ಸೊಳ್ಳೆಯೇ. ಹೇಗಿದ್ದರೂ ಸ್ತ್ರೀಯರೇ ಪುರುಷರ ರಕ್ತ ಹೀರುವವರು ಎಂಬುದು ಪಾವೆಂ ಅವರ comment). ಈ ಹೋಲಿಕೆಯಲ್ಲಿ ನೊಣ ದೋಷಿಯಾಗಿ ಕಂಡಿದೆ. 'ಎಲ್ಲ ಹೇಡಿಗಳಂತೆ ನೊಣಗಳು ಕತ್ತಲೆಗೆ ಅಂಜುತ್ತವೆ' ಎಂಬ ನಿಂದನೆ ಬೇರೆ. ಅಂದಹಾಗೆ ಈ ಪ್ರಬಂಧದಲ್ಲಿ ಬಲಾಢ್ಯನಾದ ಚೆಂಗೀಸಖಾನನೂ ಅನುಭಾವಿ ಗೋರಖನಾಥನೂ ಕಾಣಿಸಿಕೊಳ್ಳುತ್ತಾರೆ. ಏಕೆಂದು ಕೇಳಬೇಡಿರಿ, ಓದಿ ನೋಡಿರಿ.

ಹೀಗೆ ಒಂದೊಂದು ಹರಟೆಯೂ ತನ್ನಷ್ಟಕ್ಕೆ ಪೂರ್ವ ಸ್ವರೂಪವಿದ್ದು, ಅವನ್ನು ಇಡಿಯಾಗಿ ಓದಿಯೇ ಸವಿಯಬೇಕು, ಮನಸಾರೆ ನಗಬೇಕು. ಆದರೆ ಈ ನಗೆ ಕಚಗುಳಿಯದಲ್ಲ. 'ಹೊಟ್ಟೆ ಹುಣ್ಣಾಗುವಂತೆ' ಅವು ನಗಿಸುವುದಿಲ್ಲ. ಯಾರೊಬ್ಬರನ್ನು ಚುಚ್ಚಿ, ಅಣಕವಾಗುವ ಬಗೆಯೂ ಇಲ್ಲ. ಹಾಗೆ ನಗಿಸುವ ಹರಟೆಗಳು ಆ ಮಟ್ಟಿಗೆ ಮಾತ್ರ ನಗಿಸಿ, ಮರೆತುಹೋಗುತ್ತವೆ. ಪಾ.ವೆಂ. ಹರಟೆಗಳು ಆ ಪ್ರಕಾರವಲ್ಲ. ಹಾಗೆಂದು ಅವು ಗೊಡ್ಡು ಹರಟೆಗಳಂತೂ ಸರ್ವಥಾ ಅಲ್ಲ. ಅವರ ಬಹುಶ್ರುತತ್ವದಿಂದಾಗಿ ಸುತ್ತೆಲ್ಲ ಅರಳಿಕೊಂಡು ಮನಸ್ಸನ್ನು ಮುದಗೊಳಿಸುತ್ತವೆ. ಮಂದಹಾಸ ನಮ್ಮ ಮುಖದಲ್ಲಿ ತೇಲುವಂತೆ ಮಾಡುತ್ತವೆ. ಅವರ ಈ ಬೌದ್ಧಿಕ ಹಿನ್ನೆಲೆಯಿಂದಾಗಿ ಬಹು ಕಾಲ ನೆನಪಿನಲ್ಲಿ ಉಳಿಯುತ್ತವೆ, ಮೆಲುಕು ಹಾಕುವಂತೆ ಮಾಡುತ್ತವೆ.

ಪ್ರಸ್ತುತ ಹರಟೆಗಳ ಸಂಗ್ರಹದಲ್ಲಿ ಒಂದು ವಿಶೇಷತೆ ಇದೆ. ಅವೆಲ್ಲ ಸಾಹಿತ್ಯಿಕ ಹಿನ್ನೆಲೆಯಿದ್ದವುಗಳು, ಆದರೆ ಮೇಲೆ ಹೇಳಿದಂತೆ ಸಾಹಿತ್ಯಾಂಶವು ಒಂದು ಪ್ರಕೋಪನವಾಗಿ ಬಂದಿದೆ. ಮತ್ತೆ ಎಲ್ಲೆಲ್ಲಿಯೋ ವಿಷಯ ಸಂಚಾರವಾಗಿದೆ.

ಪಾ.ವೆಂ. ಅವರ ಒಂದು ಹರಟೆಗಳ ಸಂಗ್ರಹವನ್ನು ಅನೇಕ ವರ್ಷಗಳ ಹಿಂದೆ ಲೋಕಶಿಕ್ಷಣ ಟ್ರಸ್ಟ್ ಪ್ರಕಟಿಸಿದ್ದಿತು. ಅದರ ಹೆಸರು 'ಪ್ರಹಾರ' ಎಂಬುದು.

ಈ ಸಂಗ್ರಹಕ್ಕೆ ನಾವು ಕೊಟ್ಟ ಹೆಸರು 'ಓದುಗರೊಡನೆಯ ಹರಟೆಗಳು'. ಕಾರಣವೆಂದರೆ ಅವರು ಹರಟೆಗಳನ್ನು ಬರೆಯಲು ಆರಂಭಿಸಿದ್ದು, ಕರ್ಮವೀರದಲ್ಲಿ 'ಓದುಗರೊಡನೆ ಹರಟೆ' ಎಂದೇ. ಮತ್ತು ಇಲ್ಲಿಯ ಹರಟೆಗಳು ಹೆಚ್ಚಾಗಿ ಆಗಿನವೇ ಆಗಿವೆ.

ಇದನ್ನು ಪ್ರಕಟಿಸಲು ಸ್ವಸಂತೋಷದಿಂದ ಮುಂದೆ ಬಂದ ಟ್ರಸ್ಟಿನ ಪದಾಧಿಕಾರಿಗಳಿಗೆ ಪಾ.ವೆಂ. ವಿಶ್ವಸ್ಥ ಸಮಿತಿಯು ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

-ಡಾ. ಶ್ರೀನಿವಾಸ ಹಾವನೂರ

ಮಂಗಳೂರು

ಪರಿವಿಡಿ

೧. ಕನ್ನಡ! ಕನ್ನಡ? ಇದೆಲ್ಲಾವುಂ ಎನ್ನಡ?

ಕನ್ನಡ ಆಡಳಿತ ಭಾಷೆ ಆಗಬೇಕು. ಕನ್ನಡ ಶಿಕ್ಷಣದ ಭಾಷೆ ಆಗಬೇಕು- ಅಂತ ಮಂಡ್ಯದಲ್ಲಿ ಸೇರಿದ ಸಾಹಿತಿಗಳು ನಿರ್ಣಯ ಮಾಡಿದರು. ಸರಕಾರದವರು ಇದನ್ನೆಲ್ಲ ಇಷ್ಟು ಕಾಲ ಒಪ್ಪಿದ ಹಾಗೆ ಮಾಡಿಕೊಂಡು ಆಮೇಲೆ ಮರೆತು ಬಿಡುತ್ತಿದ್ದರು. ಈಗೇನೋ ಇದನ್ನು ಜಾರಿ ಮಾಡಿಬಿಡುತ್ತಾರೋ ಅನ್ನುವ ಭಯ ಲಾಂಗೂಲಾಚಾರ್ಯರಿಗೆ ಹುಟ್ಟಿದೆ. ಯಾಕೆಂದರೆ ಸಾಹಿತಿಗಳ ಈ ಕೂಟಕ್ಕೆ ಹಿಂದೆಂದೂ ಕಂಡು ಕೇಳಿರದಷ್ಟು ಮಂತ್ರಿಗಳು ಪಾದ ಬೆಳೆಸಿದ್ದರು. ಐ.ಎ.ಎಸ್. ಅಧಿಕಾರಿಗಳು ಕೂಡ ಭಾಷಣ ಕುಟ್ಟಿದ್ದರು. ಲಕ್ಷಣ ಚೆನ್ನಾಗಿಲ್ಲ: ಈ ಸಲ ಇವರು ಏನಾದರೂ ಮಾಡಿಯೇ ಕೈತೊಳೆದುಕೊಳ್ಳುತ್ತಾರೆ ಅಂತ ತೋರುತ್ತದೆ. ಈ ಸಂದರ್ಭದಲ್ಲಿ ಈ ಬಗೆಯಾಗಿ ಕತ್ತಲಲ್ಲಿ ಬಾವಿಗೆ ಹಾರಿಕೊಳ್ಳುವುದನ್ನು ತಪ್ಪಿಸಲು ಲಾಂಗೂಲಾಚಾರ್ಯರು ತಮ್ಮ ಖಡ್ಗ-ಅಂದರೆ ಬಾಲ್‌ಪೆನ್ನು-ಎತ್ತಲೇಬೇಕು ಎಂದು ಅವರ ಆತ್ಮಸಾಕ್ಷಿ ಅಪ್ಪಣೆ ಕೊಡುತ್ತಾ ಇದೆ; ಇದು ಅತ್ಯಂತ ಅಪಾಯಕಾರಿಯಾದ ಕ್ರಮ ಅಂತ ಆಚಾರ್ಯರು ಎಚ್ಚರಿಕೆ ಕೊಡಬಯಸುತ್ತಾರೆ.

ಕೆಲವೇ ಉದಾಹರಣೆಗಳನ್ನು ಎತ್ತಿ ತೋರಿಸಲು ಇಲ್ಲಿ ಸಾಧ್ಯ. ಇಲ್ಲಿ ನೋಡಿ.

"ಮೊದಲನೆಯದಾಗಿ ಕಾವೇರಿಯಿಂದ ಮಾ ಗೋದಾವರಿವರಮಿರ್ಪ ನಾಡದಾ" ನಮ್ಮೀ ಕನ್ನಡ ನಾಡು. ಪ್ರಾಚೀನ ಕಾಲದಿಂದಲೂ ಸಕಲ ಧರ್ಮ, ಭಾಷೆ, ಸಂಸ್ಕೃತಿಗಳಿಗೆ ಆಶ್ರಯ ಕೊಡುತ್ತ ಬಂದಿದೆ. ಬೇಕಾದವರು ನಮ್ಮ ಎದೆಯ ಮೇಲೆ ನಡೆಯಲಿ ಎನ್ನುವುದೇ ನಮ್ಮ ಪುರಾತನ ಸಂಸ್ಕೃತಿ. ಈಗ ನಾವು ನಮ್ಮ ಭಾಷೆಯಲ್ಲೇ ಆಡಳಿತ ಆರಂಭಿಸಿದರೆ ಈ ಅನಾದಿ ಸಂಸ್ಕೃತಿಗೆ ತಿಲಾಂಜಲಿ ಕೊಟ್ಟಂತಾಗುತ್ತದೆ. ಇನ್ನುಮುಂದೆ ಇಲ್ಲಿ ಹೊರಗಿನವರು ಬಂದು ನಮ್ಮೆದೆಯ ಮೇಲೆ ತಮ್ಮ ಶ್ರೀಪಾದಗಳನ್ನು ಊರಲು ಹಿಂದೇಟು ಹಾಕಬಹುದು. ಕರ್ನಾಟಕ ದಲ್ಲಿ ಕನ್ನಡ ಹೊರತು ಮತ್ತೆಲ್ಲಾ ಭಾಷೆಗಳು ನಡೆಯುತ್ತವೆ ಎಂಬ ಕೀರ್ತಿ ಕಣ್ಮರೆಯಾಗುತ್ತದೆ. ಕೀರ್ತಿ ಹೋದಮೇಲೆ ನಾವು ಇದ್ದರೇನು, ಇಲ್ಲದಿದ್ದರೇನು?

ಈ ದೇಶಕ್ಕೆ ಅನೇಕಾನೇಕ ವಿದೇಶೀ ಪ್ರವಾಸಿಗರು ಬರುತ್ತಾರೆ. ನಮ್ಮ ಬೆಂಗಳೂರಿನ ಹವೆಯ ಕೀರ್ತಿ ಕೇಳಿ ಅಲ್ಲಿಗೂ ಬರುತ್ತಾರೆ. ಬೆಂಗಳೂರಲ್ಲಿ ಹೆಸರಿಸತಕ್ಕವರಿಗೆಲ್ಲ ಇಂಗ್ಲಿಷು ಬರುವುದರಿಂದ ಈ ವಿದೇಶೀಯರಿಗೆ ಇಲ್ಲಿ ಬಹಳ ಅನುಕೂಲವಾಗುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ವಿದೇಶೀ ಗೂಢಚಾರರೂ ಇಲ್ಲಿ ಬಂದು ಸೇರಿಕೊಂಡಿರುತ್ತಾರೆ. ಸಿ.ಐ.ಎ., ಓ.ಜಿ.ಪಿ.ಯು ಇತ್ಯಾದಿ ಇತ್ಯಾದಿಗಳ ಏಜೆಂಟರುಗಳೆಲ್ಲ ಇಲ್ಲಿರುತ್ತಾರೆ. ನಮ್ಮ ಆಡಳಿತ, ಶಿಕ್ಷಣ ಇವೆಲ್ಲವೂ ಇಂಗ್ಲಿಷಿನಲ್ಲಾಗುವುದರಿಂದ ಅವರಿಗೆಲ್ಲ ತಮಗೆ ಬೇಕಾದ ವಿಷಯಗಳೆಲ್ಲ ತಮಗೆ ಗೊತ್ತಿರುವ ಭಾಷೆಯಲ್ಲೇ ಸಿಗುತ್ತವೆ. ಈಗ ನೀವು ಕನ್ನಡದಲ್ಲೇ ಎಲ್ಲಾ ಆಡಳಿತವನ್ನು ಪ್ರಾರಂಭಿಸಿದರೆ ಈ ಜನರಿಗೆ ತುಂಬಾ ಕಷ್ಟವಾಗುತ್ತದೆ. ಅವರು ಕನ್ನಡವನ್ನು ಕಲಿಯಬೇಕಾ ಗುತ್ತದೆ. ಪ್ರತಿಯೊಂದು ರಾಜ್ಯವೂ ತನ್ನದೇ ಭಾಷೆಯಲ್ಲಿ ಆಡಳಿತ ಪ್ರಾರಂಭಿಸಿದರೆ ಈ ಬಡ ಪಾಯಿ ಗೂಢಚಾರರ ಕಷ್ಟವನ್ನು ನೀವೇ ಊಹಿಸಿಕೊಳ್ಳಬಲ್ಲಿರಿ. ಈವರೆಗೆ ಅವರು ಇಂಗ್ಲಿಷಿನಲ್ಲಿ ತಾವು ಬರೆದದ್ದನ್ನು ನಮ್ಮವರಿಗೆ ತಿಳಿಸಲು ಅನುವಾದಕರನ್ನು ನೇಮಿಸಿಕೊಳ್ಳುತ್ತಿ ದ್ದರು. ಇನ್ನು ಕನ್ನಡ, ಮರಾಠಿ, ತಮಿಳು ಇತ್ಯಾದಿ ಇತ್ಯಾದಿಗಳಿಂದ ಇಂಗ್ಲಿಷು, ರಶಿಯನ್,

ಫ್ರೆಂಚು ಮೊದಲಾದವುಗಳಿಗೆ ಭಾಷಾಂತರ ಮಾಡಿ ತಮ್ಮ ದೇಶಗಳಿಗೆ ಕಳಿಸಲು ಬೇರೆಬೇರೆ ಜನರನ್ನು ನೇಮಕ ಮಾಡಬೇಕಾಗುತ್ತದೆ. ಈ ಪರಿಸ್ಥಿತಿಯಿಂದ ನಮ್ಮ ವಿದೇಶ ಸಂಬಂಧದ ಮೇಲಾಗಬಹುದಾದ ಪರಿಣಾಮಗಳನ್ನು ನೆನೆದರೆ ಹೆದರಿಕೆಯಾಗುತ್ತದೆ. ನಿಕ್ಸನ್ನರು ನಮ್ಮ ಯೋಜನೆಗಳಿಗೆ ಹಣ ನಿರಾಕರಿಸಬಹುದು ಅಥವಾ ತಮ್ಮ ಏಳನೇ ನೌಕಾಪಡೆಯನ್ನೇ ಕಳಿಸ ಬಹುದು.

ಅದು ಹೋಗಲಿ, ಅದು ಕೇಂದ್ರ ಸರಕಾರದ ತಲೆನೋವು, ನಮಗೇನು ಅನ್ನುತ್ತೀರಾ? ಕನ್ನಡವನ್ನು ಆಡಳಿತ ಭಾಷೆ ಮಾಡಿದರೆ ಆಡಳಿತ ದಕ್ಷವಾಗಿ ನಡೆಯುವುದೇ ಕಷ್ಟವಾದೀತು. ಕನ್ನಡದಲ್ಲಿ ಸರಿಯಾದ ಅರ್ಥಪೂರ್ಣ, ಭಾವಪೂರ್ಣ ಶಬ್ದಗಳೇ ಇಲ್ಲ. ಇಂಗ್ಲಿಷು ಬಾರದವರಿಗಾಗಿ ಕವಿತೆ ಬರೆಯಲಿಕ್ಕೆ ಮಾತ್ರ ಬರುವ ಭಾಷೆ ಅದು. ಉದಾಹರಣೆಗೆ ಮೇಲಧಿಕಾರಿಗೆ ಕೆಳಗಿನವನನ್ನು ಕರೆದು ಗದರಿಸಬೇಕಾಗಿದೆ ಅನ್ನಿ. What is this nonsense! ಎಂದು ಕೇಳುತ್ತಾನೆ. ಈಗ nonsenseಗೆ ಸರಿಯಾದ ಶಬ್ದ ಕನ್ನಡದಲ್ಲಿ ಎಲ್ಲಿದೆ? ಯಾರಾದರೂ ಹೇಳಲಿ. ಅರ್ಥಹೀನ, ಬುಡುಬುಡಿಕೆ, ತೊಳಲೊಟ್ಟೆ ಇತ್ಯಾದಿ ಯಾವ ಶಬ್ದವೂ non-senseನ ಅರ್ಥವನ್ನು ಕೊಡುವುದಿಲ್ಲ. ಜವರಾಸಿಯನ್ನು bloody fool ಅಂತ ಬೈಯಬೇಕಾಗಿದ್ದರೆ, ಅಧಿಕಾರಿ ಕನ್ನಡದಲ್ಲಿ ಏನು ಹೇಳಬೇಕು? ರಕ್ತ ಸುರಿಸುವ ದಡ್ಡ ಅನ್ನೋದೇ? ಅದು ಹೋಗಲಿ. ಆಫೀಸಿಗೆ ಬಂದು ತೊಂದರೆದಾಯಕ ಪ್ರಶ್ನೆಗಳನ್ನು ಕೇಳುವ ಪ್ರಜೆಗೆ get out! ಎಂದು ಕೂಗಬೇಕಾದರೆ ಹೇಗೆ ಸ್ವಾಮಿ ಅಷ್ಟು ಪವರ್‌ಫುಲ್ ಆಗಿ ಹೇಳೋದು, ನಿಮ್ಮ ಸರಸತ್ತ ದರಿದ್ರ ಕನ್ನಡದಲ್ಲಿ? ಹೊರಗೆ ಹೋಗು ಅಂತ ಕನ್ನಡದಲ್ಲಿ ಹೇಳಿದರೆ ಯಾರಪ್ಪಾ ಈ ಕಾಲದಲ್ಲಿ ಎದ್ದು ಹೊರಡುತ್ತಾನೆ! ನಿಮ್ಮ ಮುಖಕ್ಕೇ ನಗುತ್ತಾನೆ! ಆಡಳಿತಕ್ಕೆ ಬೇಕಾದ ಶಬ್ದಗಳು ಕನ್ನಡದಲ್ಲಿ ಸಿಗುವುದಿಲ್ಲ ಅನ್ನೋದು ಇದಕ್ಕೇನೇ. ಇದಿಲ್ಲದೇ ಹೋದರೆ ಆಡಳಿತ ಸಾವಕಾಶವಾಗಿ ಶಿಥಿಲವಾಗದೆ ಬಿಡದು.

ಏಳು ವರ್ಷಗಳೊಳಗೆ ಹೈಕೋರ್ಟಿನಲ್ಲೂ ಕನ್ನಡವನ್ನೇ ಉಪಯೋಗಿಸಲು ಸಾಧ್ಯವಿದೆ ಅಂತ ನ್ಯಾಯಮೂರ್ತಿ ನಾರಾಯಣ ಪೈ ಅವರು ಅಪ್ಪಣೆ ಕೊಡಿಸಿದರಂತೆ. ಕೋರ್ಟುಗಳಲ್ಲಿ ಕನ್ನಡವನ್ನು ಬಳಸುವುದಕ್ಕೆ ನಾನಂತೂ ಬದ್ಧ ವಿರೋಧಿಯಾಗಿದ್ದೇನೆ. ಸಾಕ್ಷಿಗಳ ವಿಚಾರಣೆ ಮಟ್ಟಿಗೆ ಉಪಾಯವಿಲ್ಲದ್ದಕ್ಕೆ ಕನ್ನಡ ಬಳಸಬೇಕಾಗುತ್ತದೆ. ಆದರೆ ಕಕ್ಷಿಗಾರರ ಸಮ್ಮುಖದಲ್ಲಿ ಉಭಯ ವಕೀಲರು "ಯುವರ್ ಆನರ್", "ಯುವರ್ ಲಾರ್ಡ್‌ಶಿಪ್" ಇತ್ಯಾದಿ ಸಂಬೋಧನೆಗಳೊಡನೆ ಇಂಗ್ಲಿಷಿನಲ್ಲಿ ವಾದಮಾಡುತ್ತಿರುವಾಗ ಅರ್ಥವಾಗದಿದ್ದರೂ ಅಥವಾ ಅರ್ಥವಾಗದ್ದರಿಂದ- ಬೆರಗಾಗಿ ನೋಡುತ್ತ ಕಕ್ಷಿಗಾರ ತಾನು ವಕೀಲರಿಗೆ ಕೊಟ್ಟ ಹಣಕ್ಕೆ ಪೂರ್ಣ ಪ್ರತಿಫಲ ಬಂತು, ಕೋರ್ಟಿಗೆ ಕೊಟ್ಟ ಫೀಯೂ ಸಾರ್ಥಕವಾಯಿತು ಅಂತ ಸಮಾಧಾನ ಹೊಂದುತ್ತಾನೆ. ಅದೇ ವಾದವನ್ನು ಕನ್ನಡದಲ್ಲಿ ಹೇಳಿನೋಡಿ. ಕಕ್ಷಿಗಾರ "ಪುಸ್! ಇಷ್ಟೇನಾ ಈ ವಕೀಲರು ಮಾಡೋದು? ನಮ್ಮ ಪುಟ್ಟ ಬೋರೇಗೌಡ ಇಷ್ಟೇ ಚೆನ್ನಾಗಿ ವಾದಾ ಮಾಡ್ತಿದ್ದ! ಇವರಿಗೆ ಕೊಟ್ಟ ಹಣದಂಡ" ಅಂತ ಹೇಳಿ ಮುಂದಿನ ಸಲ ಫೀದರ ಅರ್ಧಕ್ಕಿಳಿಸ ಬೇಕು ಅನ್ನೋ ಚಳವಳೀನೂ ಮಾಡಬಹುದು. ನ್ಯಾಯಸ್ಥಾನದ ಗೌರವ, ವಕೀಲರ ಮರುವಾದೆ ಉಳಿಯಬೇಕಾದರೆ ಇಂಗ್ಲಿಷೇ ಬೇಕು ಸ್ವಾಮಿ. ಕನ್ನಡ ನಿಮ್ಮ ನಮ್ಮಂಥ ಹೈದಗಳಿಗೇ ಸರಿ.

ಶತಮಾನಗಳಿಂದ ವಿದ್ಯೆಯ ಸಂಪರ್ಕದಿಂದ ವಂಚಿಸಲ್ಪಟ್ಟ ನಮ್ಮ ದೇಶದ ಜನಸಾಮಾನ್ಯರು ಇದೀಗ ನಮ್ಮ ಮಕ್ಕಳನ್ನು ಇಂಗ್ಲಿಷು ಶಾಲೆಗಳಿಗೆ ಕಳಿಸಿ ಅವರು ಕಿಸ್‌ಪಿಸ್ ಅಂತ ಮಾತಾಡೋದು ಕೇಳಿ ತಾವೂ ಮನುಷ್ಯರಾದೆವು ಅಂತ ಅಭಿಮಾನಪಡೋಕ್ಕೆ ಶುರುಮಾಡಿದಾರೆ. ಅವರು ಹೀಗೆ ಮೇಲೆ ಬರುವುದನ್ನು ನೋಡಿ ಹೊಟ್ಟೆಕಿಚ್ಚಿನಿಂದ, ಈವರೆಗೆ ಜನರ ಅಜ್ಞಾನದಿಂದ ಹೊಟ್ಟೆ ಬೆಳೆಸಿಕೊಳ್ಳುತ್ತಿದ್ದ ಪುರೋಹಿತ ವರ್ಗ ಮತ್ತು ಅವರ ಆಶ್ರಯದಾತರು, ಈಗ ಇಂಗ್ಲಿಷನ್ನು ಉಚ್ಚಾಟನೆ ಮಾಡುವ ಕುತಂತ್ರ ಪ್ರಾರಂಭಿಸಿದ್ದಾರೆ. ಇದನ್ನು ಹಿಂದುಳಿದವರು ಎಷ್ಟು ಮಾತ್ರಕ್ಕೂ ಸಹಿಸಲಾರರು. ಹಿಂದುಳಿದವರೆಲ್ಲ ಇನ್ನೊಂದು ನೂರು ವರ್ಷ ಇಂಗ್ಲಿಷು ಓದಿ ಮನುಷ್ಯರಾಗಲಿ. ಆಮೇಲೆ ದೇಶದಲ್ಲಿ ಯಾರಿಗಾದರೂ ಇನ್ನೂ ಕನ್ನಡ ನೆನಪಿದ್ದರೆ ಕನ್ನಡವನ್ನು ಆಡಳಿತ ಭಾಷೆ ಮಾಡೋಣ. ಆವರೆಗೆ ಖಂಡಿತಾ ಬೇಡ.

(೧೯೭೪)

೨. ಕವಿಶೌರ್ಯ ಪ್ರಕರಣಂ

ಇತರರು ಏನೇ ಹೇಳಲಿ ಹೇಳದಿರಲಿ, ಕವಿಗಳು ತಮ್ಮ ಜಾತಿಯ ಮೇಲೆ ಬೇಕು ಬೇಕಾದ ಕಿರೀಟಗಳನ್ನು ಏರಿಸಿಕೊಳ್ಳುವುದರಲ್ಲಿ ಎಂದೂ ಹಿಂದುಳಿದವರಲ್ಲ. ನೇಮಿಚಂದ್ರನಿಗೆ ಕವಿಗಳು "ಅಘಟಿತಘಟನಾ ನೂತನ ಬ್ರಹ್ಮರಲ್ತೆ?" ಶೆಲ್ಲಿಗೆ ಕವಿಗಳು "ಪ್ರಪಂಚದ ಅನಧಿಕೃತ ಶಾಸನಕರ್ತರು." ಕೀಟ್ಸ್‌ನಿಗೆ "ಸ್ವರ್ಗದಲ್ಲೊಂದು ಭೂಮಿಯಲ್ಲೊಂದು" ಹೀಗೆ ದುಪ್ಪಟ್ಟು ಆತ್ಮವುಳ್ಳ ವಿಚಿತ್ರ ಜಂತುಗಳೇ ಕವಿಗಳು. ಹಳೇ ಲ್ಯಾಟಿನ್ ಗಾದೆಯಂತೆ "ಕವಿಗಳು ಹುಟ್ಟುತ್ತಾರೆ ಹೊರತು ಆಗುವುದಿಲ್ಲ". ಭಾರತದ ಬ್ರಾಹ್ಮಣರಿಗಿಂತಲೂ ಬಿಗಿಬಾಗಿಲ ಜಾತಿ! (ಅಥವಾ ಕವಿತ್ವ ಜನಕ್ಕೆ ಅಂಟಿಕೊಂಡು ಬಾರದಿದ್ದರೆ ಯಾವನೂ ಸ್ವೇಚ್ಛೆಯಿಂದ ಕವಿಯಾಗುವಷ್ಟು ಹೆಡ್ಡನಾಗಲಾರ ಎಂದೊ?) ನಿಮಗಾರಿಗೂ ಕವಿಯ ಕೃತಿಗಳನ್ನು ಒರೆಗೆ ಹಚ್ಚಿ ನೋಡುವ ಅಧಿಕಾರವಿಲ್ಲ. "ಫಣಿಪತಿಯ ಫಣಾರತ್ನಮುಮಂ ರನ್ನನ ಕೃತಿರತ್ನಮುಮಂ, ಪೇಳ್, ಪರೀಕ್ಷಿಪಂಗೆ ಎಂಟೆರ್ದೆಯೆ?" ಎಂದು ರನ್ನ ನಿಮ್ಮನ್ನು ಹೆದರಿಸುತ್ತಾನೆ. ಬ್ರಾಹ್ಮಣರಲ್ಲಿ ವೈದಿಕ-ಗೃಹಸ್ಥ, ಲಿಂಗವಂತರಲ್ಲಿ ಅಯ್ಯ-ಅಪ್ಪ ಭೇದವಿರುವಂತೆ ಕವಿಗಳಲ್ಲಿಯೂ ಒಳಪಂಗಡಗಳಿವೆ: "ವರಕವಿಗಳ ಮುಂದೆ ನರಕವಿಗಳ ವಿದ್ಯೆ ತೋರಬಾರದು" ಎಂದು ಕನಕದಾಸ ವರಕವಿಗಳೆಂಬ ಬ್ರಹ್ಮರ್ಷಿಗಳ ಪದವಿಗೆ ನೀವು ಏರುವುದಕ್ಕೆ ಪ್ರತಿಬಂಧ ಹೇರುತ್ತಾನೆ. ನಮ್ಮ ಕಾಲದಲ್ಲಿ ಒಬ್ಬರೇ ವರಕವಿಗಳಿದ್ದಾರೆ-ಉಳಿದವರೆಲ್ಲ ನರಕವಿಗಳು-ಅಥವಾ ನರಸತ್ತ ಕವಿಗಳು ಇದ್ದಾರೆ. "ಅರಸುಗಳ ಅಮೃತಶಿಲೆಯಲ್ಲಿ ಕಡೆದ ಮೂರ್ತಿಗಳೊ, ಹೊನ್ನ ರೇಕುಗಳ ಹೊಚ್ಚಿದ ಸ್ಮಾರಕಂಗಳೋ, ಕವಿಯ ಕಾವ್ಯದ ಸತ್ವದಂತೆ ಶಾಶ್ವತವಲ್ಲ" ಎಂದು ಶೇಕ್‌ಸ್ಪಿಯರ್ ಕೊಚ್ಚುತ್ತಾನೆ. ಇಷ್ಟೆಲ್ಲ ಹೆಗ್ಗಳಿಕೆ ಹೇಳಿಕೊಂಡರೂ ಈ ಸ್ವ-ಭಟ್ಟಂಗಿಗಳಲ್ಲಿ ಯಾರೂ ಕಾವ್ಯ ಬರೆಯುವವನು ಶೂರ ಎಂಬ ಪೌರುಷ ಕೊಚ್ಚಿಕಂಡಿಲ್ಲ. ಅಮೆರಿಕನ್ ಕವಿಯೊಬ್ಬನು ಈಗ ಆ ಹೆಗ್ಗಳಿಕೆಗೂ ಕೈಯೊಡ್ಡಿದ್ದಾನೆ.

ಪುಲಿಟ್ಜರ್ ಬಹುಮಾನ ಪಡೆದ ಕವಿ ರಾಬರ್ಟ್ ಫ್ರಾಸ್ಟ್. (ಕವಿಯಾದವನಿಗೆ ಫ್ರಾಸ್ಟ್ ಎಂಬುದು ತುಸು ವಿಪರೀತ ಹೆಸರಲ್ಲವೆ? ಫ್ರಾಸ್ಟ್ ಅಂದರೆ ಹಿಮ. ಆದರೆ ಕವಿಗಳ ಬುದ್ಧಿ ಕೊತಕೊತ ಕುದಿಯುವ ಕಾವಲಿಯೆಂದು ಶೇಕ್‌ಸ್ಪಿಯರನಂಥವರ ಸಾಕ್ಷ್ಯ ನಮಗಿದೆ. ಫ್ರಾಸ್ಟ್‌ಗಿಂತ ಫಾಸ್ಟ್ ಅನ್ವರ್ಥಕವಾದೀತೆಂದು ನನ್ನ ಭಾವನೆ. ಫಾಸ್ಟ್ (ಉಪವಾಸ) ಮಾಡಬಲ್ಲವನೇ ಕವಿಯಾಗಬೇಕು.) "ತರುಣರು ತಮ್ಮ ಶೌರ್ಯಪ್ರದರ್ಶನಕ್ಕೆ ಯಾಕೆ ಕವಿತೆ ಬರೆಯತೊಡಗಬಾರದು?" ಎಂದು ಫ್ರಾಸ್ಟ್ ಕೇಳುತ್ತಾನೆ. "ಅರಸುಗಳಿಗಿದು ವೀರ" ಎಂದು ಕವಿತೆಯನ್ನು ಶೌರ್ಯಕ್ಕೆ ಪೋಷಕವಾಗಿ ಹೇಳಿದ ಕವಿಗಳುಂಟು. ಹಿಂದಿನ ಕಾಲದಲ್ಲಿ ಯುದ್ಧರಂಗದಲ್ಲಿ ಯೋಧರ ಉತ್ಸಾಹಕ್ಕೆ ಕಿಡಿ ಹಚ್ಚಲು ಕವಿಗಳೂ ಹೋಗುತ್ತಿದ್ದರಂತೆ. ಪಂಪನಂಥ ಕೆಲವರು ಒಂದು ಕೈಲಿ ಖಡ್ಗ ಇನ್ನೊಂದರಲ್ಲಿ ಕಂಟವ ಹಿಡಿದದ್ದೂ ಇರಬಹುದು. ಆದರೆ ಕಾವ್ಯಲೇಖನವೇ ಒಂದು ಶೌರ್ಯ ಎಂದವರಲ್ಲಿ ಫ್ರಾಸ್ಟನೇ ಮೊದಲಿಗ. ಇದರ ರಹಸ್ಯವೇನಿರಬೇಕೆಂದು ಧೇನಿಸುತ್ತಿರಲು ಲಾಂಗೂಲಾಚಾರ್ಯರಿಗೆ ಒಮ್ಮೆಲೇ ಹೊಳೆಯಿತು -ಕವಿಗಳ ಎಲ್ಲ ಹೆಗ್ಗಳಿಕೆಗಳಲ್ಲಿ ಇದೇ ಮೊತ್ತಮೊದಲನೇ ಸತ್ಯವಾಕ್ಯ ಅಂತ. ಕವಿತೆ ಬರೆಯುವ ವೃತ್ತಿ ಕೈಕೊಳ್ಳುವವನಿಗೆ ಇಂದಿನ ದಿನದಲ್ಲಿ ಅಪಾರ ಧೈರ್ಯ ಬೇಕಾಗುತ್ತದಲ್ಲವೆ? ಕವಿಗಳು ಕಬ್ಬಿಣ

ದಂಗಡಿಯೊಳಗಿನ ನೊಣಗಳಷ್ಟೇ ಶ್ರೀಮಂತರಾಗಿರುತ್ತಾರೆಂದೂ ಶಿವರಾಮ ಕಾರಂತರಂಥ ಸಾಹಿತಿಗಳೇ ಸಂಪಾದಕರಾಗಿದ್ದಾಗ ಲೇಖನದ ಕೊನೆಯಲ್ಲಿ ಉಳಿದ ಸ್ಥಳಕ್ಕೆ ಜಾಹೀರಾತು ಇಲ್ಲದಿದ್ದರೆ ಅಲ್ಲಿ ಕವಿತೆ ಹಾಕುತ್ತಿದ್ದರೆಂದೂ ಯಾರಿಗೆ ಗೊತ್ತಿಲ್ಲ? ಪತ್ರಿಕಾ ಕಚೇರಿಗಳಿಗೆ ಕವಿತೆಗಳನ್ನು ಕಳಿಸುವ ಎಷ್ಟೋ ನವಕರ್ಣರು ಅವುಗಳನ್ನು ಪ್ರಕಟಿಸಲು ಎಷ್ಟು ಚಾರ್ಜು ಬೀಳುತ್ತದೆಂದು ಕೇಳುತ್ತಿರುತ್ತಾರೆ. ಆದರೆ ಸಂಪಾದಕರು, ಸಖೇದ ನಿರಾಶಾಭಾವದಿಂದ ಹೇಳುತ್ತಾರೆ. ಪತ್ರಿಕೆಯ ಜಾಹೀರಾತು ದರಗಳು ಕವಿಗಳಿಗೆ ನಿಲುಕಲಾರದಷ್ಟಿವೆಯಾದ್ದರಿಂದ ಈ ಬಗ್ಗೆ ಏನೂ ಮಾಡುವ ಸ್ಥಿತಿಯಲ್ಲಿ ತಾವು ಇಲ್ಲ-ಎಂದು.

ಹೀಗೆ ಭಾರತಮಾತೆಯ ವೀರಪುತ್ರರೆಂದು ತೋರಿಸಿಕೊಳ್ಳಲು ಯುವಕರಿಗೆ ಇದೊಂದು ಅತ್ಯುತ್ತಮ ಸುಸಂಧಿಯೆಂದು ಶಿಫಾರಸು ಮಾಡಬಹುದಾಗಿದೆ. ಭಾರತವೀರರೆನಿಸಲು ನಮ್ಮ ಕಾಲೇಜು ತರುಣರು ಮುಷ್ಕರಗಳನ್ನು ಸಂಘಟಿಸುವ ಕಷ್ಟವಹಿಸಬೇಕಾಗಿಲ್ಲ. ರೈಲು, ಬಸ್ಸುಗಳಲ್ಲಿ ತಿಕೀಟಿಲ್ಲದೆ ಪ್ರವಾಸ ಮಾಡುವ ಪ್ರಯಾಸ ತೆಗೆದುಕೊಂಡು ಕಂಡಕ್ಟರ್ ಅಥವಾ ಪೊಲೀಸರೊಡನೆ ಕುಸ್ತಿ ಹಿಡಿದು ಸಂಶಯಾಸ್ಪದವಾದ ಶೂರಪಟ್ಟಕ್ಕೆ ಕೈ ತುಡುಕಬೇಕಿಲ್ಲ. ಕಾಗದದ ಚೆಂಡುಗಳನ್ನು ಕ್ಲಾಸಿನ ಅಬಲಾನೀಕದ ಮೇಲೆ ಎಸೆದು ತಮ್ಮದು ಗುರಿಬದ್ಧ ಜೀವನವೆಂದು ತೋರಿಸುವ ಮೂಲಕ ಜೇನುಹುಟ್ಟನ್ನು ಕೆದಕಬೇಕಾಗಿಲ್ಲ. ಇಳಿಜಾರು ರಸ್ತೆಯಲ್ಲಿ ಎರಡೂ ಕೈಬಿಟ್ಟು ಸಾಯೋಕಲ್ಲು ಸವಾರಿಮಾಡಿ, ಗಟಾರಶಯನಕ್ಕಾಗಲಿ ಮೈಲುಕಲ್ಲಿನೊಡನೆ ಸಂಘರ್ಷಕ್ಕಾಗಲಿ ಎಳಸುವ ಅಗತ್ಯವಿಲ್ಲ. ಲೇಖನಿ ಖಡ್ಗಕ್ಕಿಂತಲೂ ಬಲವಾದದ್ದೆಂಬ ವಾಕ್ಯದಲ್ಲಿ ಶ್ರದ್ಧೆಯಿಟ್ಟು ಕವಿತೆಗಳನ್ನು ಬರೆಯತೊಡಗಿರಿ. ನೀವು ಯಾರ ಮೇಲೆ ಕಾಗದದ ಚೆಂಡು ಒಗೆಯಬೇಕೆಂದಿದ್ದಿರೋ ಅವರ ಮೇಲೆ ಕವಿತೆ ಬರೆಯಿರಿ. ಯಾರ ಮುಂದೆ ನಿಮ್ಮ ಶೌರ್ಯಪ್ರದರ್ಶನ ಮಾಡಬೇಕೆನ್ನುತ್ತೀರೋ ಅವರ ಮುಂದೆ ನಿಮ್ಮ ಕವಿತೆಗಳನ್ನೋದಿರಿ. ಕಾಗೆಗಳ ಹಿಂಡಿನ ಬಳಿ ಗುಂಡು ಹಾರಿಸಿದಂತೆ ಅದರ ಪರಿಣಾಮ ಕ್ಷಣಾರ್ಧದಲ್ಲಿ ಕಂಡು ಬರುವುದು. ನಿಮಗೆ ಯಾರನ್ನು ಕಂಡರೆ ಆಗುವುದಿಲ್ಲವೋ ಅಂಥಾ ಸಂಪಾದಕರಿಗೆ ಅವುಗಳನ್ನು ಕಳಿಸುತ್ತ ಬನ್ನಿರಿ. ಇದರಂಥ ಅಹಿಂಸಾತ್ಮಕ ಅಸ್ತ್ರ ಬೇರೊಂದಿಲ್ಲ. ನಿಮ್ಮ ಕಡುಶತ್ರು ಕೂಡ ನಿಮಗೆ ಕವಿತೆ ಬರೆಯುವದರಲ್ಲಿ ಸ್ವಾರ್ಥವಿದೆಯೆಂದು ಆರೋಪಿಸಲಾರ. ನಿಃಸ್ಪೃಹ ಆತ್ಮಯಜ್ಞದ ಶೌರ್ಯವೆಂದರೆ ಇದೇ.

(೧೯೫೭)

೩. ಕವಿತ್ವ ಲಕ್ಷಣಮ್

ಕಾವ್ಯ ಹೇಗಿರಬೇಕು? ಎಂಬ ಬಗ್ಗೆ ಈಚೆಗೆ ಬೇಕಾದಷ್ಟು ಧೂಳು ಎದ್ದಿದೆ. ಉದ್ದ-ಗಿಡ್ಡ ಪಂಕ್ತಿಗಳ, ನಿಮಗೆ ಅರ್ಥವಾಗದ ಆದರೆ ಅರ್ಥವಾಗುವುದಿಲ್ಲೆಂದು ಹೇಳಲು ನೀವು ನಾಚುವ, ನವ್ಯ ಕಾವ್ಯವೇ ಕಾವ್ಯವೆಂದು ಕೆಲವರೂ, ಕುತುಬ ಮಿನಾರದಂತೆ ಪುಟದ ನಡುವೆ ನಾಲ್ಕು ನಾಲ್ಕೇ ಅಕ್ಷರಗಳ ಸಾಲುಗಳ ಸ್ತಂಭವನ್ನೇರಿಸುವ ಭವ್ಯ ಕಾವ್ಯವೇ ನಿಜವಾದ ಕವಿತೆಯೆಂದು ಮತ್ತೆ ಕೆಲವರೂ ಸಾಧಿಸುತ್ತಿದ್ದಾರೆ. ಆದರೆ ಕವಿಗಳು ಹೇಗಿರಬೇಕೆಂದು ಯಾರೂ ಹೇಳುತ್ತ ಇಲ್ಲ. ಕಾವ್ಯವು ಹುಟ್ಟಬೇಕಾದರೆ ಪ್ರತಿಭೆಯಾಗಲಿ ಪಾಂಡಿತ್ಯವಾಗಲಿ, ಸ್ಫೂರ್ತಿಯಾಗಲಿ ಇರಲಿ ಇಲ್ಲದಿರಲಿ ಕವಿಯೆಂಬವನು ಬೇಕೇಬೇಕಾಗುವುದರಿಂದ ಕಾವ್ಯ ಲಕ್ಷಣಕ್ಕಿಂತ ಕವಿ ಲಕ್ಷಣವೇ ಪ್ರಧಾನವೆಂದು ಲಾಂಗೂಲಾಚಾರ್ಯರ ಮತ. ಈಚೆಗೆ ಒಂದು ಇಂಗ್ಲಿಷ ಪತ್ರಿಕೆಯಲ್ಲಿ ಒಬ್ಬ ಲೇಖಕನು ಭಾರತದ ಕವಿಗಳ ಕವಿ ಲಕ್ಷಣ ಹೀನತೆಯನ್ನು ಕುರಿತು ಬಹಳ ವ್ಯಥೆಪಟ್ಟಿದ್ದಾನೆ. ಕಾಫಿ ಮತ್ತು ಸ್ಫೂರ್ತಿಯೆಂಬ ಆ ಎರಡು ಅಷ್ಟು ಉತ್ಸಾಹದಾಯಕವಲ್ಲದ ಪದಾರ್ಥಗಳ ಮೇಲೆ ಬದುಕುವ ಉದ್ದಗೂದಲಿನ ಉದ್ದಮೋರೆಯ ಕವಿಗಳ ಬಗ್ಗೆ ಅವನಂತೆ ಲಾಂಗೂಲಾಚಾರ್ಯರೂ ವಿಷಣ್ಣರಾಗಿದ್ದಾರೆ. ಆದರೆ ಈ ಪಾನನಿರೋಧದ ದಿನಗಳಲ್ಲಿ ಕಾಫಿಗಿಂತ ಉತ್ಸಾಹದಾಯಕ ಪೇಯಗಳು ಅಲಭ್ಯವಾಗಿರುವುದರಿಂದ ಇದರ ಹೊಣೆ ಅಂಶತಃ ಅವರ ಹೆಗಲಿನಿಂದ ಜಾರುತ್ತದೆ. ಅವರ ಕವಿತಾಪುಸ್ತಕದ ಮೊದಲನೇ ಪ್ರತಿ ಮಾರಾಟವಾದೊಡನೆ ಅವರು ತಮ್ಮ ದೀರ್ಘಕೇಶದ ಸಮಾಚಾರ ತೆಗೆದುಕೊಳ್ಳಲು ಸಿದ್ಧರೇ ಇದ್ದಾರೆ. ಆದರೆ ಅದು ಮಾರುವುದೇ ಇಲ್ಲವಲ್ಲ....

ನಮ್ಮ ಕವಿಗಳ ಉದ್ದ ಮೋರೆಯ ಕಾರಣವೆಂದರೆ ಅವರಿಗೆ ಕಾವ್ಯಸಿದ್ಧಿಸಿದ್ದರೂ ಕವಿತ್ವ ಸಿದ್ಧಿಸದಿರುವುದು. ಒಬ್ಬ ಕವಿಯ ಕವಿತೆ ಜನರಿಗೆ ರುಚಿಸಬೇಕಾದರೆ ಮೊದಲು ಅವರಿಗೆ ಆ ಕವಿಯು ಕೌತುಕದ ಪ್ರಾಣಿಯಾಗಬೇಕು. ಎಲ್ಲರಂತೆ ಇರುವ ಕವಿಯನ್ನು ಸಮಾಜ ಎಂದೂ ಪ್ರೀತಿಸುವುದಿಲ್ಲ. ನೀತಿಪಾಲಕ ಸಾಮಾಜಿಕರು ಧೈರ್ಯವಿದ್ದಿದ್ದರೆ ಏನನ್ನೆಲ್ಲ ಮಾಡಬಹುದಾಗಿತ್ತೋ ಅದರಲ್ಲಿ ಸ್ವಲ್ಪಾಂಶವನ್ನಾದರೂ ಮಾಡಿದ ಕವಿಯನ್ನೇ ಸಮಾಜವು ಕೊಂಡಾಡುತ್ತದೆ. ಜಗತ್ತಿನಲ್ಲಿ ಎರಡು ಬಗೆಯ ಪ್ರವರ್ತಕರಿದ್ದಾರೆಂದು ಬರ್ನಾರ್ಡ ಶಾ ಒಮ್ಮೆ ಹೇಳಿದ್ದನು. ಒಬ್ಬನು ಈಗ ಸಮಾಜವು ನೀತಿಯೆಂದು ಮನ್ನಿಸಿದ್ದರಲ್ಲಿ ಅನೀತಿಯಿದೆಯೆಂದು ತೋರಿಸುತ್ತಾನೆ. ಅವನನ್ನು ಜನರು ಬಹಿರಂಗದಲ್ಲಿ ಹೊಗಳಿ ಅಂತರಂಗದಲ್ಲಿ ಬಯ್ಯುತ್ತಾರೆ. ಎರಡನೆಯವನು ಸಮಾಜವು ಅನೀತಿಯೆಂದು ಹೇಳಿದುದು ನೀತಿಯೆಂದು ಸಾರುತ್ತಾನೆ. ಅವನನ್ನು ಜನ ಬಹಿರಂಗವಾಗಿ ಬಯ್ದು ಅಂತರಂಗದಲ್ಲಿ ಕೊಂಡು ಕೊನೆಯುತ್ತದೆ. ಕವಿಯಾದವನು ಈ ಎರಡನೇ ಬಗೆಯ ಪ್ರವರ್ತಕನಾಗಿರಬೇಕು. ಅವನು ಸಮಾಜವು ನಿಷೇಧಿಸಿದ್ದನ್ನೆಲ್ಲ ಮಾಡಬೇಕು; ಮಾಡಲಾಗದಿದ್ದರೆ ಮಾಡಿದ್ದೇನೆಂದು ಹೇಳಿಕೊಳ್ಳಬೇಕು.

ಭಾರತದ ಕವಿಗಳು ಎಂದಿನಿಂದಲೂ ನೀತಿಜೀವಿಗಳಾಗಿದ್ದರೆಂದಲ್ಲ. ಕವಿಯೆಂದೊಡನೆ ನಮಗೆ ಹೊಳೆಯುವ ಕಾಳಿದಾಸನನ್ನೇ ತೆಗೆದುಕೊಳ್ಳಿರಿ. ಅವನ ಜನಪ್ರಿಯತೆ ಅವನ ಕಾವ್ಯ

ಗಳಿಂದ ಹುಟ್ಟಿರದೆ ಅವನ ಜೀವನದ (ಅ) ಕಾರ್ಯಗಳಿಂದ ಬಂದಿದೆ. ಮಾಡಿಕೊಂಡ ಹೆಂಡತಿಯನ್ನು "ಗುರು"ವೆಂದು ದೂರೀಕರಿಸಿ ಯಾವಳೋ ವಿಲಾಸಿನಿಯ ತೆಕ್ಕೆಯಲ್ಲಿ ಸಿಪ್ರಾ ನದೀ ಘಟ್ಟದ ಪಾವಟಿಕೆಯ ಮೇಲೆ ಕುಳಿತು ನೀರಲ್ಲಿ ಕಾಲಾಡಿಸುತ್ತ "ಅಪ್ಪಿನ ತಪ್ಪಿನ ಕಪ್ಪವ ಸುಲಿಯುವ" ಕಾಳಿದಾಸನ ಚಿತ್ರ ಎಷ್ಟು ಹೃದಯಂಗಮವಾಗಿದೆ? ಅವನಿಗಿಂತ ಹಿಂದೂ ಮುಂದೂ ಕವಿಗಳಿಗೇನೂ ಬರಗಾಲವಿರಲಿಲ್ಲ. ಆದರೆ ಪಂಕ್ತಿಪಂಕ್ತಿಯನ್ನೂ ತಿಕ್ಕಿ ಒಪ್ಪಹಚ್ಚಿ ಬೆವರಿಳಿಸುತ್ತಿದ್ದ ಈ ಎಲ್ಲ ಕವಿಗಳನ್ನು ಯಾರು ಗಣಿಸುತ್ತಾರೆ? ಸಾವಿರ ವರ್ಷದ ಬರಡು ಕವಿ ಪ್ರಪಂಚವನ್ನು ದಾಟಿ ಬಂದ ಮೇಲೆ ನಮಗೆ ಕಾಳಿದಾಸನಷ್ಟೇ ಸ್ವಾರಸ್ಯದ ಇನ್ನೊಂದು "ಒಯಸಿಸ್" ಕಾಣಸಿಗುತ್ತದೆ. ಅದೇ "ಲವಂಗೀ ಕುರಂಗೀ ದೃಗಂಗೀಕರೋತು" ಎಂದು ಯವನ ಕನ್ಯೆಯ ಮೋಹದಲ್ಲಿ ಕುಣಿದಾಡಿದ ಜಗನ್ನಾಥ ಪಂಡಿತರಾಜ. ಪರಲೋಕದ ನರಕ ತಪ್ಪಿಸಿಕೊಳ್ಳಲು ಇಹಲೋಕದಲ್ಲೇ ನರಕ ಅನುಭವಿಸುವ ಆತುರದಲ್ಲಿದ್ದ ಈ ದೇಶದಲ್ಲಿ, "ಯವನೀ ನವನೀತಕೋಮಲಾಂಗಿ" ದೊರೆತರೆ "ಅವನೀತಲಮೇವ ಸಾಧು ಮನ್ಯೇನ ವನೀ ಮಾಘವನೀ ವಿನೋದಹೇತುಃ" ಈ ಭೂಮಿಯೇ ಸಾಕು. ಇಂದ್ರನ ನಂದನವನ ಸುಡಲಿ ಎಂದು ಹೇಳಿದ ಈ ಕವಿಯು ಕಾಳಿದಾಸನ ನಂತರ ಅತ್ಯಂತ ಜನಪ್ರಿಯನಾದ ಕವಿ ಯಾಗಿದ್ದಾನೆ.

''Poets are the unacknowledged legislators of the world" ಕವಿಗಳು ಜಗತ್ತಿನ ಅನಧಿಕೃತ ಶಾಸನಕರ್ತರೆಂದು ಶೆಲ್ಲಿ ಹೇಳಿದ್ದಾನೆ. ಭಾರತದ ಕನಿಷ್ಠ ಇಬ್ಬರು ಕವಿಗಳು ಅಧಿಕೃತ ಶಾಸನಕರ್ತರೇ ಆಗಿ ಶೆಲ್ಲಿಗಿಂತಲೂ ಮುಂದೆ ಹೋಗಿದ್ದಾರೆ. ಅವರೇ ರಾಜ್ಯ ಪರಿಷತ್ತಿನ ನಾಮಕರಣ ಸದಸ್ಯರಾದ ಹಿಂದಿ ಕವಿ ಮೈಥಿಲೀಶರಣ ಗುಪ್ತ ಮತ್ತು ಆಯ್ಕೆ ಹೊಂದಿದ ಕವಿ ಬಾಲಕೃಷ್ಣಶರ್ಮಾ "ನವೀನ"ರು. ಆದರೆ ಶೆಲ್ಲಿಯಂತೆ ಕಾವ್ಯವನ್ನೇ ಜೀವಿಸಲು ನಮ್ಮ ಕವಿಗಳು ಸಿದ್ಧರಾಗಿಲ್ಲ. ಹೋಟೇಲು ಹುಡುಗಿಯೊಡನೆ ಓಡಿ ಹೋಗಿ ಮದುವೆಯಾಗಿ ಅವಳ ಕೈಬಿಟ್ಟು ಅವಳ ಆತ್ಮಹತ್ಯೆಗೆ ಕಾರಣನಾಗಿ ಜಗತ್ಪ್ರಸಿದ್ಧನಾದ ಈ ಕ್ರಾಂತಿ ಕವಿಯ ಅಳವಿಗೆ ನಿಲ್ಲುವ ಕವಿಗಳು ಈಗೆಲ್ಲಿ? ಕುಂಟು ಕಾಲ ಕವಿಬೈರನ್ನನ ಪ್ರಣಯ ಸಾಹಸಗಳಿಂದಲೇ ಒಂದು ಗ್ರಂಥವನ್ನು ತುಂಬಬಹುದು. ಇಂಗ್ಲೆಂಡಿನಿಂದ ಯುರೋಪಿಗೆ ಪಲಾಯನ ಹೇಳಿದಾಗ ಈ ಕವಿ ಎಷ್ಟು ಪ್ರಸಿದ್ಧನಾಗಿದ್ದನೆಂದರೆ ಯುರೋಪಿನ ಶ್ರೀಮಂತ ನಾರಿಯರು ಅವನ ಸುತ್ತ ಮುಗಿಬಿದ್ದರು. ಮುಪ್ಪಿನ ಕಾಲದಲ್ಲಿ ಮನು ಧರ್ಮರಾಯನಾದ ವರ್ಡ್ಸ್‌ವರ್ತನು ಯೌವನದಲ್ಲಿ ಫ್ರಾನ್ಸಿನಲ್ಲಿದ್ದಾಗ ಆ್ಯನೆಟ್ ವಾಲನ್ ಎಂಬ ಹುಡುಗಿಯೊಡನೆ ಹುಚ್ಚಾಟ ನಡೆಸಿ ಕೈ ಸುಟ್ಟುಕೊಂಡಿದ್ದನು. ತೆನ್ನಾಲಿರಾಮನ ಬೆಕ್ಕಿನಂತೆ ಅವನು ಆ ಮೇಲೆ ಮುಕ್ತಪ್ರಣಯದ ಹಾಲಿಗೆ ಬಾಯಿ ಹಾಕುವುದನ್ನು ನಿಲ್ಲಿಸಿ ಮುಂದಿಗೆ ಬಾಲ ಕಳೆದುಕೊಂಡ ನರಿಯ ಉಪದೇಶ ಮಾಡತೊಡಗಿದನು. ಕೀಟ್ಸನು ಫ್ಯಾನಿಯೆಂಬ ಹುಡುಗಿಯ ಪ್ರಣಯ ಜ್ವರದಿಂದಲೇ ಸತ್ತು ಅಮರನಾದನು. ಅವನ ಕೊನೆಯ ಶ್ರೇಷ್ಠ ಸಾನೆಟ್ ನೋಡಿದರೆ ಸಾಯುವಾಗಲೂ ತನ್ನ "ಪ್ರಿಯಕರಳ ಸುಕುಮಾರ ಕುಚಗಳ" ಧ್ಯಾನವನ್ನೇ ಮಾಡುತ್ತಿದ್ದನೆಂದು ತೋರುತ್ತದೆ.

ಪ್ರಣಯಾರಣ್ಯದಲ್ಲಷ್ಟೇ ಕವಿಗಳು ಕಿರಾತರಾಗಿರಬೇಕೆಂದಲ್ಲ. ಶೇಕ್ಸಪಿಯರ ಮಹಾಕ

ಏಯಂತೆ ಕುದುರೆ ಕದ್ದು ನೀವು ಮೂರು ಶತಮಾನಗಳ ನಂತರ ಖಾಸಗಿ ಸೊತ್ತಿನ ವಿರುದ್ಧ ಎದ್ದ ಬಂಡಾಯಕ್ಕೆ ಮುಂಬೆಳಗಿನ ಕೋಳಿಯಾಗಬಹುದು. ಕೋಲರಿಜನು ಅಫು ತಿನ್ನುವುದರಲ್ಲಿ ನಿಸ್ಸೀಮನಾಗಿದ್ದುದೂ ನಿಮಗೆ ಸ್ಫೂರ್ತಿಯ ಸೆಲೆಯಾಗಬಲ್ಲದು. ಶೆಲ್ಲಿಯಂತೆ ನೀವೂ ಜಿಗುಪ್ಸಾವಹವಾದ ಮರೆವಿನಿಂದ ಜನರ ಪ್ರೀತಿ ಸಂಪಾದಿಸಬಹುದು. ಲಾಂಗೂಲಾಚಾರ್ಯರ ಪ್ರೀತಿಯ ಈ ಕವಿ ಒಂದು ದಿನ ತನ್ನ ಮನೆಗೆ ಬಂದ ಅತಿಥಿಗಳ ಮುಂದೆ ನಮ್ಮ ಜನರು ತಪ್ಪಾಗಿ "ಬೌದ್ಧಾವತಾರ"ವೆಂದು ಕರೆಯುವ ಅವಸ್ಥೆಯಲ್ಲಿ ಪ್ರತ್ಯಕ್ಷನಾದನಂತೆ. ಈಸಲು ಹೋಗಿ ಮರಳಿದ್ದ ಆತನಿಗೆ ಒಮ್ಮೆಲೇ ತನ್ನ ದಿಗಂಬರತ್ವವು ಜ್ಞಾಪಕಕ್ಕೆ ಬಂದೊಡನೆ ಅಲ್ಲಿಂದ ಪಲಾಯನ ಮಾಡಿದನು.

ನೀವು ಜನಪ್ರಿಯ ಕವಿಗಳಾಗಬೇಕಾದರೆ ಕ್ಷೌರ ಮಾಡಿಸಿಕೊಳ್ಳಬಾರದು; ಮನೆ ಬಾಡಿಗೆ ಕೊಡಬಾರದು; ತಿಕೀಟಿಲ್ಲದೆ ಪ್ರವಾಸ ಮಾಡಬೇಕು; "ಕೊಟ್ಟ ಸಾಲವ ತಿರುಗಿ ಕೇಳುವಾತನೆ ಹೊಲೆಯ" ಎನ್ನುವವರಾಗಬೇಕು. ಇತ್ಯಾದಿಯಾಗಿ ಒಬ್ಬ ಲೇಖಕನು ಉಪದೇಶ ಮಾಡಿದ್ದಾನೆ. ನೀವು ಭಾರತೀಯ ಕವಿಯಾಗಿದ್ದರೆ ನೀವು ಅನಾಯಾಸವಾಗಿ ಅಲ್ಲದಿದ್ದರೂ ಅನಿವಾರ್ಯವಾಗಿ ಈ ಉಪದೇಶವನ್ನು ಅನುಷ್ಠಾನಕ್ಕೆ ತರಲು ಸಮರ್ಥರಾಗುವಿರಿ. ಯಾಕೆಂದರೆ ಅದನ್ನು ಉಲ್ಲಂಘಿಸಲು ಬೇಕಾದ ಮುಖ್ಯ ಪದಾರ್ಥವು ನಿಮ್ಮ ಕೈಗೆ ಬರುವ ಭಯವಿಲ್ಲ. ನಿಮಗೆ ಶ್ರೀಮಂತ ಹೆಂಡತಿಯಿದ್ದರೆ ಅವಳ ಹಣವನ್ನು ಪ್ರೀತಿಸಿರಿ. ಆತ್ಮಸ್ತುತಿ ಮಾಡಿಕೊಳ್ಳಲು ಎಂದೂ ಹಿಂಜರಿಯಬೇಡಿರಿ. "ರನ್ನನ ಕೃತಿರತ್ನಮುಮಂ ಪರೀಕ್ಷಿಪಂಗೆಂಟೆರ್ದೆಯೇ" ಎಂದ ರನ್ನ ಕವಿ ನಿಮಗೆ ಮಾರ್ಗದರ್ಶಕನಾಗಬಲ್ಲನು. ವಿಮರ್ಶಕರು ನಿಮ್ಮನ್ನು ಟೀಕಿಸಿದರೆ ಭವಭೂತಿಯಂತೆ "ಉತ್ಪತ್ಸ್ಯತೇ ಮಮ ತು ಕೋಽಪಿ ಸಮಾನಧರ್ಮಾಃ" ನನ್ನನ್ನು ಮೆಚ್ಚುವವನು ಮುಂದೆ ಹುಟ್ಟಿಯಾನು ಎಂದು ಉತ್ತರ ಹೇಳಿರಿ; "ನೀನೇರಬಲ್ಲೆಯಾ ನಾ ಹಾರುವೆತ್ತರಕ?" ಎಂದು ಆಧುನಿಕ ಕವಿಯೊಬ್ಬರನ್ನು ಬೇಕಾದರೂ ಅನುಕರಿಸಿರಿ. ನೀವು ನವ್ಯ ಕವಿಗಳಿರಲಿ, ಸವ್ಯ ಕವಿ (ಸವ್ಯಸಾಚಿಯಂತೆ) ಗಳಿರಲಿ, ಅಪಸವ್ಯ ಕವಿಗಳಿರಲಿ, "ದೈತ್ಯಶೈಲಿ"ಯ ದೆವ್ವ ಕವಿಗಳೇ ಇರಲಿ, ನಿಮಗೆ ಕವಿತೆಯಲ್ಲಿ ರೋಮ್ಯಾಂಟಿಕ್ ಸಂಪ್ರದಾಯ ಮೆಚ್ಚಿಗೆಯಿರಲಿ ಇಲ್ಲದಿರಲಿ, ರೋಮ್ಯಾಂಟಿಕ್ ಕವಿಗಳ ಈ ರೋಮ್ಯಾಂಟಿಕ್ ರೀತಿಯನ್ನಂತೂ ನೀವು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಬಹುದು.

(೨೮-೬-೧೯೫೪)

೪. ಕಾಡಿಗೆ ಮತ್ತು ಕಾವ್ಯ

ನಮ್ಮ ರಾಜ್ಯಸಭೆಯ ಸದಸ್ಯರು ಸಂತೋಷಘಾತುಕರಲ್ಲ. ಭಾರತೀಯ ನಾರಿಯರು ಅನಾದಿಯಿಂದ ಹಚ್ಚಿಕೊಳ್ಳುತ್ತಿದ್ದ ಕಾಡಿಗೆ ಆರೋಗ್ಯಕ್ಕೆ ಬಾಧಕವೇ ಎಂದು ಪರೀಕ್ಷಿಸುವುದಕ್ಕೆ ಒಂದು ಪರಿಶೀಲನೆಯಾಗಬೇಕೆಂಬ ಒಂದು ಸೂಚನೆಯನ್ನು ಆ ಸಭೆಯ ವೀರಸದಸ್ಯರು ಮಾತಾಡಲಿಕ್ಕೂ ಕೊಡದೆ ನಿರಾಕರಿಸಿಬಿಟ್ಟರು. ಈಚೆಗೆ ಕೆಲ ಆರೋಗ್ಯ ಮೂಢರು ಕಾಡಿಗೆಯಿಂದ ಹೆಂಗಸರಿಗೆ ಅನೀಮಿಯಾ ಆಗುತ್ತದೆಂದು ಸೂಚಿಸಿದ್ದರು. ಇದನ್ನು ಕೇಳಿದ ಸದಸ್ಯರೊಬ್ಬರು ಸ್ತ್ರೀಯರ ಆರೋಗ್ಯದ ಅತಿಶಯ ಚಿಂತೆಯಿಂದ ಸಭೆಯ ಮುಂದೆ ಈ ಪ್ರಶ್ನೆಯೆನ್ನೆತ್ತಿದ್ದರು. ಇದನ್ನು ವಿರೋಧಿಸಿದ ಸದಸ್ಯರು ಮುಂದೊಡ್ಡಿದ ಅತಿ ಪ್ರಬಲ ವಾದವೆಂದರೆ, ಕಾಡಿಗೆ ನಾರಿಯರ ಸೌಂದರ್ಯವನ್ನು ಹೆಚ್ಚಿಸುತ್ತದೆ ಎಂಬುದು. ಆಹಾ! ಎಂಥ ಮಾರ್ಮಿಕ ವಾದ. ನಾರೀ ಸೌಂದರ್ಯವನ್ನು ಹೆಚ್ಚಿಸಬಹುದಾದ್ದು ಯಾವುದೂ ಸರ್ವಥಾ ಕೆಟ್ಟದ್ದಾಗಿರಲಾರದು. ಅಲ್ಲವೆ? ಪುರುಷರೂ ಅದನ್ನು ಮೆಚ್ಚುತ್ತಾರೆ; ಮತ್ತು ಪುರುಷರು ಮೆಚ್ಚುತ್ತಾರೆಂದ ಮೇಲೆ ಸ್ತ್ರೀಯರು ಅದಕ್ಕಾಗಿ ಅನೀಮಿಯವನ್ನೇ ಏಕೆ, ಯಮದೂತರ ಸೈನ್ಯವನ್ನೇ ಎದುರಿಸಲು ಸಿದ್ಧರಾಗುತ್ತಾರೆ.

ಕಾಡಿಗೆ ಕಪ್ಪಾದರೂ ಅದು ಕೊಡುವ ಸೌಂದರ್ಯ ಅಪರೂಪವಾದದ್ದು. ಮೊದಲನೆಯದಾಗಿ ಕಾಡಿಗೆ ಹಚ್ಚಿಕೊಳ್ಳುವ ಹೆಣ್ಣಿನ ಭಂಗಿಯೇ ಹೃದಯ ಬಡಿತವನ್ನು ಹೆಚ್ಚಿಸುವಂಥಾದ್ದು. ಪೌಡರ್ ತೊಡೆದುಕೊಳ್ಳುವ ಹೆಣ್ಣು, ಕುಂಕುಮ ಹಚ್ಚಿಕೊಳ್ಳುವ ಹೆಣ್ಣು, ಕಿವಿಯೋಲೆ ಧರಿಸುತ್ತಿರುವ ಹೆಣ್ಣು ಎಲ್ಲವುಗಳಲ್ಲಿಯೂ ಒಂದೊಂದು ಭಂಗಿ ಲಾವಣ್ಯ ಇದ್ದೇ ಇದೆ. ಆದರೆ ಕಾಡಿಗೆ ಹಚ್ಚಿಕೊಳ್ಳುವ ಹೆಣ್ಣು ನಿಜವಾಗಿ ಕಲಾವತಿಯಾಗಿದ್ದರೆ ಅದೊಂದು ದೇವದುರ್ಲಭ ನೋಟವೇ ಸೈ. ಎಳೆಎಳೆಯಾಗಿ ಆ ಲಾವಣ್ಯವನ್ನು ಬಣ್ಣಿಸುವ ಅರಸಿಕ ನಾನಲ್ಲ. ಕಂಡೇ ತಣಿಯತಕ್ಕದ್ದು ಅದು. ಕಾಡಿಗೆಯನ್ನು ಹಚ್ಚಿಕೊಂಡ ಮೇಲೆ ಕಣ್ಣಿನ ಚೆಲುವಿಗೊಂದು ಒತ್ತು ಕೊಟ್ಟಂತಾಗುತ್ತದೆ. ಮೊದಲೇ ಚೂಪಾದ ಕಣ್ಣು ಕೊನೆಗಳು ಈಗ ಮುಳ್ಳಿನ ಮೊನೆಯಂತಾಗುತ್ತವೆ.....

ಭಾರತದ ಕಾವ್ಯ ಪ್ರತಿಭೆ ಕಪ್ಪಾದ ಕಾಡಿಗೆಯಿಂದ ಅಪ್ರತಿಮ ಕಾವ್ಯ ಸನ್ನಿವೇಶಗಳನ್ನು ನಿರ್ಮಿಸಿದೆ. ಚಂದ್ರಹಾಸನ ಕೈಲಿ ಮಂತ್ರಿ ದುಷ್ಟಬುದ್ಧಿ ಮಗನಿಗೆ ಕೂಟಪತ್ರವನ್ನು ಬರೆದು ಕಳಿಸಿರುತ್ತಾನೆ. ಇವನು ಅಲ್ಲಿ ಬಂದೊಡನೆ ಎಳ್ಳಷ್ಟೂ ವಿಳಂಬಿಸದೆ ವಿಷಕೊಟ್ಟು ಮುಗಿಸಿಬಿಡು ಎಂದು. ಚಂದ್ರಹಾಸ ರಾಜಧಾನಿಗೆ ಬಂದಿದ್ದಾನೆ. ಮಧ್ಯಾಹ್ನವಾಗಿದೆ. ಆಯಾಸ ವಿಪರೀತವಾಗಿದೆ. ಮಾರ್ಗಕ್ರಮಣದಿಂದ ಮಲಿನವಾದ ಮೈಯಲ್ಲೇ ಅರಮನೆಗೆ ಹೋಗುವುದೂ ಯುಕ್ತವಲ್ಲ. ರಾಜಧಾನಿಯ ಹೊರಗಿನ ಉದ್ಯಾನದ ಕೊಳದಲ್ಲಿ ಮಿಂದಿದ್ದಾನೆ. ಮರದ ಬುಡದಲ್ಲಿ ಕುಳಿತಿದ್ದಾನೆ. ಅಲ್ಲೇ ನಿದ್ದೆ ಬಂದುಬಿಟ್ಟಿದೆ. ಮಂತ್ರಿಯ ಮಗಳು ವಿಷಯೆ ಅಲ್ಲಿ ಬಂದಿದ್ದಾಳೆ. ನಿದ್ರಾಮುದ್ರಿತನೇತ್ರನಾದ ಸುಂದರ ಯುವಕನನ್ನು ನೋಡಿದ್ದಾಳೆ. ಇವನು ತನಗಾಗಿಯೇ ಸೃಷ್ಟಿಯಾಗಿದ್ದಾನೆಂದು ಕುತೂಹಲದಿಂದ ದಿಟ್ಟಿಸುತ್ತಾ ನಿಂತಿದ್ದಾಳೆ. ಒಮ್ಮೆಲೇ ಅವನ ಹತ್ತಿರ ತನ್ನ ತಂದೆಯ ಮುದ್ರೆಯೊತ್ತಿದ ಪತ್ರ ಕಾಣಿಸುತ್ತದೆ. ಹಾ! ತಂದೆ ತನಗಾಗಿ ಈತನನ್ನು ಕಳಿಸಿರಬಹುದೇ? ಮೆಲ್ಲನೆ ಆ ಪತ್ರವನ್ನು ಸೆಳೆದುಕೊಂಡು ತೆರೆದು ನೋಡುತ್ತಾಳೆ. ತಂದೆ ಅಣ್ಣನಿಗೆ ಬರೆದ ಕಾಗದ. ಒಳಗೇನಿದೆ? ಓದುತ್ತಾಳೆ; ಇವನಿಗೆ ವಿಷವನ್ನಿತ್ತು ಮುಗಿಸಿ ಬಿಡು! ಆಹಾ,

ಎಂಥಾ ಕೈತಪ್ಪು, ಇದು ಹೀಗೆ ಉಳಿದರೆ ಅನಾಹುತವಾಗುತ್ತದೆ. ತನ್ನ ತಂದೆ ವಿಷಯೆಯನ್ನಿತ್ತು ಬಿಡು ಎಂದೇ ಬರೆದಿರಬೇಕು. ಅಕ್ಷರ ತಪ್ಪಿರಬೇಕು. ಇದನ್ನು ತಿದ್ದಲೇಬೇಕು. ಆದರೆ ಉದ್ಯಾನ ವಿಹಾರಕ್ಕೆ ಬಂದ ಹೆಣ್ಣಿನ ಕೈಲಿ ಲೇಖನಿಯೇ, ಮಶಿದೌತಿಯೆ? ಆದರೆ ಹೆಣ್ಣಿನ ಬುದ್ಧಿ ಪ್ರಸಂಗಾವಧಾನಿ. ಅವಳಿಗೆ ಕಣ್ಣ ಕಾಡಿಗೆಯ ನೆನಪು ಬರುತ್ತದೆ. ಮೊನೆಯಾದ ಕಿರಿಬೆರ ಳುಗುರಿನಿಂದ ಕಾಡಿಗೆಯನ್ನು ನಸುವೆ ಕೆರೆದುಕೊಂಡು ಉಗುರ ಮೊನೆಯಿಂದ ಪತ್ರವನ್ನು ತನ್ನ ಮನದಂತೆ ತಿದ್ದಿಬಿಡುತ್ತಾಳೆ. ಪತ್ರ ತನ್ನ ಸ್ಥಾನವನ್ನು ತಲುಪುತ್ತಲೇ ಚಂದ್ರಹಾಸನಿಗೆ ಆಶ್ಚರ್ಯವಾ ಗುವಂತೆ ವಿಷಯೆ ಅವನ ಅಂಗೈಯರಗಿಣಿಯಾಗಿಬಿಡುತ್ತಾಳೆ. ಒಂದು ನಿಮಿಷ ವಿಷಯೆಯ ಕಣ್ಣಲ್ಲಿ ಕಾಡಿಗೆ ಇರಲಿಲ್ಲ ಎಂದು ಕಲ್ಪಿಸಿಕೊಳ್ಳಿ. ಚಂದ್ರಹಾಸನ ಕಥೆಯೇ ಬೇರೆಯಾಗುತ್ತಿತ್ತು. ಚಂದ್ರಹಾಸನ ಕಥೆ ಓದಿದವರಾರೂ ಕಾಡಿಗೆಯನ್ನು ನಾರಿಯರ ಪ್ರಸಾಧನ ಕರಂಡಕದಿಂದ ಉಚ್ಚಾಟನೆ ಮಾಡಲು ಒಪ್ಪಲಾರರು. ಇದರಷ್ಟು ಮಂಗಲಕರವಾದ ಫೋರ್ಜರಿ ವಿಶ್ವಸಾಹಿತ್ಯ ದಲ್ಲೇ ಇಲ್ಲ.

ನೇಮಿಚಂದ್ರನ ಅರ್ಧನೇಮಿ ಪುರಾಣದಲ್ಲಿ ಕಾಡಿಗೆಯ ಇನ್ನೊಂದು ಕವಿ ಕಥೆ ಬರುತ್ತದೆ. ವಸುದೇವನನ್ನು ಒಲಿದು ಬಂದು ಮದುವೆಯಾದ ರಾಜಪುತ್ರಿ ಒಂದು ದಿನ ನೃತ್ಯ ಶ್ರಮದಿಂದ ಅವನ ತೋಳಾನಿಕೆಯಲ್ಲಿ ಮಲಗಿರುತ್ತಾಳೆ. ಈ ವಸುದೇವ ಕೃಷ್ಣನ ತಂದೆಯೇ ಆದರೂ ಭಾಗವತ ಪುರಾಣದ ವಸುದೇವನ ಹಾಗೆ ಸಾಧುಪ್ರಾಣಿಯಲ್ಲ.

ಅವನಿಗೆ ಗಂಟುಬೀಳುವ ವನಿತೆಯರೆಷ್ಟೋ, ರಾಜಕುಮಾರಿಯರೆಷ್ಟೋ, ಆದರೆ ಅವನ ಲಂಬಾಣಿ ಮನಸ್ಸನ್ನು ಯಾವ ಹೆಣ್ಣೂ ಚಿರಕಾಲ ಕಟ್ಟಿಹಾಕಲು ಸಮರ್ಥಳಾಗುವುದಿಲ್ಲ. ತನ ಗೊರಗಿ ಅನುಪಮ ಸುಂದರಿ ಮಲಗಿದ್ದಂತೆಯೆ ಅವನಿಗೆ ಏಕಾಏಕಿ ಈ ಸ್ಥಳ ಬಿಡಬೇಕೆಂದು ಅಭಿಲಾಷೆ ಆಗಿಬಿಡುತ್ತದೆ. ಆದರೆ ಅವಳಿಗೆ ಸುದ್ದಿ ಕೊಡದೇನೇ ಹೋಗಿಬಿಡುವ ಕಟುಕನೂ ಅವನಲ್ಲ. ಆದರೆ ಅವನಿಗೆ ತ್ವರೆ. ಅವಳ ಕಣ್ಣ ಕಾಡಿಗೆ ಬೆವರಿನಲ್ಲಿ ನೆನೆದು ನಸುವೆ ನೀರಾಗಿದ್ದು ದನ್ನು ಕಂಡ, ಉಗುರಿನಿಂದ ಅದನ್ನು ತೆಗೆದುಕೊಂಡು, "ನಾನು ಹೋಗುತ್ತಿದ್ದೇನೆ. ಹೆದರ ಬೇಡ, ಬೇಗ ಬಂದು ಬಿಡುತ್ತೇನೆ" ಎಂದು ಕರ್ಣಪತ್ರದ ಮೇಲೆ ಬರೆದು ಬಿಟ್ಟು ಅವಳನ್ನು ಹಾಗೆಯೆ ನಿದ್ದೆಮಾಡಗೊಟ್ಟು ಹೋಗಿಬಿಡುತ್ತಾನೆ. ನಾನಿನ್ನೂ ಅರ್ಧನೇಮಿ ಪುರಾಣ ಮುಗಿ ಸಿಲ್ಲ. ಎಂದಾದರೂ ವಸುದೇವ ಅವಳ ಮಗ್ಗುಲಿಗೆ ಮರಳುತ್ತಾನೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಕಾಡಿಗೆಯ ಈ ಉಪಯೋಗ ನನ್ನನ್ನು ಗಾಢ ವಿಷಣ್ಣನಾಗಿ ಮಾಡಿದೆ. ವಿಷಯೆ ಅದನ್ನು ಮಿಲನಕ್ಕೆ ಸಾಧನವಾಗಿ ಮಾಡಿಕೊಂಡಳು. ವಸುದೇವ ವಿರಹದ ಸಂದೇಶಕ್ಕೆ ಅದನ್ನು ಬಳಸಿಕೊಂಡ. ಪುರುಷರದು ಕಲ್ಮನಸು ಎನ್ನುವುದು ಸುಳ್ಳೆ?

(೧೯-೯-೧೯೭೧)

೫. ಕುವೆಂಪು ದರ್ಶನ

ಈಜಿಪ್ತದ ಸ್ಫಿಂಕ್ಸ್ (ನನ್ನದು ದೈತ್ಯ ಶೈಲಿ!), ಶ್ರವಣಬೆಳಗುಳದ ಗೋಮಟೇಶ್ವರ (ಶ್ರೀ ಗೋಮಟೇಶ್ವರಾ, ಗಾಢತರಮೌನದಿಂ....), ಮಾಸ್ಕೋದಲ್ಲಿರುವ ಸ್ಟಾಲಿನ್ನನ ಮೂರ್ತಿ (ಎದೆಯಿದ್ದರಿಲ್ಲಿ ನಗು ನೋಡುವಂ!), ಮೈಸೂರಿನ ಗಂಡ ಭೇರುಂಡ (ನೀ ಹಾರಬಲ್ಲೆಯಾ ನಾ ಹಾರುವೆತ್ತರಕೆ?), ಗ್ರೀಸಿನ ಅರೆಕಲ್ (ಹಾರೈಸಿ, ಹಾರೈಸಿ, ಹಾರೈಸಿ, ಜೀವ ತಾನಾಗುವಂದೇವ!).... ಮೇರು ಕೃತಿಯ ಮಹಾಕವಿ ಕುವೆಂಪುವನ್ನು ಕುರಿತು ಲಾಂಗೂಲಾಚಾರ್ಯರು ಮಾಡಿಕೊಂಡಿದ್ದ ಮಾನಸಿಕ ಚಿತ್ರ ಇವೆಲ್ಲವುಗಳ ಕಲಸು ಮೇಲೋಗರವಾಗಿತ್ತು. ಆದರೆ ಮೊನ್ನೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕುವೆಂಪುವನ್ನು ಕಣ್ಣಾರೆ ಕಂಡಾಗ ಆಚಾರ್ಯರಿಗೆ ಒಂದು ಕಡೆ ನಿರಾಶೆ, ಒಂದು ಕಡೆ ಸಮಾಧಾನದ ಪ್ರಯಾಗ ಕ್ಷೇತ್ರದಂತಾಯಿತು ಮನಸು. ಅವರು ಸ್ಫಿಂಕ್ಸನಂತಿರಲಿಲ್ಲ- ತುಟಿಗಳು ತೆಳ್ಳಗಿದ್ದವು; ಗೋಮಟೇಶ್ವರನಂತಿರಲಿಲ್ಲ, ಅವರ ನಿಲುವು ಸಾಧಾರಣವಾಗಿತ್ತು; ಮೇಲಾಗಿ ಅವರ ಮೈಬಣ್ಣ ಶ್ರವಣಬೆಳಗುಳದವನಿಗಿಂತಲೂ ವೇಣೂರಿನವನದನ್ನು ಹೋಲುತ್ತಿತ್ತು; ಅವರ ಸಂಗಡವೇ ನಡೆಯುತ್ತಿದ್ದ ಬೇಂದ್ರೆಯವರು ನಗುತ್ತ ಕೆಲೆಯುತ್ತ ಹೊರಟಿದ್ದರು ಮತ್ತು ಬೇಂದ್ರೆಯವರಿಗೆ ಎದೆಯಿಲ್ಲೆಂದು ಹೇಳುವ ಎದೆ ಲಾಂಗೂಲಾಚಾರ್ಯರಿಗಿಲ್ಲ; ಅಧ್ಯಕ್ಷ ಭಾಷಣದ ನಲವತ್ತನಾಲ್ಕು ಪುಟಗಳಲ್ಲಿ ಎಲ್ಲಿಯೂ ಅವರು ನೆಲಬಿಟ್ಟು ಆಕಾಶದಲ್ಲಿ ಹಾರಿದಂತೆ ಅಷ್ಟೇಕೆ ತಮ್ಮ ತಲೆಯನ್ನು ಮೋಡಗಳಲ್ಲಿ ಮಡಗಿದವರಂತೆ ಕಾಣಲಿಲ್ಲ. ಅವರು ಲಾಂಗೂಲಾಚಾರ್ಯರ ಅಭಿರುಚಿಯ ಮಟ್ಟಿಗೆ ತುಸು ಉದ್ದವಾಗಿಯಾದರೂ ವ್ಯವಹಾರ್ಯವಾಗಿಯೇ ಮಾತಾಡಿದರು; ಗ್ರೀಕ್ ಅರೆಕಲ್ಲಿನ ಅಂಶ ಕೂಡ ಅವರ ಭಾಷಣದಲ್ಲಿರಲಿಲ್ಲ- ಅದು ಸ್ವಲ್ಪ ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಿದ್ದಾದರೂ ಸ್ಪಷ್ಟವಾದ ಕಟ್ಟಡವಾಗಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ಕುವೆಂಪು ತುಂಬ "ರೀಜನೇಬಲ್-ಕ್ರೀಚರ್" ಆಗಿ ಕಂಡರು. ಮಹಾಕವಿಯೊಬ್ಬನು ರೀಜನೇಬಲ್ ಆಗಿರುವುದಕ್ಕಿಂತ ಹೆಚ್ಚಿನ ನಿರಾಶಾದಾಯಕ ಸಂಗತಿ ಯಾವುದಾಗಿರಬಲ್ಲದು! ಆದರೆ ಮೇರು ಕವಿಗಳೂ ನಮ್ಮಂತೆ ಕಣ್ಣು, ಕಾಲು, ತಲೆಗಳುಳ್ಳ ಜೀವಿಗಳೆಂದರಿತಾಗ ಸಮಾಧಾನವೂ ಆಗದಿದ್ದೀತೆ?

ಕುವೆಂಪುವಿನ ಚೇತನ ಒಂದು ಇತ್ತಲೆ ಹಾವೆಂದು ತೋರುತ್ತದೆ. ಅದು ಒಂದು ಕಡೆ "ಸಾಮಾನ್ಯತಾ ಸುಖ"ಕ್ಕಾಗಿ ಹಾತೊರೆಯುತ್ತದೆ. ಮತ್ತೊಂದು ಬದಿಯಲ್ಲಿ "ದಿವ್ಯ ಭವ್ಯ"ಕ್ಕಾಗಿ ಕೈಯೆತ್ತುತ್ತದೆ. ಧಾರವಾಡದ ಸಮ್ಮೇಳನದಲ್ಲಿ ಅವರಿಗೆ ಎರಡೂ ಸುಖಗಳು ಸಿಕ್ಕಿರಬೇಕು. ಅಲ್ಲಿ ಸೇರಿದ ಜನಸಂದಣಿ ದಿವ್ಯವೆಂದು ಹೇಳಲಾಗದಿದ್ದರೂ ಭವ್ಯವೆಂದೊಪ್ಪಲೇಬೇಕು. ಪ್ರಥಮ ವರ್ಗದ ರಾಜಕಾರಣಿ ಕೂಡ ಅಸೂಯೆ ಪಡಬಹುದಾಗಿದ್ದ ಸಂದಣಿಯದು. ಸಮ್ಮೇಳನದಲ್ಲಿ "ಸ್ಟಾರ್ ಅಟ್ರಾಕ್ಶನ್" ಕುವೆಂಪುವೇ ಎನ್ನಲು ಏನೇನೂ ಹಿಂಜರಿಯಬೇಕಾಗಿಲ್ಲ. ಇಪ್ಪತ್ತು ವರ್ಷಗಳಿಂದ ಮೈಸೂರಿನ "ದಂತದ ಗೋಪುರ"ದಲ್ಲೇ ತಪಸ್ಸು ಮಾಡಿದ ಈ ಅಭಿನವ ವಾಲ್ಮೀಕಿಯ ಮೈಮೇಲೆ ಹುತ್ತ ಬೆಳೆದ ಲಕ್ಷಣಗಳೇನಾದರೂ ಕಾಣುವವೇ ಎಂದು ನೋಡುವ ಹಂಬಲದಿಂದಲೇ ಅನೇಕರು ಸಮ್ಮೇಲನಕ್ಕೆ ಬಂದಿದ್ದರಂತೆ... ಆದರೆ ಇಲ್ಲಿ, ವಲ್ಮೀಕವಲ್ಲ, ಬರಿ ಖಾದಿ ಜುಬ್ಬ ಮಾತ್ರ ಅವರ ಸುತ್ತ ಬೆಳೆದಿತ್ತು.. ಸಮ್ಮೇಲನ

ದಲ್ಲಿ ಇನ್ನುಳಿದುದೆಲ್ಲವೂ ಸಾಮಾನ್ಯವೇ- ಅಧ್ಯಕ್ಷರನ್ನು ಮಂಟಪಕ್ಕೆ ಕರೆತರುವಾಗ ಬಾರಿಸುತ್ತಿದ್ದ ಬ್ಯಾಂಡಿನ ಹಾಡು ಕೂಡ. ಯಾಕೆಂದರೆ ಅದು ಸದ್ಯಕ್ಕೆ ಬ್ಯಾಂಡಿನವರ ಸಾಮಾನ್ಯ ಹಾಡಾಗಿದೆ- ಕೆಲವೇ ದಿನಗಳ ಹಿಂದೆ ಒಂದು ಮದುವೆಯ ಮೆರವಣಿಗೆಯಲ್ಲಿ, ಅನಂತರ ಒಂದು ಶವದ ಮೆರವಣಿಗೆಯಲ್ಲಿ ಅದೇ ಬ್ಯಾಂಡಿನ ಹಾಡನ್ನು ಆಚಾರ್ಯರು ಕೇಳಿದ್ದರು. ಮೈಸೂರಲ್ಲಿ ನಾನಾ ತರದ ವಾದ್ಯ, ವೈಭವವನ್ನು ಅನುಭವಿಸಿದ ಕುವೆಂಪುಗೆ ಉತ್ತರ ಕರ್ನಾಟಕದ ಈ "ಸಾಮಾನ್ಯತಾ ಸುಖ" ಎಷ್ಟು ಮಟ್ಟಿಗೆ ಅಸಾಮಾನ್ಯವಾಗಿ ಕಂಡಿತೋ ತಿಳಿದಿಲ್ಲ.

ಆದರೆ ಈ ಸಾಮಾನ್ಯತಾ ಸುಖದ ಮಧ್ಯದಲ್ಲಿಯೂ ಅಸಾಮಾನ್ಯ ಘಟನೆಗಳು ಕೆಲವು ನಡೆಯದಿರಲಿಲ್ಲ. ವಿವಾಹ ಸಮಾರಂಭಗಳಲ್ಲಿ ವರನ ಪಲಾಯನ, ವಧುವಿನ ಅಂತರ್ಧಾನ ಮೊದಲಾದವುಗಳನ್ನು ನಾವು ಪ್ರತಿದಿನ ನಮ್ಮ ಸಾಮಾಜಿಕ ಚಿಕ್ಕ ಕಥೆಗಳಲ್ಲಿ ಓದುತ್ತೇವೆ. ಆದರೆ ಕನ್ಯಾಪಿತೃವಿನ ಕಣ್ಮರೆಯ ಸತ್ಯ ಕಥೆ ಮಾತ್ರ ಇದೇ ಮೊದಲು ನಡೆದದ್ದು. ವಿವಾಹ ಕರ್ಮ ಸಾಕಷ್ಟು ಮುಂದುವರಿದ ಮೇಲೆ ಒಮ್ಮೆಲೇ ಅಧ್ಯಕ್ಷ ಪದದ ಹೆಣ್ಣೊಪ್ಪಿಸಿ ಕೊಡಬೇಕಾಗಿದ್ದ ಹಿಂದಿನ ಅಧ್ಯಕ್ಷ ಆದ್ಯ ರಂಗಾಚಾರ್ಯರು ವೇದಿಕೆಯಲ್ಲಿಲ್ಲದಿರುವುದು ಯಾರ ಲಕ್ಷ್ಯಕ್ಕೋ ಬಂತು. ಲೌಡ್‌ಸ್ಪೀಕರುಗಳು "ಹಿಂದಿನ ಅಧ್ಯಕ್ಷ ರಂಗಾಚಾರ್ಯರು ವೇದಿಕೆಯ ಮೇಲೆ ಬರಬೇಕು!" ಎಂದು ಆರ್ತನಾದ ಮಾಡಿದವು. ಆದರೆ ನಿವರ್ತಮಾನ ಅಧ್ಯಕ್ಷರ ಕೂದಲು ಕೂಡ ಕಾಣಿಸುವುದಿಲ್ಲ! ವೇದಿಕೆಯಲ್ಲಿ ವಿಸ್ಮಯ, ಸಭೆಯಲ್ಲಿ ಗುಜುಗುಜು! "ಹುಬ್ಬಳ್ಳಿ ಮುನಸಿಪಾಲಿಟಿಯನ್ನು ರದ್ದು ಮಾಡಿದಾಗ ಅದರ ಅಧ್ಯಕ್ಷರಾಗಿದ್ದ ಮಹನೀಯರೂ ಕುರ್ಚಿಯನ್ನು ಬಿಟ್ಟು ಕೊಡೆನೆಂದು ಗಟ್ಟಿಯಾಗಿ ಕುಳಿತು ಬಿಟ್ಟಿದ್ದರಂತೆ," ಎಂದೊಬ್ಬರು ೧೯ ವರ್ಷ ಹಿಂದಿನ ಘಟನೆಯನ್ನು ಆಚಾರ್ಯರ ನೆನಪಿಗೆ ತಂದರು. ವೇದಿಕೆಯಲ್ಲಿ ಕಾರ್ಯಕ್ರಮವು ಮಂದಾಕ್ರಾಂತಾವೃತ್ತದಲ್ಲಿ ಸಾಗಿತು. ಲಾಂಗೂಲಾಚಾರ್ಯರಂಥ ವಿಪರೀತ ಬುದ್ಧಿಗಳು ಏನಾದರೊಂದು ಮೋಜಿನ ಮೇಜವಾನಿಯನ್ನು ನಿರೀಕ್ಷಿಸುತ್ತಿದ್ದರು. ಆದರೆ ಮತ್ತೆ ನಿರಾಶೆಯೇ ಆಯಿತು. ಆದ್ಯ ರಂಗಾಚಾರ್ಯರು ಪ್ರತ್ಯಕ್ಷರಾದರು. ಸಲೀಸಾಗಿ ಅಧ್ಯಕ್ಷ ಪದವಿಯನ್ನೊಪ್ಪಿಸಿಕೊಟ್ಟರು. ಆದದ್ದು ಮತ್ತೇನೂ ಅಲ್ಲ, ಹಿಂದಿನ ಅಧ್ಯಕ್ಷರನ್ನು ಕರೆತರಲು ಮಾಡಿದ್ದ ವ್ಯವಸ್ಥೆ ಹೇಗೋ "ಕುಸಿದು ಬಿದ್ದಿತ್ತು". ಆದ್ದರಿಂದ ಅವರು ಮಂಟಪವನ್ನು ತಲುಪಲು ತಡವಾಗಿತ್ತು ಅಷ್ಟೇ. ಸಮ್ಮೇಳನದ ಸಂಘಟಕರಲ್ಲಿ ಇಷ್ಟೆಲ್ಲಾ ಪ್ರೊಫೆಸರುಗಳಿರುವಾಗ ಇದೇನೂ ಆಶ್ಚರ್ಯಪಡಬೇಕಾದ ಪ್ರಮಾದವಲ್ಲ.

(೧೩-೫-೧೯೫೭)

೬. ಚಂಡಿಕಾ ಬಲಿ

ಮೊನ್ನೆ ಒಬ್ಬ ಸ್ನೇಹಿತರು ನನ್ನ ಹತ್ತಿರ ಬಂದು, ಗಂಭೀರವಾಗಿ "ಆಚಾರ್ರೆ, ಸಂಸ್ಕೃತವನ್ನು ಉಳಿಸುವ ಉಪಾಯ ಏನು?" ಎಂದು ಕೇಳಿದರು.

ನಾನು, "ಸಂಸ್ಕೃತವನ್ನು ಯಾಕೆ ಉಳಿಸಬೇಕು ಅನ್ನುತ್ತೀರಿ?" ಎಂದು ಕೇಳಿದೆ. ಪ್ರಶ್ನೆಗೆ ಇನ್ನೊಂದು ಪ್ರಶ್ನೆ ಕೇಳುವುದರಿಂದ ಅನೇಕ ತೊಂದರೆಗಳು ತಪ್ಪುತ್ತವೆಂದು ನಾನು ಕಂಡುಕೊಂಡಿದ್ದೇನೆ.

ನಾನು ನಿರೀಕ್ಷಿಸಿದ ಹಾಗೆಯೆ ಅವರು ಇದಕ್ಕೆ ತಯಾರಿರಲಿಲ್ಲ. ಸ್ವಲ್ಪ ತಲೆ ಕೆರೆದುಕೊಂಡು, "ಯಾಕೆಂದರೆ ಕೆಲವರು ಅದಕ್ಕೆ ವಿರೋಧಮಾಡಿ ಗಲಾಟೆ ಎಬ್ಬಿಸುತ್ತಿದ್ದಾರೆ," ಎಂದರು.

"ಅಯ್ಯೊ! ನಿರೋಧ ಉಪಯೋಗಿಸಿಯೂ ಮಕ್ಕಳು ಹುಟ್ಟುತ್ತಿವೆ. ಇನ್ನು ವಿರೋಧ ಮಾಡಿದಾಕ್ಷಣ ಸಂಸ್ಕೃತ ಸಾಯುತ್ತೇಯೆ?" ಎಂದು ಮತ್ತೆ ಚೆಂಡನ್ನು ಅವರ ಅಂಕಣಕ್ಕೆ ದಾಟಿಸಿದೆ.

"ಅಲ್ಲಾ, ಸಂಸ್ಕೃತವನ್ನು ಪ್ರಥಮ ಭಾಷೆಯ ಸ್ಥಾನದಿಂದ ಉಚ್ಚಾಟನೆ ಮಾಡಬೇಕೆಂತ ಅವರು ಕೂಗುತ್ತಾ ಇದ್ದಾರೆ. ಕೂಗಿದವರ ಮಾತಿಗೆ ಸರಕಾರಗಳು ಬಗ್ಗುತ್ತವೆ. ಸಂಸ್ಕೃತ ಉಚ್ಚಾಟನೆ ಆದರೆ ನಮ್ಮ ಸಂಸ್ಕೃತಿಯ ಗತಿಯೇನು? ಅದೂ ಉಚ್ಚಾಟನೆ ಆದ ಹಾಗೆಯೇ. ಇದನ್ನು ಹೇಗೆ ಸಹಿಸೋದು?"

"ನಮ್ಮ ಸಂಸ್ಕೃತಿಯನ್ನು ಯಾಕೆ ಉಳಿಸಬೇಕು?" ನಾನು ತುಂಬಾ ಅಮಾಯಕತನದಿಂದ ಕೇಳಿದೆ.

ಅವರು ಕಂಗೆಟ್ಟರು; ಮತ್ತು ಎಲ್ಲಾ ಕಂಗೆಟ್ಟವರ ಹಾಗೆ ಸಿಟ್ಟಿಗೆದ್ದರು. "ಏನು ಹೀಗೆಂದರೆ! ವೇದಕಾಲದಿಂದ ಅನೂಚಾನವಾಗಿ ನಡೆದುಬಂದ ನಮ್ಮ ಸಂಸ್ಕೃತಿ--"

ನಾನು ನಡುವೆ ಬಾಯಿ ಹಾಕಿ, "ನೀವು ಸಂಸ್ಕೃತದಿಂದ ಸಂಸ್ಕೃತಿಗೆ, ಸಂಸ್ಕೃತಿಯಿಂದ ವೇದ ಕಾಲಕ್ಕೆ ಜಿಗಿಯುತ್ತ ಹೋದರೆ ನನಗೆ ಕಷ್ಟವಾಗುತ್ತೆ. ನಿಮ್ಮ ಹಿಂದೆ ಓಡಿ ಬರುವ ಶಕ್ತಿ ನನಗಿಲ್ಲ. ಈಗ ನೋಡಿ, ವೇದಕಾಲ ಅಂತ ಹೇಳಿದಿರಿ. ನೀವು ವೇದ ಓದಿದೀರಾ?" ಎಂದೆ.

ಅವರು ಸ್ವಲ್ಪ ತಣ್ಣಗಾಗಿ, "ಇಲ್ಲ" ಎಂದರು.

"ನಾನೂ ಓದಿಲ್ಲ ಬಿಡಿ- ಗುಟ್ಟು ಯಾಕೆ! ವೇದಪಾಠಶಾಲೆಗೆ ಹೋಗಲ್ಲ ಅಂತ ಮನೇಲಿ ಜಗಳಾಡಿ ಇಂಗ್ಲಿಷ್ ಶಾಲೆಗೆ ಹೋದೆ. ಆಗ ಯಾರೂ ವೇದ ಓದಬಾರದು ಅಂತ ಚಳವಳಿ ಮಾಡಿರಲಿಲ್ಲ, ಆದರೂ ನೀವೂ ವೇದ ಓದಲಿಲ್ಲ, ನಾನೂ ಓದಲಿಲ್ಲ, ಆಗ ಅನೂಚಾನವಾಗಿ ಬಂದ ವೇದ ಓದದಿದ್ದರಿಂದ ಸಂಸ್ಕೃತಿ ಭ್ರಂಶವಾಗುತ್ತೆ ಅಂತ ನನಗೂ ತೋರಲಿಲ್ಲ. ನಿಮಗೂ ತೋರಲಿಲ್ಲ, ಯಾಕೆ?"

ಅವರು ಮುಖ ಸಿಂಡರಿಸಿಕೊಂಡು ಕೂತರು.

"ಅದು ಹೋಗಲಿ, ವೇದಕಾಲದಲ್ಲಿ ಯಾಕೆ, ನಮ್ಮಪ್ಪಗಳ ಕಾಲದಲ್ಲಿಯೂ ಜನ ತಲೆಯಮೇಲೆ ಏನು ಬಿಡುತ್ತಿದ್ದರು? ತಲೆಯ ಒಳಗಿನ ವಿಚಾರ ಅಲ್ಲ, ತಲೆಯ ಮೇಲಿನದು" ಎಂದು ನಾನು ತಲೆಯ ಮೇಲೆ ಕೈಯಾಡಿಸುತ್ತಾ ಕೇಳಿದೆ.

ಅವರಿಗೆ ಹೊಳೆಯಲಿಲ್ಲ.

“ಶೆಂಡಿ ಅಂತ ಇಂಗ್ಲಿಷ್ ಕಲಿತವರು ತಮಾಷೆ ಮಾಡುತ್ತಿದ್ದ ಚೆಂಡಿಕೆ ಅಥವಾ ಶಿಖೆಯನ್ನು ಬಿಡುತ್ತಿದ್ದರು. ಜಪ ಮಾಡುವಾಗ ‘ಭರ್ಗೋದೇವಸ್ಯ ಶಿಖಾಯೈ ವಷಟ್’ ಅಂತ ದಿನಾ ಅದನ್ನು ಮುಟ್ಟಿ ನೋಡಿ ತಮ್ಮ ಸಂಸ್ಕೃತಿ ತಮ್ಮ ತಲೇ ಮೇಲೆಯೇ ಇದೆ ಅಂತ ಖಾತ್ರಿ ಮಾಡಿ ಕೊಳ್ಳುತ್ತಿದ್ದರು. ನಾನು ಸ್ವಲ್ಪ ಬುದ್ಧಿ ಬಂದ ಕೂಡಲೆ ಯಾರ ಶೆಂಡಿ ವಿರೋಧಿ ಚಳವಳಿಯೂ ಇಲ್ಲದಿದ್ದರೂ ಶೆಂಡಿ ಕಟ್ ಮಾಡಿದೆ. ಅದಾಗಿ ಹದಿನೈದು ವರ್ಷಗಳಲ್ಲಿ ಸಂಸ್ಕೃತ ಶಾಲೆಯ ವಿದ್ಯಾರ್ಥಿಗಳೆ ತಮ್ಮ ತಲೆಯ ಮೇಲಿನ ಅನೂಚಾನ ಸಂಸ್ಕೃತಿಯ ವಿರುದ್ಧ ದಂಗೆಯೆದ್ದರು. ನೀವು ಸ್ವಾಮಿ, ಯಾವಾಗ ಚಂಡಿಕಾ ಬಲಿ ಪೂರೈಸಿದ್ದು?” ಎಂದು ಕೇಳಿದೆ.

ಅವರು ಸ್ವಲ್ಪ ಸಂಕೋಚದಿಂದ, “ಮದುವೆ ಆದ ಮೇಲೆ,” ಅಂತ ಸ್ವಲ್ಪ ದನಿ ತಗ್ಗಿಸಿ, “ನನ್ನ ಹೆಂಡತಿಯ ಪ್ರೀತಿಯ ಒತ್ತಾಯಕ್ಕೆ” ಎಂದು ಪೂರೈಸಿದರು.

“ಚಂಡೀ ಶಾಂತ್ಯರ್ಥಂ ಚಂಡಿಕಾ ಬಲಿಂ ದದ್ಯಾತ್, ಅಲ್ಲವೇ?” ಎಂದು ನಾನು ನಕ್ಕೆ.

ಅವರಿಗೆ ವಿಪರೀತ ಕೋಪ ಬಂತು. “ನೀವು ಬರೇ ಲೇವಡಿ ಮಾಡುತ್ತೀರಿ, ಚೆಂಡಿಕೆ ಎಲ್ಲಿ, ಸಂಸ್ಕೃತ ಎಲ್ಲಿ? ನಿಮಗೆ ನಮ್ಮ ಸಂಸ್ಕೃತಿಯ ಮೇಲೆ ಎಳ್ಳಷ್ಟು ಕಳಕಳಿ ಇಲ್ಲ. ಜರ್ಮನ್ನರು ಸಂಸ್ಕೃತ ಕಲಿಯುತ್ತಾರೆ, ಫ್ರೆಂಚರು ಸಂಸ್ಕೃತ ಕಲಿಯುತ್ತಾರೆ. ಅಮೇರಿಕದವರು ಕಲಿಯುತ್ತಾರೆ...”

“ಮತ್ತು ಅಮೇರಿಕದ ಹರೇಕೃಷ್ಣರು ಶೆಂಡಿ ಬಿಡುತ್ತಿದ್ದಾರೆ” ಎಂದು ನಾನು ಹೇಳುವುದರೊಳಗೆ ಅವರು ಧಡಧಡ ಹೆಜ್ಜೆ ಹಾಕುತ್ತ ಹೋಗಿಬಿಟ್ಟರು.

೭. ನಾಗ-ಪಂಚಮಿ

"ನಾಗರ ಪಂಚಮಿ ನಗುತ್ತಾ ಬಂತು, ದೀಪಾವಳಿ ಹಬ್ಬ ಅಳುತ್ತಾ ಹೋಯ್ತು" ಎಂಬ ಒಂದು ನಾಣ್ನುಡಿ ಈ ನಾಗಪಂಚಮಿಯ ದಿನ ನನ್ನ ಸವಿಸ್ಮರಣೆಗೆ ಬರುತ್ತದೆ! ಪಂಚಮಿ ಲಜ್ಜೆಗೆಟ್ಟ ಮನೆ ಅಳಿಯನಂತೆ ತಿಂಗಳಿಗೆರಡು ಸಲ ತಪ್ಪಿಲ್ಲ! ನಾಗಪಂಚಮಿ ಆಗೊಮ್ಮೆ ಈಗೊಮ್ಮೆ ಬಾರದೆ ದೀಪಾವಳಿ ಹಾಗೆ ವರುಷಕ್ಕೊಮ್ಮೆ ಬರುತ್ತದೆ. ದೀಪಾವಳಿಯೂ ವರುಷಕ್ಕೊಂದೇ ಹಬ್ಬ.

ಎರಡೂ ದೊಡ್ಡ ಹಬ್ಬಗಳೇ? ಎರಡೂ ಹಬ್ಬಗಳಲ್ಲಿ ಪೂಜೆಗಳಿವೆ. ಒಂದರಲ್ಲಿ ನಾಗ ಪೂಜೆ! ಇನ್ನೊಂದರಲ್ಲಿ ಅಳಿಯದೇವರ ಪೂಜೆ! ನಾಗಪೂಜೆ ಮಾಡದಿದ್ದರೆ ನಾಗದೇವರು ಬುಸುಗುಟ್ಟುವರೆಂಬುದು ಅನೇಕ ಜನರ ನಂಬಿಕೆ. ಅಳಿಯ ದೇವರನ್ನು ಪೂಜಿಸದಿದ್ದರೆ, ತಮ್ಮ ಮಗಳ ಮೇಲೆ ಬುಸುಗುಟ್ಟುವರೆಂದು ಮಾವಂದಿರ ಹೆದರಿಕೆ! ಇದು ಇಂದು ನಿನ್ನೆಯ ಮಾತಲ್ಲ.

ನಾಗಪೂಜೆಯ ಕಥೆಯೂ ದೊಡ್ಡದೇ. ಪರೀಕ್ಷಿದ್ರಾಜನು ಬೇಟೆಯಾಡಲು ಕಾಡಿಗೆ ತೆರಳಿದವನು ಶಮೀಕ ಋಷಿ ಇದ್ದಲ್ಲಿ ಬಂದ. ತಾನು ಹೊಡೆದ ಜಿಂಕೆ ಎಲ್ಲಿ ಹೋಯಿತೆಂದು ಕೇಳಲು ಋಷಿ ಮೌನವ್ರತ ಬಿಡಲಿಲ್ಲ. ಸಿಟ್ಟಿನಿಂದಲೂ, ಕುಚೇಷ್ಟೆಯಿಂದಲೂ ಒಂದು ಸತ್ತ ಹಾವನ್ನು ಪರೀಕ್ಷಿದ್ರಾಜ ಶಮೀಕನ ಕೊರಳಿಗೆ ಹಾಕಿ ಹೋದ. ಶಮೀಕನ ಮಗ ಶೃಂಗಿ ಬಂದು ನೋಡಿ ಪರೀಕ್ಷೀದ್ರಾಜನು ಹಾವು ಕಚ್ಚಿ ಸಾಯಲಿ ಎಂದು ಶಾಪವಿತ್ತ. ಅವನು ಸಾಯಲು ಅವನ ಮಗನಾದ ಜನಮೇಜಯನು ಹಾವಿನ ಜಾತಿಯನ್ನೇ ನಿರ್ಮೂಲ ಮಾಡಲು ಸರ್ಪಯಾಗವನ್ನು ಕೈಕೊಂಡ. ಆಗ ನಾಗರಾಜನ ತಂಗಿ ಮಗ ಆಸ್ತೀಕ ಋಷಿ ಬಂದು ಜನಮೇಜಯನನ್ನು ಮೆಚ್ಚಿಸಿ ಸರ್ಪಯಾಗವನ್ನು ನಿಲ್ಲಿಸಿದ. ಅಂದಿನಿಂದ ನಾಗ ಪಂಚಮಿ, ನಾಗಪೂಜೆ ಆರಂಭವಾಯಿತಂತೆ!

ದೇಶದ ಅನೇಕ ಹಳ್ಳಿಗಳಲ್ಲಿ ನಾಗ ಬನಗಳಿವೆ. ನಾಗನ ಕಲ್ಲುಗಳನ್ನು ಅಲ್ಲಿ ಪ್ರತಿಷ್ಠಿಸಿರುವರು. ಅಶ್ವತ್ಥ ಮರದ ಕೆಳಗೂ ನಾಗಕಲ್ಲುಗಳಿರುತ್ತವೆ. ದೇವಸ್ಥಾನಗಳಲ್ಲೂ ಅನೇಕ ಕಡೆ ನಾಗಕಲ್ಲುಗಳು ಕಾಣಸಿಗುತ್ತವೆ. ಮನೆಯೊಳಗೂ ನಾಗನ ಮೂರ್ತಿ ಇಟ್ಟು ದಿನಂಪ್ರತಿ ಪೂಜೆ ಮಾಡುವವರಿದ್ದಾರೆ. ರಾಹು ದೋಷವಿದ್ದರೆ ಅದರಿಂದ ಪರಿಹಾರವಾಗುತ್ತದಂತೆ! ಮಕ್ಕಳಾಗದವರು ನಾಗಕಲ್ಲು ಪ್ರತಿಷ್ಠಿಸಿದರೆ ಸುಬ್ರಮಣ್ಯ ಒಲಿವನಂತೆ! ದೃಷ್ಟಿ ಮಂದವುಳ್ಳವರೂ ನಾಗ ಪ್ರತಿಷ್ಠೆ ಮಾಡುವದೂ ರೂಢಿ.

ಈ ನಾಗಗಳಲ್ಲೂ ಒಂದು ಹೆಡೆ, ಮೂರು ಹೆಡೆ, ಏಳು ಹೆಡೆಯವುಗಳಿವೆ. ಎಲೆ ನಾಗ, ಗುಡೆನಾಗ ಇತ್ಯಾದಿ ಪ್ರತ್ಯೇಕ ಬಿರುದು ಬಾವಲಿಗಳನ್ನು ಹೊತ್ತವರಿದ್ದಾರೆ. ನಾಗಶಯನನೆಂದೆನ್ನಿಸಿಕೊಂಡ ಲಕ್ಷ್ಮೀ ನಾರಾಯಣನು ಏಳು ಹೆಡೆಯ ಹಾವಿನ ಮೇಲೆಯೇ ಒರಗಿರುವನು. ಶಂಕರನು ಕೊರಳಲ್ಲಿ ಕೂಡ ಈ ನಾಗರಾಜನನ್ನು ಧರಿಸಿಕೊಂಡಿರುವನು. ಆದಿಶೇಷ ಈ ಪೃಥ್ವಿಯನ್ನು ಎತ್ತಿ ಹಿಡಿದುಕೊಂಡಿರುವನು. ಪಾತಾಳದಲ್ಲಿ ಕೂಡ ನಾಗರಾಜನೇ ಅಧಿಪತಿ!

ಇದನ್ನರಿತರೆ ಸ್ವರ್ಗ ಮರ್ತ್ಯ ಪಾತಾಳಗಳಲ್ಲೂ ನಾಗನ ಮಹಿಮೆ ಬಹಳವೆಂದು ತೋರುತ್ತದೆ!

ಆದರೆ ಕವಿಗಳು ಮಾತ್ರ ನಾಗನ ಮೇಲೆ ಮುನಿದಂತೆ ತೋರುತ್ತದೆ. "ಪಾಕಿ ಪೊಡೆ ಸಂತಸಂ, ವಕ್ರಚರಿತಂ, ನುಡಿವೊಡೆರಡು ನಾಲಗೆ, ಧನವನೇ ಕೊಂಡಿರ್ಪ ಪರಮಲೋಭಂ, ಭೋಗದೊಡನೆ ಕೂಡಿದ ಬಾಳ್ವೆ, ಪರರ ಅಸುವನು ಉಗಿವ ಕೋಪಂ, ಉರಗಂಗ ಅರಸಿಂಗ ಅನ್ಯೋನ್ಯಮಾದೊಡಂ, ನಿರುತದಿಂ ಕಣ್ಣು ಕಿವಿಯೆ, ಕಿವಿಯೆ ಕಣ್ಣೆಂದೆಂಬ ಪರ್ಯಾಯ ಭೇದ ವಿದು" ಎಂದು ನುಡಿದಿದ್ದಾನೆ.

ನೋಡಲಿಕ್ಕೇನೋ ಚಂದ, ಆದರೆ ನಡತೆ ವಕ್ರ. ಎರಡು ನಾಲಿಗೆ. ಧನವಿದ್ದಲ್ಲಿ ಬಂದು ಕಾದು ಕೂತಿರುವ ಪರಮ ಲೋಭಿ. ಬಾಳ್ವೆಯಲ್ಲಿ ಭೋಗವೇ ಹೆಚ್ಚು. ಕೋಪ ಬಂದರೆ ಹಠ ಸಾಧಿಸಿ ಬೇರೆಯವರನ್ನು ಕಚ್ಚಿ ಪ್ರಾಣಹಾನಿ ಮಾಡದೆ ಬಿಡುವುದಿಲ್ಲ. ಅರಸನೂ, ಉರಗನೂ ಇವುಗಳಲ್ಲೆಲ್ಲ ಅನ್ಯೋನ್ಯಶೀಲರು. ಆದರೆ ಅರಸನಿಗೆ ಕಿವಿಯೇ ಕಣ್ಣು, ಉರಗನಿಗೆ ಕಣ್ಣೇ ಕಿವಿ! ಆದುದರಿಂದಲೇ ಉರಗಗಳ ಜಾತಿಗಳಲ್ಲಿ ಅನೇಕವಿದ್ದರೂ ಈ ಸರ್ಪಜಾತಿಯನ್ನು ಮಾತ್ರ ಪೂಜಿಸುತ್ತಾರೆ!

ಆದರೆ ಅನೇಕ ಆಧುನಿಕರು "ನಾಗ"ನೆಂದರೆ ಸರ್ಪವಲ್ಲವೆಂದೆನ್ನುತ್ತಾರೆ. ದೇವರು, ಯಕ್ಷರು, ಗಂಧರ್ವರು, ಕಿನ್ನರರು, ನರರು ಇತ್ಯಾದಿ ಜನರಂತೆ ನಾಗರೂ ಭಾರತದ ಒಂದು ಜಾತಿಜನ ಎಂದವರ ಹೇಳಿಕೆ. ಈಗ ಅಸಾಮ ಪ್ರಾಂತದಲ್ಲಿರುವ ನಾಗಜನರೇ ಅವರ ವಂಶೀಯರು ಎಂದೂ ಉದಾಹರಣೆ ಕೊಡುವರು. ಕುರು ಮತ್ತು ನಾಗಕುಲದವರೊಳಗೆ ಪರಸ್ಪರ ಸೌಹಾರ್ದವಿರಲಿಲ್ಲ. ನಾಗ ಜನರನ್ನು ಕುರುಕುಲದವರು ನಾನಾರೀತಿಯಾಗಿ ಪೀಡಿ ಸುತ್ತಿದ್ದರು. ಅವರ ಮನೆ ಮಾರುಗಳಿಗೆ ಬೆಂಕಿ ಹಚ್ಚುತ್ತಿದ್ದರು. ಮಾತ್ರವಲ್ಲ, ನಾಗ ಜನರನ್ನೂ ಬೆಂಕಿಗೆಸೆಯುತ್ತಿದ್ದರು. ಆಗ ನಾಗ ಕುಲದಲ್ಲಿ ಹುಟ್ಟಿದ ಆಸ್ತೀಕ ಋಷಿ, ಜನಮೇಜಯನ ಅರ ಮನೆಗೆ ಬಂದ. ಆಗ ಜನಮೇಜಯ ರಾಜನು ಸಿಂಹಾಸನದಿಂದ ಇಳಿದು ಋಷಿಯನ್ನು ಸ್ವಾಗ ತಿಸಿದ. "ಬೇಡ, ನನ್ನನ್ನೂ ಕೊಲ್ಲು! ನಾನು ನಾಗವಂಶದವನು" ಎಂದು ಆಸ್ತೀಕ ಹೇಳಿದ ಕೂಡಲೇ ಜನಮೇಜಯನಿಗೆ ಪಶ್ಚಾತ್ತಾಪವಾಯಿತು. ಅಂದು ಪಂಚಮಿಯಾಗಿದ್ದುದರಿಂದ "ನಾಗಪಂಚಮಿ" ಎಂದು ಕರೆಯಲ್ಪಟ್ಟಿತು. ಆ ಪುಣ್ಯದಿನದಲ್ಲಿ ರಾಜ್ಯದಲ್ಲೆಲ್ಲ ಹಬ್ಬ ಆಚರಿಸಲ್ಪ ಟ್ಟಿತು. ಹೊರತು ಸರ್ಪಪೂಜೆಯಲ್ಲ ಎಂದು ಹಲವರ ತರ್ಕ! ಅದನ್ನು ತಿಳಿದೋ ಏನೋ "ಹಾವಿಗೆ ಹಾಲೆರೆದರೇನು ಫಲ?" ಎಂದು ದಾಸರು ಹೇಳಿದ ಹಾಗೆ ತೋರುತ್ತದೆ!

ಹಾವಿಗೆ ಹಾಲೆರೆದರೆ ಫಲವಿಲ್ಲವೇನೋ ನಿಜ! ಆದರೆ ಅದು ಒಂದು ತಟಕು ಹಾಲು ಕುಡಿಯಬಹುದಾದರೂ ಉಂಡೆ, ತಂಬಿಟ್ಟು ಇತ್ಯಾದಿಗಳನ್ನು ತಿನ್ನುವುದಿಲ್ಲವಲ್ಲ! ಅದೇ ಪರಮ ಸಂತೋಷದ ವಿಷಯ! ವರುಷಕ್ಕೊಮ್ಮೆ ಬರುವುದರ ಬದಲು ಪ್ರತಿ ಪಂಚಮಿಗೂ ನಾಗಪಂಚಮಿ ಬರಲೆಂದು ಮಕ್ಕಳು, ಹೆಂಗಸರು ಬಯಸುವರಷ್ಟೇ. ಆ ರೀತಿ ಜನಮೇಜಯ ಮತ್ತು ಆಸ್ತೀಕ ಮಹರ್ಷಿಗಳು ಘೋಷಿಸಿದ್ದರೆ ಎಷ್ಟು ಚೆನ್ನಾಗುತ್ತಿತ್ತು!

೮. ನೃಪತುಂಗ ಎಂದರೇನು?

ಹುಬ್ಬಳ್ಳಿಯ ಹೊರವಲಯದಲ್ಲಿರುವ ಉಣಕಲ್ ಗುಡ್ಡಕ್ಕೆ ರಸ್ತೆ ಕೆತ್ತಿ ದೀಪ ಹಚ್ಚಿ "ನೃಪತುಂಗ ಬೆಟ್ಟ"ವೆಂದು ಪ್ರಮೋಷನ್ ಕೊಟ್ಟಿದ್ದರಿಂದ ಆ ರಾಜ ಕವಿಗೆ ಸಂತೋಷವಾಗಿ ದೆಯೋ, ದುಃಖವಾಗಿದೆಯೋ ನಾ ಕಾಣೆ. ತನಗೆ ಇದಕ್ಕಿಂತ ಎತ್ತರವಾದ ಬೆಟ್ಟ ಬೇಕೆಂದು ಅವನು ಆಶಿಸಿರಬಹುದಾಗಿದೆ. ಆದರೂ ಮುಖ್ಯವಾಗಿ ಕುರಿಗಳು ಮೇಯುತ್ತಿದ್ದ ಈ ಕುರುಚಲು ಗುಡ್ಡಕ್ಕೆ ನೃಪತುಂಗನ ಹೆಸರಿಟ್ಟಿದ್ದರಲ್ಲಿ ಒಂದು ಔಚಿತ್ಯವೂ ಇದೆ. ಆತನಿಗೆ 'ಅತಿಶಯ ಧವಳನೆಂದು' ಬಿರುದು ಇತ್ತಂತೆ. ಈ ಬೆಟ್ಟ ಅತಿಶಯವಾಗಿ ಬಿಳಿದಲ್ಲವಾದರೂ ಮಸುಕು ಬಿಳಿದಾದರೂ ಆದ ಶೇಡಿಮಣ್ಣಿನ ಗುಡ್ಡವಾಗಿದೆ. ನನಗೆ ಬಿಟ್ಟಿದ್ದರೆ ಇದಕ್ಕೆ ರಜತಗಿರಿ ಎಂದು ಹೆಸರು ಕೊಡುತ್ತಿದ್ದೆ. ಆದರೂ ಕನ್ನಡದ ಮೊದಲ ಕವಿಗೆ ಆತ ಆಳಿ ೧೧೦೦ ವರ್ಷ ಗಳ ನಂತರವಾದರೂ ಕನ್ನಡಿಗರು ಒಂದು ಬೆಟ್ಟವನ್ನು ದಯಪಾಲಿಸಿದರಲ್ಲಾ--ಅದೂ ಹುಬ್ಬ ಳ್ಳಿಯವರು! ಧಾರವಾಡದವರು ಒಂದು ಛಾನ್ಸ್ ಕಳಕೊಂಡರಲ್ಲ- ಮನೆಗೊಬ್ಬ ಸಾಹಿ ತಿಯಿದ್ದಾನೆಂದು ಹೆಮ್ಮೆಪಡುವ ಧಾರವಾಡದವರು- ಅದೇ ಈಗ ಸಮಾಧಾನ.

ಸಬರ್ಬನ್ ಪೊಲೀಸ್ ಕಚೇರಿಯ ಪಕ್ಕದ ಕೇಶ್ವಾಪುರ ರಸ್ತೆಯ ಬುಡದಲ್ಲಿ "ನೃಪತುಂಗ ಬೆಟ್ಟಕ್ಕೆ ದಾರಿ" ಅಂತ ಒಂದು ಕಲ್ಲು ಇರುವುದನ್ನು ಕಂಡು ಬಸ್ಸಿಗೆ ಕಾಯುತ್ತಿದ್ದ ಮಹ ನೀಯರೊಬ್ಬರು "ನೃಪತುಂಗ ಎಂದರೇನು? ತುಂಗಾ ನದಿಯ ಶಾಖೆಯೇನಾದರೂ ಈ ಬೆಟ್ಟದಿಂದ ಹೊರಡುತ್ತೆಯೇ" ಎಂದು ಜಿಜ್ಞಾಸಿಸಿದರು. ಹೇ ನೃಪತುಂಗದೇವ! ನೀನು ರಾಷ್ಟ್ರ ಕೂಟ ಚಕ್ರವರ್ತಿಯಾದರೇನು? "ಕನ್ನಡಿಗರ್ ಕುರಿ" ಎಂದು ಎಂದೋ ನಿನಗೆ ಗೊತ್ತಾಗಿ ಹೋಗಿತ್ತು ಅದಕ್ಕಾಗಿಯೇ ಕುರಿ ಮೇಯುವ ಗುಡ್ಡಕ್ಕೆ ನಿನ್ನ ಹೆಸರು ಕೊಟ್ಟಿದ್ದೇವೆ. ಇಂದು ನಿನ್ನ ಹೆಸರನ್ನು ಕನ್ನಡಿಗರು ಮರೆತಿದ್ದಾರೆ. ಮಾತ್ರವಲ್ಲ ನೀನು ಮನುಷ್ಯನೋ, ನದಿಯೋ ಎಂದು ಕೂಡ ನಮಗೆ ಗೊತ್ತಿಲ್ಲ. ನಿನ್ನ ರಾಜಧಾನಿ ಈಗ ಕಗ್ಗಳ್ಳಿಯಾಗಿ ಬಿಟ್ಟಿದೆ. ಮಾನ್ಯಖೇಟ ಮಳ ಖೇಡವಾಗಿದೆ. ಅರಸರ ಹೆಸರುಗಳು ಮಾತ್ರವಲ್ಲ, ಕವಿಗಳ ಹೆಸರುಗಳೂ ಕಾಲ ರಾಯನಿಗೆ ತುತ್ತಾಗಬಲ್ಲವು!

ನೃಪತುಂಗನ ಬಗ್ಗೆ ಜಿಜ್ಞಾಸೆ ಮಾಡಿದವರಿಗೆ ನಾನು ಹೀಗೆ ವಿವರಣೆ ಕೊಟ್ಟೆ: ಈ ನೃಪತುಂಗ ಎಂದರೆ ೧೧೦೦ ವರ್ಷಗಳ ಹಿಂದಿದ್ದ ನಮ್ಮ ಚಕ್ರವರ್ತಿ, ಚಕ್ರವರ್ತಿಗಳೆಲ್ಲರ ಹೆಸ ರನ್ನೂ ನಾವು ಗುಡ್ಡಗಳಿಗೆ ಕೊಡುವುದಿಲ್ಲ. ಈ ಚಕ್ರವರ್ತಿ ಬರೇ ರಾಜ್ಯವಾಳದೆ ಕವಿತೆಗಳನ್ನೂ ಬರೆಯುತ್ತಿದ್ದ. ಕೆಲವರ ಅಭಿಪ್ರಾಯದಲ್ಲಿ ಆತನು ಸ್ವತಃ ಈ ಕಾವ್ಯವನ್ನು ಬರೆಯಲಿಲ್ಲ. ಈಗಿನ ಮಂತ್ರಿಗಳು ಬೇರೆಯವರಿಂದ ತಮ್ಮ ಭಾಷಣಗಳನ್ನು ಬರೆಸುವ ಹಾಗೇ ಇವನೂ ಯಾರಿಗೋ ದುಡ್ಡುಕೊಟ್ಟು ಬರೆಸಿದ್ದ. ಆದರೆ ಇತರ ವಿದ್ವಾಂಸರು ಇದನ್ನೊಪ್ಪುವುದಿಲ್ಲ. ಇಂದಿನ ಮಂತ್ರಿಗಳ ತಲೆಯ ಸುತ್ತಳತೆ ನೋಡಿ ಹಿಂದಿನ ರಾಜರ ಯೋಗ್ಯತೆಯನ್ನು ತೂಗ ಲಾಗದೆಂದು ಅವರು ಹೇಳುತ್ತಾರೆ. ಅದೇನೇ ಇರಲಿ, ಈ ರಾಜನು ಬರೆದ ಅಥವಾ ಗೋಸ್ಟ್ ರೈಟ್ ಮಾಡಿಸಿದ ಪುಸ್ತಕದಲ್ಲಿ ಆ ಕಾಲದ ಕನ್ನಡ ನಾಡಿನ ಬಗ್ಗೆ ಕೆಲ ವಿಷಯಗಳನ್ನೊದಗಿಸಿ ಕನ್ನಡಿಗರ ಮನಶ್ಶಾಂತಿಯನ್ನು ಕೆಡಿಸಿದ್ದಾನೆ. ಉದಾಹರಣೆಗೆ ಕಾವೇರಿಯಿಂದ ಗೋದಾವರಿವ ರೆಗೂ ಕನ್ನಡ ನಾಡು ವಿಸ್ತರಿಸಿದೆಯೆಂದು ಅವನು ಹೇಳಿದ್ದಾನೆ. ಇಷ್ಟು ವಿಸ್ತಾರವಾದ ಕನ್ನಡ

ನಾಡು ಕೈ ಬಿಟ್ಟು ಈಗ ಅದರ ಅರ್ಥ ಕೂಡ ಉಳಿಯದೆ ಇರಲು ಕಾರಣರಾರು ಎಂಬ ಬ
ಅನೇಕ ನಿದ್ದೆ ಬಾರದವರು ಕೂಗೆಬ್ಬಿಸಿ ನಿದ್ದೆ ಬರುವವರಿಗೆ ತೊಂದರೆಯುಂಟು ಮಾಡು
ದ್ದಾರೆ. ತೀರ ಇತ್ತೀಚಿಗಿನ ಥಿಯರಿಯ ಪ್ರಕಾರ ಸಂಸ್ಥಾ ಕಾಂಗ್ರೆಸ್ ಮಂತ್ರಿ ಮಂಡಲವೇ ಕನ್ನ
ಗರ ರಾಜ್ಯಹ್ರಾಸಕ್ಕೆ ಜವಾಬ್ದಾರಿಯೆಂದು ಭಾವಿಸಲಾಗಿದೆ. ಈ ಥಿಯರಿಯನ್ನು ಪ್ರತಿಪಾದಿಸಿ
ಮಹನೀಯರಿಗೆ ಇತಿಹಾಸೋತ್ತುಂಗ ಎಂಬ ಬಿರುದನ್ನು ಕೊಡಲಾಗುವುದೆಂದು ತಿ
ಯುತ್ತದೆ. ಈ ಥಿಯರಿಯನ್ನು ಒಪ್ಪದವರು ಕೂಡ ಕನ್ನಡಿಗರು ತಮ್ಮ ಕಳೆದು ಹೋದ ರಾ
ವನ್ನು ಪುನಃ ದೊರಕಿಸಲು ಅಗತ್ಯವಿದ್ದರೆ ಹಿಂದು ಸೈನ್ಯ ಕಟ್ಟಬೇಕೆಂದು ಒಪ್ಪುತ್ತಾರೆ. ವಾಟಾ
ನಾಗರಾಜರಾಯರನ್ನು ಈ ಸೈನ್ಯದ ಮುಖ್ಯ ಸೇನಾಪತಿಯಾಗಿ ಮಾಡಬೇಕೆಂದು ಕೆಲವ
ಸೂಚಿಸಿದ್ದಾರೆಂದು ನಂಬಲರ್ಹವಾದ ಕಡೆಗಳಿಂದ ತಿಳಿಯುತ್ತದೆ. ಆದರೆ ಸದ್ಯ ಬೆಂಗಳೂರನ
ಉಳಿಸಿಕೊಳ್ಳುವುದಕ್ಕೇ ಅವರ ಎಲ್ಲಾ ಶಕ್ತಿಯೂ ಅಗತ್ಯವಾಗಿರುವುದರಿಂದ ಅವರನ
ಕಾವೇರಿಯ ಕಡೆಗಾಗಲೀ, ಗೋದಾವರಿಯ ಕಡೆಗಾಗಲೀ ಕಳಿಸಿದರೆ ಇದ್ದದ್ದೂ ಕೈ ಬಿಟ
ಹೋಗಬಹುದೆಂಬ ಭಯವಿದೆ.

ನೃಪತುಂಗನು ಇನ್ನೂ ಕೆಲವು ವಿಷಯಗಳನ್ನು ಹೇಳಿದ್ದಾನೆ. "ಕನ್ನಡಿಗರ್ ಕುರಿತೋ
ದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂಬುದು ಇವುಗಳಲ್ಲಿ ಮಹತ್ವದ ಒಂದ
ಸಂಗತಿ. ಇದರಿಂದ ಈಗಿನ ಕಾಲದಂತೆ ಆಗ್ಗೆಯೂ ಕನ್ನಡದ ಕವಿಗಳು ಯಾವ ಅಭ್ಯಾ
ಮಾಡದೆ ಕವಿತೆ ಬರೆಯುತ್ತಿದ್ದರೆಂದು ಅರ್ಥವಾಗುತ್ತದೆ. ಇದನ್ನೇ ಅವರು ಪೊಸಗನ್ನಡದೊ
ಪೇಳಿಂ-ಅರ್ಥಾತ್ ಆಗಲೂ ಅವರು ನವ ಕವಿತೆಗಳನ್ನು ಬರೆಯುತ್ತಿದ್ದರು.

ನೃಪತುಂಗ ಬೆಟ್ಟಕ್ಕೆ ಹೋಗುವ ಮಾರ್ಗಕ್ಕೆ ಕವಿರಾಜಮಾರ್ಗವೆಂದು ಹೆಸರಿಡಬೇಕೆಂ
ಒಬ್ಬ ಕಾರ್ಪೋರೇಟರರು ಸೂಚಿಸಿದ್ದಾರೆ. ಈ ಕಾರ್ಪೋರೇಟರರು ಸ್ವತಃ ಕವಿಗಳಾಗಿದ್ದಾ
ಮತ್ತು ನೃಪತುಂಗ ಬೆಟ್ಟದ ಬುಡದಲ್ಲೇ ವಾಸಿಸುತ್ತಾರೆಂಬುದು ನಿಜ. ಆದರೆ ಅವರ ಮನೆ
ಮುಂದೆ ಈ ಕವಿರಾಜ ಮಾರ್ಗ ಹೋಗುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಕವಿರಾಜ ಮಾರ್ಗ
ದಗುಂಟ ಯಾವ ಕವಿಯೂ ವಾಸಿಸುತ್ತ ಇಲ್ಲ. ಕವಿರಾಜಮಾರ್ಗದ ಒಂದು ಪಕ್ಕಕ್ಕೆ ಕರ್ನಾಟ
ಮೆಡಿಕಲ್ ಕಾಲೇಜ್ ಆಸ್ಪತ್ರೆ ಇದೆ. ಇಲ್ಲಿ ಕೆಲವು ಕವಿಗಳಿದ್ದಾರೆ. ಆದರೆ ಅವರು ಇರುವುದ
ಆಸ್ಪತ್ರೆಯ ಆಚೆ ಕಡೆಗಿರುವ "ವಿವೇಕ" "ಆನಂದ" ಮುಂತಾದ ಹಾಸ್ಟೆಲ್ಲುಗಳಲ್ಲಿ. (ಕವಿತೆ
ಳನ್ನು ಬರೆಯುವವರಿಗೆ "ವಿವೇಕ"ದಲ್ಲಿ ರೂಂ ಕೊಡಲು ಸಾಧ್ಯವಿಲ್ಲೆಂದು ಅಧಿಕಾರಿಗ
ಸಕಾರಣವಾಗಿಯೇ ವಾದಿಸುತ್ತಿದ್ದಾರೆಂದು ವದಂತಿ ಇದೆ.) ಹೀಗಿರುವುದರಿಂದ ಈ ರಸ್ತೆಗೆ ಕ
ರಾಜಮಾರ್ಗವೆಂದು ಹೆಸರು ಕೊಡಲು ಕೆಲವರ ವಿರೋಧವಿದೆ. ಆದರೆ ಬಂಗಾಲದಲ್ಲಿ ಕ
ರಾಜ ಅಂದರೆ ವೈದ್ಯ ಎಂದು ಅರ್ಥವಿದೆಯಂತೆ. ಈ ರಸ್ತೆಯಲ್ಲಿ ಅನೇಕ ವೈದ್ಯರನ್ನು ನೀ
ಕಾಣಬಹುದಾದ್ದರಿಂದ ಹಾಗೆ ಹೆಸರು ಕೊಡುವುದರಲ್ಲೇನೂ ಪ್ರತ್ಯವಾಯವಿಲ್ಲವೆಂ
ಇನ್ನೊಂದು ಪಕ್ಷದವರ ವಾದ.

ನೃಪತುಂಗ ಬೆಟ್ಟ, ಕವಿರಾಜಮಾರ್ಗ ಈ ಹೆಸರುಗಳಿಗೆ ಇರುವ ಒಂದೇ ಆಕ್ಷೇಪ ಇದ
ಈ ಬೆಟ್ಟವನ್ನು ಪಿಕ್ನಿಕ್ ಕೇಂದ್ರವಾಗಿ ಉಪಯೋಗಿಸಲು ಯೋಜಿಸಿದ್ದಾಗಿದೆ. ಇದ
ಸಂಬಂಧಿಸಿ ಕವಿಗಳ ಹೆಸರುಗಳನ್ನು ಕೊಟ್ಟರೆ ಬೆಟ್ಟದ ಮೇಲೆ ದಿನವೂ ಕವಿತಾ ವಾಚನ ನ
ಯುತ್ತಿರಬಹುದೆಂದು ಹೆದರಿ ಜನರು ಬರುವುದನ್ನೇ ನಿಲ್ಲಿಸಲಿಕ್ಕಿಲ್ಲವೆ?--ಅಂತ.

೯. ಪಂಪ ಹಾಗೂ ಪಂಪ್

ಪಂಪ ಕವಿಯನ್ನು ಆದಿಪಂಪನೆಂದೂ ಸುಕವಿನಿಳಿಂಪನೆಂದೂ, ನಾಡೋಜ ಪಂಪನೆಂದೂ ಹೆಸರಿಸಲಾಗಿದೆ. ಈ ಹೆಸರಿಗೂ ಈಗ ನೀರು ಎತ್ತುವದಕ್ಕೂ, ಟ್ಯೂಬುಗಳಿಗೆ ಗಾಳಿಹಾಕುವುದಕ್ಕೂ ಉಪಯೋಗಿಸುವ ಯಂತ್ರಕ್ಕೂ ಏನಾದರೂ ಸಂಬಂಧವುಂಟೇ ಎಂಬುದು ವಿಚಾರಣೀಯವಾಗಿದೆ. ಅವನು ಕವಿಯಲ್ಲದೆ ಸೇನಾನಾಯಕನೂ ಆಗಿದ್ದನೆಂದು ಗೊತ್ತಾಗಿದೆ. ಹೀಗೆ ಒಂದಕ್ಕಿಂತ ಹೆಚ್ಚು ಮುಖಗಳಲ್ಲಿ ಪ್ರತಿಭೆಯುಳ್ಳ ಅವನು ಪಂಪುಗಳ ಮೂಲ ನಿರ್ಮಾಪಕನಾಗಿದ್ದನೆಂದು ಹೇಳುವುದು ಅಸಂಗತವಾಗಿಲ್ಲ. ಚೇಂಬರ್ಸ್ ಇಂಗ್ಲಿಷ್ ಕೋಶದಲ್ಲಿ Pump ಶಬ್ದದ ನಿರುಕ್ತದ ಬಗ್ಗೆ Origin unknown ಅಂದರೆ ಮೂಲ ಗೊತ್ತಿಲ್ಲ ಎಂದು ಪ್ರಾಂಜಲವಾಗಿ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಪಂಪನಿಗೂ ಪಂಪಿಗೂ ಸಂಬಂಧವಿಲ್ಲೆಂದು ಯಾರಾದರೂ ನಿಸ್ಸಂದಿಗ್ಧವಾಗಿ ಸಿದ್ಧಪಡಿಸುವವರೆಗೆ ಆತನೇ ಪಂಪುಗಳ ನಿರ್ಮಾಪಕನೆಂಬ ನನ್ನ ಊಹೆ ನಿಲ್ಲುತ್ತದೆ. ಅರಿಕೇಸರಿ ರಾಜನು ಅವನಿಗೆ ಉಂಬಳಿ ಕೊಟ್ಟ ಧರ್ಮಪುರಿ ಅಗ್ರಹಾರದಲ್ಲಿ ಒಂದು ದೊಡ್ಡ ಕೆರೆ ಇತ್ತೆಂದು ಶಾಸನದಿಂದ ತಿಳಿಯುತ್ತದೆ. ಈ ಕೆರೆಗೆ ತನ್ನ ಆವಿಷ್ಕಾರವಾದ ಪಂಪು ಹಾಕಿ ಅವನು ತನ್ನ ದತ್ತಿಯ ಹೊಲಗಳಿಗೆ ನೀರು ಹಾಯಿಸುತ್ತಿದ್ದಿರಬೇಕು. ಪಂಪ ಸೃಷ್ಟಿಸಿದ್ದರಿಂದ ಅದು ಪಂಪೆನಿಸಿತು.

ಪಂಪ ಎಂಬ ಹೆಸರಿಗೆ ಕವಿತೆ ಕಟ್ಟುವ ಅರಿಷ್ಟವೊಂದು ಅಂಟಿಕೊಂಡಂತೆ ಕಾಣುತ್ತದೆ. ಈ ಆದಿ ಪಂಪನಲ್ಲದೆ ಕನ್ನಡದಲ್ಲಿ ಬೇರೆ ಪಂಪರೂ ಕವಿಗಳಾಗಿದ್ದಾರೆ. ಭಾರತವನ್ನು ಬರೆದ ಈ ಪಂಪನಲ್ಲದೆ ಇನ್ನೊಬ್ಬ ಪಂಪ ರಾಮಾಯಣವನ್ನು ಬರೆದಿದ್ದಾನೆ. ಅವನಿಗೆ ಅಭಿನವ ಪಂಪನೆಂದು ಹೆಸರಿದೆ. ಆದಿ ಪಂಪನಿಗೆ ಕಾವ್ಯ ಬರೆಯುವುದಲ್ಲದೆ ಯುದ್ಧ ಮಾಡುವ ಹಾಬಿ (ಪಂಪುತಯಾರಿಸುವ ಹವ್ಯಾಸವನ್ನು ಇಲ್ಲಿ ಗಮನಕ್ಕೆ ತೆಗೆದುಕೊಂಡಿಲ್ಲ) ಇದ್ದ ಹಾಗೆ ಅಭಿನವ ಪಂಪನಿಗೆ ಹೆಂಗಸರೊಡನೆ ಕವಿತಾ ಪಂದ್ಯಗಳನ್ನು ಆಡುವ ಹವ್ಯಾಸವಿತ್ತು. ಈ ಹವ್ಯಾಸದ ಫಲವಾಗಿ ಕಂತಿ ಹಂಪರ ಪದಗಳು ಇಂದಿಗೂ ಉಳಿದು ಬಂದಿವೆ.

ಈ ಇಬ್ಬರ ನಂತರ ತಮ್ಮ ಕಾವ್ಯಗಳನ್ನು ಗೆದ್ದಲುಗಳಿಗೆ ಆಹಾರ ಮಾಡಿ ಅಜ್ಞಾತರಾಗಿ ಉಳಿದ ಇತರ ತ್ಯಾಗಿ ಹಂಪರೂ ಇದ್ದಿರಬಹುದಾಗಿದೆ. ಅವರ ಬಗ್ಗೆ ಏನೂ ಹೇಳುವುದು ಕಷ್ಟ. ಆದರೆ ಇದೇ ಶತಮಾನದಲ್ಲಿ ಹಂಪ ನಾಗರಾಜಯ್ಯ ಎಂಬುವರು ಕವಿತೆಗಳನ್ನು ಬರೆದದ್ದು ಗೆದ್ದಲುಗಳಿಂದ ಪೂರ್ತಿ ರಕ್ಷಿಸಲ್ಪಟ್ಟಿದೆ. ಇವರಿಗೂ ಕವಿತೆಯಲ್ಲದೆ ಭಾಷಾಶಾಸ್ತ್ರ, ಸಾಹಿತ್ಯ ಪರಿಷತ್ ಸಂಘಟನೆ ಮೊದಲಾದ ಇತರ ಹವ್ಯಾಸಗಳಿವೆಯೆಂದು ನಂಬಲರ್ಹವಾದ ವರದಿಗಳಿವೆ. ಆದಿ ಪಂಪನಂತೆ ಇವರೂ ಯುದ್ಧವಿಶಾರದರು ಪರಿಷತ್ತಿನ ಅಧ್ಯಕ್ಷತೆಯನ್ನು ನಿಖರವಾದ ಕದನಗಳಲ್ಲಿ ಗೆದ್ದುಕೊಂಡಿದ್ದಾರೆ. ಇವರು ಆದಿಪಂಪನ ಅವತಾರವೇ ಇರಬಹುದು. ಆದರೆ ಅಭಿನವ ಪಂಪನಂತೆ ಇವರಿಗೂ ತಮ್ಮ ಸಾಹಿತ್ಯ ಜಾಡ್ಯವನ್ನು ಹೆಂಗಸರಿಗೆ ದಾಟಿಸುವ ಸಾಮರ್ಥ್ಯ ಇದೆ. ಇವರ ಪತ್ನಿ ಕಮಲಾ ಹಂಪನಾ ಕೂಡ ಸಾಹಿತಿಗಳು. ಕಮಲಾ ಹಂಪನಾ ಅವರು ಸಾಹಿತ್ಯ ವೈರಸ್ ಪೀಡಿತರಾದ ಮೇಲೆ ಹಂಪನಾ ಅವರನ್ನು ಮದುವೆಯಾದರೋ ಇವರನ್ನು ಮಾಡಿಕೊಂಡ ಮೇಲೆ ಅವರಿಗೆ ವೈರಸ್ ಬಾಧೆ ಬಂತೋ ನನಗಿನ್ನೂ ಖಚಿತವಾಗಿಲ್ಲ. ನಾವೀಗ ವಿಚಾರಿಸುತ್ತಿರುವುದು ಆದಿಪಂಪನನ್ನು ಕುರಿತಾದ್ದರಿಂದ ಹಂಪನಾ

ಬಗ್ಗೆ ನನ್ನ ಅಮೂಲ್ಯ ಸಂಶೋಧನೆಯನ್ನು ಮುಂದೆ ಹಾಕಬೇಕಾಗಿದೆ.

ಕನ್ನಡ ಕವಿಗಳಲ್ಲಿ ಹೆಚ್ಚಿನವರು ಸಂಸ್ಕೃತ ಕವಿಗಳಂತೆ ತಮ್ಮ ಸ್ವಂತದ ಬಗ್ಗೆ ಏನೂ ಹೇಳ ಮುಗುಂ ಆಗಿರಲಿಲ್ಲ. ತಮ್ಮ ಕುಲಗೋತ್ರ ವಗೈರೆ ಬಗ್ಗೆ, ತಮಗೆ ಆಶ್ರಯ ಕೊಟ್ಟವರ ಬ ಧಾರಾಳವಾಗಿ ಹೇಳಿಕೊಂಡಿದ್ದಾರೆ. ಮುಂದಿನವರು ತಮ್ಮ ಇರವು ನೆರವುಗಳ ಬಗ್ಗೆ ಸುಮ್ಮ ತಲೆ ಕೆಡಿಸಿಕೊಳ್ಳಬಾರದೆಂಬ ಸದುದ್ದೇಶ ಇದಕ್ಕೆ ಕಾರಣವಾಗಿರಬಹುದು. ಹೆಚ್ಚಿನವರ ತಮ್ಮನ್ನು ಹೊಗಳುವ ತೊಂದರೆಯೂ ಮುಂದಿನವರೆಗೆ ಇರಬಾರದೆಂದು ಆತ್ಮ ಪ್ರಶಂಸೆಯ ಧಾರಾಳತನ ತೋರಿಸಿದ್ದಾರೆ. ಆದರೆ ಇದರಿಂದೆಲ್ಲ ಅವರ ಬಗ್ಗೆ ಊಹಾಪೋಹ ತಪ್ಪಿಲ್ಲ ಪಂಪ ಕವಿಯೂ ಇದಕ್ಕೆ ಅಪವಾದವಾಗಿಲ್ಲ. ತೊಂದರೆಯೆಂದರೆ ನಿಮಗೆ ಹೆಚ್ಚು ತಿಳಿದಷ್ಟು ಇನ್ನಷ್ಟು ಹೆಚ್ಚು ತಿಳಿಯುವ ಆತುರವುಂಟಾಗುತ್ತದೆ. ಅವರು ತಮ್ಮನ್ನು ಹೊಗಳಿಕೊಂಡು ರಿಂದಲೇ ಅವರನ್ನು ತೆಗಳಬೇಕೆಂಬ ಮನುಷ್ಯ ಸಹಜ ಹಂಬಲವುಂಟಾಗುತ್ತದೆ. ಪಂಪ ಕ ತನ್ನ ಎರಡು ಮಹಾಕಾವ್ಯಗಳಲ್ಲಿ ತಾನು, ತನ್ನಪ್ಪ, ತನ್ನಜ್ಜ, ಮುತ್ತಜ್ಜಂದಿರ ಬಗ್ಗೆ ಅಲ್ಲದೆ ತ ತಾಯಿ, ಅವಳಪ್ಪ ಯಾರು, ಎಲ್ಲಿಯವರು ಎಂದೆಲ್ಲ ಸವಿಸ್ತಾರವಾಗಿ ಬರೆದಿದ್ದಾನೆ. ಅದು ಸಾಲದ್ದಕ್ಕೆ ಅವನ ತಮ್ಮ ಜಿನವಲ್ಲಭ ಬೇರೆ ಒಂದು ಉದ್ದಾನುದ್ದ ಶಾಸನದಲ್ಲಿ, ಕನ್ನಡ ತೆಲುಗ ಎರಡೂ ಭಾಷೆಗಳಲ್ಲಿ ಹೆಚ್ಚಿನ ವಿವರಗಳನ್ನು ಕೆತ್ತಿಸಿ ಹೋಗಿದ್ದಾನೆ. ಆದರೆ ಇದಾವುದು ಊಹಾಪೋಹಕಾರರನ್ನು ನಿರುತ್ಸಾಹಗೊಳಿಸಲು ಸಮರ್ಥವಾಗಿಲ್ಲ. ಬದಲಿಗೆ ಅವರಿ ಇನ್ನಷ್ಟು ಚಕ್ಕುಲಿ ರಾಶಿಯನ್ನು ಒದಗಿಸಿದಂತಾಗಿದೆ.

ಉದಾಹರಣೆಗೆ ಪಂಪನ ಮುತ್ತಜ್ಜ ಮಾಧವ ಸೋಮಯಾಜಿ; ಕಮ್ಮೆ ಬ್ರಾಹ್ಮಣ ಹೋಮ ಹವನಗಳನ್ನು ಮಾಡಿ "ಕರಿದು ಮಾಡಿದಂ ನಿಜಯಶಮಂ" ಎಂದಿದ್ದಾನೆ. ತ ತಾಯಿ ಅಣ್ಣಿಗೇರಿಯವಳೆಂದೂ ಮಾಹಿತಿ ಲಭ್ಯ ಮಾಡಿದ್ದಾನೆ.

ಇದನ್ನೋದಿದ ಕೂಡಲೆ ನನ್ನ ಸಂಶೋಧಕ ಬುರುಡೆಯಲ್ಲಿ ಗುಡುಗುಡು ಎಬ್ಬಿಸುವ ಪ್ರ ಗಳೆಂದರೆ, ಮಾಧವ ಸೋಮಯಾಜಿಯ ಅಪ್ಪ ಯಾರು? ಅವನು ಹೋಮ-ಹವ ಮಾಡುತ್ತಿದ್ದನೇ ಇಲ್ಲವೇ? ಆಂಧ್ರದಲ್ಲಿದ್ದ ಪಂಪನ ತಂದೆ ಅಭಿರಾಮಯ್ಯನಿಗೆ ಅ ಗೇರಿಯಿಂದ ಹೆಣ್ಣು ತಂದರೆಂದು ಮಗನೇ ಹೇಳುತ್ತಾನಲ್ಲ. ಇಷ್ಟು ದೂರದಿಂದ ಹೆಣ್ಣು ತ ಬೇಕಾದ ಪ್ರಸಂಗ ಏನಿತ್ತು? ಆಂಧ್ರದಲ್ಲಿ ಅಭಿರಾಮನಿಗೆ ಹೆಣ್ಣು ಕೊಡುವವರು ಸಿಗಲಿಲ್ಲವೆ ಅಭಿರಾಮಯ್ಯನಲ್ಲಿ ನೆಗೆಟಿವ್ ಪಾಯಿಂಟುಗಳು ಏನಾದರೂ ಇದ್ದವೇ? ಅವನ ಮಾ ಭೀಮಪನು ಜೈನನಾಗಿದ್ದನೇ? ಕಮ್ಮೆ ಬ್ರಾಹ್ಮಣನೇ? ಆಗ ಉತ್ತರ ಕರ್ನಾಟಕದಲ್ಲಿ ಕಮ ಬ್ರಾಹ್ಮಣರು ವಿಪುಲವಾಗಿದ್ದರು ಎಂದೂ, ಅನಂತರ ಕೂಡ ಇಲ್ಲಿ ಕಮ್ಮೆಗಳು ಇದ್ದರೆಂದು ಬೇರೆ ಕಾವ್ಯಶಾಸನಗಳಿಂದಲೂ ಸಿದ್ಧವಾಗುತ್ತದೆ. ಈಗ ಹಳೇ ಮೈಸೂರು ಪ್ರದೇಶಗಳಲ ಮಾತ್ರ ಒಬ್ಬೊಬ್ಬರು ಕಮ್ಮೆಗಳು ಇದ್ದಾರೆ. ಉತ್ತರ ಕರ್ನಾಟಕದ ಕಮ್ಮೆಗಳೆಲ್ಲ ಏನಾದರು ಅವರೆಲ್ಲ ಆತ್ಮಹತ್ಯೆ ಮಾಡಿಕೊಂಡರೆ? ಎಲ್ಲರೂ ಜೈನರಾದರೆ? ಅಥವಾ ಕಮ್ಮೆಗಳ ಒಂದ ಮಹಾ ಸರ್ಪಯಜ್ಞವನ್ನು ಯಾವನಾದರೂ ಜನಮೇಜಯನು ಮಾಡಿದನೆ? ಮಾಡಿದ್ದ ಯಾವಾಗ? ಏತಕ್ಕಾಗಿ? ಈ ಎಲ್ಲ ಪ್ರಶ್ನೆಗಳು ಉತ್ತರಕ್ಕಾಗಿ ಬೊಬ್ಬೆಯಿಡುತ್ತಿವೆ.

ಇನ್ನು ಮಾಧವ ಸೋಮಯಾಜಿ ಹೋಮ-ಹವನಗಳಿಂದ 'ನಿಜಯಶ'ವನ್ನು 'ಕರಿದ ಮಾಡಿದ'ನೆಂಬ ಪಂಪನ ಹೇಳಿಕೆಯನ್ನೇ ತೆಗೆದುಕೊಳ್ಳಿ. ಯಶಸ್ಸು ಯಾವಾಗಲ

ಟಿನೋಪಾಲ್ ಹಾಕಿ ಒಗೆದ ಬಟ್ಟೆಯಂತೆ ಬಿಳಿದಾಗಿರುತ್ತದೆ. ಅದನ್ನು ಕರಿದು ಮಾಡಬೇಕಾದರೆ ಮಾಧವ ಸೋಮಯಾಜಿ ಎಬ್ಬಿಸಿದ ಹೊಗೆ ಸಾಕಷ್ಟು ಕಪ್ಪಾಗಿರಬೇಕಾಯಿತು. ಇದರಿಂದ ಏನು ನಿಷ್ಪನ್ನವಾಗುತ್ತದೆ? ಹೊಗೆ ಯಾವಾಗ ಕಡು ಕಪ್ಪಾಗುತ್ತದೆ? ಕಟ್ಟಿಗೆ ಹಸಿಯಾಗಿದ್ದಾಗ. ಅವನ ಯಜ್ಞಕ್ಕೆ ಒಣಕಟ್ಟಿಗೆ ಸಿಗಲಿಲ್ಲವೆಂದಲ್ಲವೇ ಇದರಿಂದ ಹೊರಡುವ ನಿಗಮನ?

ಸಾವಿರ ವರ್ಷಗಳ ಹಿಂದೆಯೂ ಹಸಿ ಕಟ್ಟಿಗೆ ಸುಡಬೇಕಾದಷ್ಟು ಕಟ್ಟಿಗೆಯ ಬರಗಾಲ ಇದ್ದಿರಬೇಕು. ಹೈಕ್ಲಾಸ್ ಹಾರುವರಾದ ತನ್ನ ಪೂರ್ವಜರು ಜೈನಧರ್ಮದ ಅಹಿಂಸಾ ತತ್ವದಿಂದ ಪ್ರಭಾವಿತರಾಗಿ ಆ ಧರ್ಮವನ್ನು ಅಪ್ಪಿಕೊಂಡರೆಂದು ನಮ್ಮ ಕವಿ ಹೇಳುತ್ತಾನೆ. ಆದರೆ ಧರ್ಮಾಂತರಕ್ಕೆ ಹೇಳುವ ಕಾರಣ ಬೇರೆಯೇ, ಒಳಗಿನ ಕಾರಣ ಬೇರೆಯೇ ಇರಬಲ್ಲದೆಂದು ನಾವೀಗ ಕಣ್ಣಾರೆ ಕಾಣುತ್ತಿದ್ದೇವೆ. ಮಾಧವ ಸೋಮಯಾಜಿಯ ಕಾಲದಲ್ಲೇ ಹಸಿ ಕಟ್ಟಿಗೆಯಲ್ಲಿ ಯಜ್ಞ ಮಾಡುವ ಅವಸ್ಥೆ ಇದ್ದದ್ದು ಅವನ ಉತ್ತರಾಧಿಕಾರಿಗಳಿಗಾಗುವಾಗ ಯಜ್ಞಕ್ಕೆ ಕಟ್ಟಿಗೆಯೇ ಸಿಗದಂತಾದ್ದರಿಂದ, ಬ್ರಾಹ್ಮಣರಾಗಿದ್ದೂ ಯಜ್ಞಮಾಡಲಾಗದ ಮೇಲೆ ಬ್ರಾಹ್ಮಣ್ಯದಲ್ಲಿ ಏನುಳಿಯಿತು ಎಂದುಕೊಂಡು ಅವರು ಆ ಧರ್ಮಕ್ಕೇ ತಿಲಾಂಜಲಿ ಕೊಟ್ಟರೆಂದು ಊಹಿಸುವುದು ಸಕಾರಣವಾಗುತ್ತದೆ. ಅಡಿಗೆಗೆ ಮಾತ್ರವೇ ಕಟ್ಟಿಗೆ ಉಪಯೋಗಿಸಬೇಕು; ಯಜ್ಞಗಳಿಗೆ ಕೂಡದು ಎಂಬ ರಾಜಾಜ್ಞೆ ಹೊರಟಿದ್ದರೂ ಹೊರಟಿರಬಹುದು.

೧೦. ಪುಷ್ಪವಿಹಾರ

ಭಾರತದ ಒಕ್ಕಲುತನ ಸಂಶೋಧನ ಸಂಸ್ಥೆಯು ಪುಷ್ಪಗಳನ್ನು ಹೆಚ್ಚು ಜನಪ್ರಿಯವಾಗಿ ಮಾಡಲು ಒಂದು ಯೋಜನೆ ತಯಾರಿಸಿದೆಯಂತೆ. ಇದು ಸರಕಾರದ ಹಲವು ಯೋಜನೆಗಳಂತೆ ಹಣ್ಣಿಲ್ಲದ ಹೂವಾಗುವುದೋ ಏನೋ ಗೊತ್ತಿಲ್ಲ. ಆದರೆ ಸರಕಾರಿ ಪ್ರಚಾರ ಶಾಖೆಯ ಹೂಮಾತು ಏನಿದ್ದರೂ ಹೂವಿನ ಪ್ರಚಾರವನ್ನು ಈ ದೇಶದಲ್ಲಿ ಮಾಡಹೊರಡುವುದೆಂದರೆ ಗುಡ್ಡಕ್ಕೆ ಕಲ್ಲು ಹೊತ್ತಂತೆ, ಎಂದು ಯಾರಿಗಾದರೂ ತೋರಬಹುದು. ಜಗತ್ತಿನಲ್ಲಿ ಯಾವ ದೇಶವಾದರೂ ಪುಷ್ಪ ಪ್ರಜ್ಞೆಯುಳ್ಳದ್ದಿದ್ದರೆ ಅದು ಭಾರತ. ಇಲ್ಲಿ ಕವಿಗಳು ಪುಷ್ಪವನ್ನು ಜೀವವಾಗಿ ಮಾಡಿಕೊಂಡಿದ್ದಾರಷ್ಟೇ ಅಲ್ಲ, ದೇವರಿಗೆ ಕೂಡ ಹೂವಿಲ್ಲದೆ ನಡೆಯುವಂತಿಲ್ಲ. ಕಾಸರಕನ ಹೂವಿನಿಂದ ಹಿಡಿದು ಮಂದಾರಪುಷ್ಪದವರೆಗೆ ಪ್ರತಿಯೊಂದು ಪುಷ್ಪವನ್ನೂ ಮೆಚ್ಚುವ ಒಬ್ಬೊಬ್ಬ ದೇವರಿದ್ದಾನೆ. ನಿಮಗೆ ದುರ್ಗಾದೇವಿಯ ಪ್ರೀತಿ ಬೇಕಿದ್ದರೆ ಆ ಕಾಸರಕ, ದಾಸವಾಳ, ಕಿಂಜಲ್ಕ ಮೊದಲಾದ ರಾವುಗೆಂಪು ಹೂಗಳನ್ನು ಒಯ್ದು ಅವಳ ಮುಂದೆ ಚೆಲ್ಲಿರಿ. ಕ್ಷಿಪ್ರಪ್ರಸಾದನಾದ ಶಿವನ ಅನುಗ್ರಹ ಬೇಕಾಗಿದ್ದರೆ ಬಿಳಿ ದಾಸವಾಳದಂಥ ನಿರ್ಗಂಧ ಕುಸುಮವನ್ನಾದರೂ ಸರಿ, ಒಯ್ದು ಶಿವಲಿಂಗದ ತಲೆಯ ಮೇಲೇರಿಸಿರಿ. ಮಹಾದೇವನಿಗೆ ಬಿಲ್ವಪತ್ರಯೆಂದರೆ ಜೀವ. ನಿಜ; ಆದರೆ ಪುಷ್ಪಗಳೂ ಅವನಿಗೆ ಒಲ್ಲದ ಸರಕುಗಳಲ್ಲ. ವಿಷ್ಣುವಿಗೆ ಎಲ್ಲ ವಿಷಯಗಳಂತೆ ಪುಷ್ಪಗಳಲ್ಲಿಯೂ ಚುನಾಯಿಸಿಗೆ ಹೆಚ್ಚು. ಅವನು ಸುಗಂಧವಿಲ್ಲದ ಪುಷ್ಪಗಳನ್ನು ಸ್ವೀಕರಿಸುವುದಿಲ್ಲ. ಆದರೆ ಅವನೂ ನಿಮಗೆ ಆಶ್ವಾಸನೆ ಕೊಟ್ಟಿದ್ದಾನೆ--- ಪತ್ರಂ ಪುಷ್ಪಂ ಫಲಂ ತೋಯಂ- ಯಾವುದನ್ನಾದರೂ ಅವನಿಗೆ ನೀವು ಭಕ್ತಿಯಿಂದ ಅರ್ಪಿಸಿದರೆ ಸಾಕು, ನಿಮಗೆ ಅನುಗ್ರಹ ಮಾಡುತ್ತಾನೆಂದು.

ಫುಲೇರ ಮತನ ಕರಿ ಅಮಾದೇರ ಜೀವನ- ನನ್ನ ಬಾಳನ್ನು ಹೂವಿನಂತೆ ಮಾಡು ಎಂದು ಕವೀಂದ್ರ ರವೀಂದ್ರರು ಹೇಳುತ್ತಾರೆ. ನಮ್ಮ ಜೀವನ ಹೂವಿನಲ್ಲಿ ಎಷ್ಟು ಓತಪ್ರೋತವಾಗಿದೆಯೆಂದರೆ ಬಹುಶಃ ಅದರ ಅತಿರೇಕದಿಂದ ನಾವೀ ಕಾಲದಲ್ಲಿ ಹೂವಿನ ಬಗ್ಗೆ ಅಸಡ್ಡೆ ತಾಳಿದ್ದೇವೋ ಏನೋ. ಯಾವ ದೇಶದವರು ನಮ್ಮಂತೆ ಹೂಗಳ ಹೆಸರುಗಳನ್ನು ಮನುಷ್ಯರಿಗೆ ಬಳಸಿದ್ದಾರೆ? ಇಷ್ಟು ಕಮಲೆಯರು, ಕಮಲಾಕ್ಷಿಯರು, ಕುಮುದೆಯರು, ಮಾಲತಿಯರು, ಪುಷ್ಪಾಗಳು, ಅಶೋಕರು, ಸರೋಜರು, ಮಾಲನಿಯರು, ಚಂಪಕೆಯರು, ಗುಲಾಬಿಯರು, ಮಾಧವಿಯರು ಬೇರಾವ ದೇಶದಲ್ಲಿ ಸಿಗಬಲ್ಲರು? ಇಲ್ಲಿ ಹೂದೋಟ ಮಾಡುವವನು ತೋಟಗಾರನಲ್ಲ, ಮಾಲಿ: ಹೂಗಳನ್ನು ಕೊಯ್ದು ಮಾಲೆ ಕಟ್ಟುವವನು ಇಲ್ಲಿ ಹೂಗಾರ. ಸುಂದರಿಯಾದ ನಾರಿ ಕಮಲಮುಖಿ, ಕಮಲದ, ನೇತ್ರೆ, ಚಂಪಕನಾಸಿಕೆ, ಅವಳ ಕೈ ಇಲ್ಲಿ ಕರಸರೋಜ, ಅವಳ ಪಾದ ಕೂಡ ಪಾದಕಮಲ, ಅವಳು ನಸುನಕ್ಕಾಗ ಅದು "ಮುಗುಳು" ನಗೆ. ಬಾಹ್ಯಾಂಗಗಳಷ್ಟೇ ಪುಷ್ಪಮಯವಲ್ಲ. ಅಂತರಂಗಗಳೂ ಪುಷ್ಪಾತ್ಮಕ. ಹೃದಯ ಪದ್ಮ ಪ್ರಪಂಚದ ಭೋಗಗಳಿಂದ ದೂರ ಓಡುತ್ತಿರುವ ಯೋಗಿಗಳನ್ನು ಕೂಡ ಇಲ್ಲಿ ಪುಷ್ಪಗಳು ಬೆಂಬಿಡಲಾರವು. ಅವರು ಸಹಸ್ರಾರು ಪದ್ಮದಲ್ಲಿ ತಮ್ಮ ಪ್ರಾಣಗಳನ್ನು, ಸ್ಥಾಪಿಸಿ ಬ್ರಹ್ಮಾನಂದವನ್ನು ಅನುಭವಿಸಬೇಕು. ಹೂವುಗಳನ್ನು ಮಾಲೆ ಮಾಡುವುದರಲ್ಲಾದರೂ ಎಷ್ಟುವಿಧ!

ನಾವು ಹೂಗಳನ್ನು ಕಟ್ಟುತ್ತೇವೆ: ಅಂದರೆ ಕಡಿಮೆ ಹೂಗಳಿಂದ ಉದ್ದವಾದ ಮಾಲೆ ರಚಿಸುತ್ತೇವೆ, ನಾವು ಹೂಗಳನ್ನು ಪೋಣಿಸುತ್ತೇವೆ; ಅಂದರೆ ಅರಳಿದ ಹೂಗಳ ದೇಟಿನ ನಾಳದ ಮೂಲಕ ಸೂಜಿಯಿಂದ ದಾರ ಹಾಯಿಸಿ ಮಾಲೆ ಮಾಡುತ್ತೇವೆ, ಅಂದರೆ ಒತ್ತೊತ್ತಾಗಿ ಉಡಿದಾರ ನೇಯ್ದಂತೆ ಎರಡೋ ಮೂರೋ ದಾರಗಳಿಂದ ಹೆಣೆಯುತ್ತೇವೆ. ಪ್ರತಿ ಹೂವಿಗೂ ಒಂದೊಂದು ತರದ, ಯಾಕೆ ಹಲ ತರದ ಮಾಲಾಪದ್ಧತಿ, ಅರಳಾದರೆ ಬೇರೆ, ಮೊಗ್ಗಾದರೆ ಬೇರೆ, ಮುಗುಳಾದರೆ ಬೇರೆ, ಸಣ್ಣದಾದರೆ ಬೇರೆ. ಗಟ್ಟಿ ಹೂವಾದರೆ ಬೇರೆ. ಮೆದುವಾದರೆ ಬೇರೆ.

ಮತ್ತೆ ಹೂಗಳಿಗಾದರೂ ಎಂಥ ಮುದ್ದು ಹೆಸರುಗಳು. ಕರ್ಕಶವೆಂಬುದೇ ಇಲ್ಲ. ಕಮಲ, ಕುಮುದ, ಮಲ್ಲಿಗೆ, ಜಾಜಿ, ಮಂದಾರ, ಮಾಲತಿ, ರೆಂಜೆ, ಅಶೋಕ, ಪಾರಿಜಾತ, ಶೇಫಾಲಿ, ಸಂಪಿಗೆ...... ಮತ್ತು ಒಂದೊಂದು ಹೂವಿನ ಸುತ್ತ ಎಂಥೆಂಥ ಕಥೆಗಳು, ಆಖ್ಯಾನಗಳು. ಕಮಲವನ್ನು ಕವಿಗಳೂ, ಪುರಾಣಿಕರೂ ಸೇರಿ ಅಮರೀಕರಿಸಿದ್ದಾರೆ. ಗೋಪಾಲದಾಸರು ಲಕ್ಷ್ಮೀಯನ್ನು ವರ್ಣಿಸುವುದನ್ನು ನೋಡಿರಿ- "ಕಮಲಮುಖಿಯೆ, ಕಮಲಾಲಯೆ, ಕಮಲೇ ಕಮಲಾಕ್ಷಿಯೇ, ಕೋಮಲೇ, ಕಮಲನಾಭನ ಪಾದಕಮಲಯುಗಳ ಮಧುಪೆ, ಕಮಲಜನನಿಯೆ, ಕಮಲಮಿತ್ರ ಸುಪ್ರಭೆ...." ಜಗತ್ತಿನ ಯಾವ ದೇಶದಲ್ಲಿಯೂ ಒಂದೇ ಹೂವಿನ ಸುತ್ತ ಇಂಥ ಅದ್ಭುತ ಕಲ್ಪನಾ ವಿಲಾಸ ಹೆಣೆದಿರಲಾರದು. ಕಮಲದಲ್ಲಿ ಲಕ್ಷ್ಮಿ ನಿಂತಿದ್ದಾಳೆ; ಆದಿನಾರಾಯಣನ ನಾಭಿಯಲ್ಲಿ ಕಮಲವೊಂದು ಉದಿಸಿದ್ದೇ ಇಡೀ ಸೃಷ್ಟಿಗೆ ಆದಿಯಾಯಿತು. ಯಾಕೆಂದರೆ ಆ ತಾವರೆಯಲ್ಲಿ ಚತುರ್ಮುಖ ಬ್ರಹ್ಮನ ಉದಯವಾಯಿತು; ಕಮಲನಾಳ ಕೂಡ ಕಥೆಯ ಬೀಳಲಿನಿಂದ ಪಾರಾಗಿಲ್ಲ. ಇಂದ್ರನು ಅದರೊಳಗೆ ಅವಿತು ಎಷ್ಟೋ ಸಾವಿರ ವರುಷ ತಪಸ್ಸು ಮಾಡಿದ್ದಾನೆ. ಆ ಮೇಲೆ ಸೂರ್ಯನಿಗೂ ಕಮಲಕ್ಕೂ ಎಂಥ ಬಾಂಧವ್ಯ. ಸೂರ್ಯ ಮೂಡಿದರೆ ಅದು ಅರಳುತ್ತದೆ. ಸೂರ್ಯ ಮುಳುಗಿದರೆ ಮುಚ್ಚುತ್ತದೆ. ಕಮಲಸೂರ್ಯರ ಈ ಮೈತ್ರಿಯ ಮೇಲಿಂದ ಕವಿಗಳ ಅಲಂಕಾರ ಕಲ್ಪನಾಶಕ್ತಿ ಮದವೇರಿ ನರ್ತಿಸಿದೆ. ಕಮಲವನ್ನು ಕುರಿತು ಭಾರತೀಯ ಕವಿಗಳು ಕಟ್ಟಿದ ಅಮೋಘ ಕಲ್ಪನೆಗಳನ್ನು ಕೂಡಿಸಿದರೆ ಅದೇ ಒಂದು ಗ್ರಂಥವಾದೀತು.

ಪಾರಿಜಾತದ ಹೂವಿನ ಮೇಲೆ ಒಂದು ಯುದ್ಧವೇ ಆಗಿಬಿಟ್ಟಿತು. ಸತ್ಯಭಾಮೆಗೆ ಅದನ್ನು ತಂದುಕೊಡಲು ಕೃಷ್ಣ ದೇವಲೋಕಕ್ಕೆ ದಾಳಿಯಿಟ್ಟು, ಇಂದ್ರನನ್ನು ಬಗ್ಗಿಸಿದ. ಆದ್ದರಿಂದ ಹೂಗಳಲ್ಲೆಲ್ಲ ದುರ್ಬಲವಾದ ಪಾರಿಜಾತ ಭೂಲೋಕದಲ್ಲಿರುವ ಮರ್ತ್ಯರಾದ ನಮಗೆ ಇಂದು ಲಭ್ಯವಾಗಿದೆ. ಒಬ್ಬ ದೇವರಂತೂ ಹೂಗಳಿಗಾಗಿ ಅಲ್ಲ, ಹೂಗಳಿಂದಲೇ ಯುದ್ಧ ಮಾಡುತ್ತಾನೆ. ಅವನ ಬತ್ತಳಿಕೆಯಲ್ಲಿ ಐದು ಹೂಗಳ ಮೊಗ್ಗೆಗಳ ಹೊರತು ಬೇರೇನೂ ಇಲ್ಲ. ಮತ್ತು ಈ ತನ್ನ ಕೋಮಲ ಪುಷ್ಪಾಯುಧವನ್ನು ಅವನು ಮಹೇಶ್ವರನ ಪಿನಾಕಕ್ಕೆ ಎದುರು ನಿಲ್ಲಿಸಿದ್ದಾನೆ. ಅವನ ಪ್ರಾಣ ಹೋಯಿತು, ಆದರೆ ಕೊನೆಗೂ ಅವನೇ ಗೆದ್ದ "ಸಿಂಹ ಗೇಲಾ ಪಣ ಗಡ ಆಲಾ" ಎಂದು ಶಿವಾಜಿಯ ಮಾತನ್ನು ತಿರುವುಮುರುವು ಮಾಡಿ ಮನ್ಮಥನಿಗೆ ಅನ್ವಯಿಸಬೇಕು. ಇಂದಿಗೂ ಅವನು ಗೆಲ್ಲುತ್ತಲೇ ಇದ್ದಾನೆ. ಅವನನ್ನು ವರ್ಷ ವರ್ಷವೂ

ನಾವು ಸುಡುತ್ತೇವೆ. ಆದರೆ ಅವನು ಭಸ್ಮರಾಶಿಯಿಂದ ತಿರುಗಿ ಏಳುತ್ತಲೇ ಇದ್ದಾನೆ ಮತ್ತು ಅವನ ಬಾಣಗಳಿಂದಲೇ ಇಂದು ಮಾನವ ಕುಲವು ಒಂದು ಜೋಡಿಯಿಂದ ೧೨೫ ಕೋಟಿ ಜೋಡಿಗೇರಿದೆ. ಪ್ರಪಂಚದಲ್ಲಿರುವ ಎಲ್ಲ ಹೂಗಳನ್ನು ಸುಟ್ಟು ಹಾಕಿದ ಮೇಲೆ ಮಾತ್ರ ಅವನ ಪ್ರತಾಪ ತಗ್ಗಬಹುದೋ -ಏನೋ.

ನೀವು ಜನ್ನನ ಯಶೋಧರಚರಿತ ಓದಿದ್ದೀರಾ? ಅದರಲ್ಲಿ ಒಂದು ಕೌತುಕದ ಪ್ರಸಂಗ ಇದೆ. ಆಗಿನ ಕಾಲದಲ್ಲಿ ಅರಸರು ತಾವರೆಯ ದೇಟು ಸಹಿತ ಮೊಗ್ಗೆಯನ್ನು ಕೈಯಲ್ಲಿ ಹಿಡಿದುಕೊಂಡೇ ತಿರುಗುತ್ತಿದ್ದರೆಂದು ತೋರುತ್ತದೆ. ಈ "ಲೀಲಾಕಮಲ"ದಿಂದ ಯಶೋಧರ ರಾಣಿಗೆ ಮೆತ್ತಗೆ ಹೊಡೆಯುತ್ತಾನೆ. ರಾಣಿ ಅಷ್ಟಕ್ಕೆ ಮೂರ್ಛೆ ಹೋಗುತ್ತಾಳೆ. ಕೋಮಲತೆಗೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೆ? ಆದರೆ ಅವಳ ವಿಟ ಆನೆಮಾವುತ- ಹಿಂದಿನ ರಾತ್ರಿ ಸಿಟ್ಟಿಗೆದ್ದು ಅವಳಿಗೆ ಕಟ್ಟಿಗೆಯಿಂದ ಬಡಿದಾಗ ಏನೂ ಆಗಿದ್ದಿಲ್ಲಂತೆ. ಪ್ರೀತಿಪಾತ್ರನ ಕೊರಡೇಪೆಟ್ಟೂ ಗಂಡನ ಪುಷ್ಪ ತಾಡನಕ್ಕಿಂತ ಅವಳಿಗೆ ಮೃದುವೆನಿಸಿತ್ತು!...... ರಾವಣ ಕ್ರೂರ ದೊರೆಯಾಗಿದ್ದನು. ಆದರೆ ಅವನೂ ಪುಷ್ಪಪ್ರೇಮಿಯಿರಬೇಕು. ಅವನು ಸೀತೆಯನ್ನು ಅಪಹರಿಸಿ ಒಯ್ದು ಅಶೋಕ ವೃಕ್ಷಗಳ ತೋಟದಲ್ಲಿ ಸೆರೆಯಿರಿಸುತ್ತಾನೆ. ಕೇಶರಮಯವಾದ ಈ ನಸುಗೆಂಪು ಹೂಗಳ ಗುಚ್ಛಗುಚ್ಛವೇ ಅದರ ಮೃದುವಾದ ಅರೆಕಂದು ಚಿಗುರುಗಳ ನಡುವೆ ತೂಗುತ್ತಿದ್ದಿರಬೇಕು. ಅಶೋಕ ಪಂಚಬಾಣನ ಬಾಣಗಳಲ್ಲೊಂದು. ಸೀತೆಯ ಕಲ್ಲೆದೆಯನ್ನು ಈ ಕಾಮನಬಾಣ ಪುಷ್ಪವಾದರೂ ಭೇದಿಸಿ ಅವಳ ಒಲುಮೆ ತನಗೆ ಸಂಗಡೀಸೀತೆಂದು ರಾವಣ ಬಗೆದಿದ್ದನೋ ಏನೋ. ಆದರೆ ವಾಲ್ಮೀಕಿಯ ಕವಿ ಕಲ್ಪನೆಯನ್ನು ನೋಡಿರಿ. ಅದು ಅಶೋಕವನ; ಅಲ್ಲಿ ಸೀತೆ ಹನ್ನೆರಡು ವರ್ಷ ಶೋಕಾಕುಲಿತ ಜೀವನವನ್ನು ಸಾಗಿಸಬೇಕಾಯಿತು.....

ಹೂವಿನ ಬಗ್ಗೆ ಹರಟ ತೊಡಗಿದರೆ ಲಾಂಗೂಲಾಚಾರ್ಯರಿಗೆ ನಿಲ್ಲಿಸಲಿಕ್ಕೇ ಬರುವುದಿಲ್ಲ, ಆದರೆ ಇಲ್ಲಿಗೆ ಮುಗಿಸಬೇಕಾಗಿದೆ. ಮುಂದೆ ಹೂವಿನ ಬಗ್ಗೆ ಆಂಗ್ಲ ಕವಿ ಹೇಳಿದ್ದನ್ನು ಸ್ಮರಿಸೋಣ. ಅವನಂದಿದ್ದಾನೆ "ಹೂವುಗಳೆಂದರೆ ಮಗುವಿಗೂ ತಿಳಿಯುವ ಮಾತುಗಳು."

೧೧. ಶಕುಂತಲೋಪಾಖ್ಯಾನ

ಭಾರತದ ಚಕ್ರವರ್ತಿಗಳಲ್ಲಿ ದುಷ್ಯಂತ ಮಹಾರಾಜನಿಗೆ ಉನ್ನತ ಸ್ಥಾನವಿದೆ. ಅವನ ಧವಳ ಕೀರ್ತಿಗೆ ಮುಖ್ಯ ಆಧಾರವಾಗಿರುವುದು ಅವನ ಮರವೆ. ಅವನು ಮದುವೆ ಮಾಡಿಕೊಂಡು ಬಂದ ತತ್‌ಕ್ಷಣವೇ ಹೆಂಡತಿಯನ್ನು ಕ್ಲೀನಾಗಿ ಮರೆತುಬಿಟ್ಟು ತನ್ನ ಹೆಸರನ್ನು ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಮಾಡಿದನೆಂದು ಕಾಳಿದಾಸನ ಶಾಕುಂತಲ ನಾಟಕದಿಂದ ತಿಳಿಯುತ್ತವೆ. ಇಂದಿನ ಕಾಲದಲ್ಲಿ ಹುಟ್ಟಿದ್ದರೆ ಅವನು ಪ್ರಸಿದ್ಧ ಪ್ರೊಫೆಸರ್ ಆಗಬಹುದಿತ್ತು. ಅದೇನೇ ಇದ್ದರೂ ವೈದ್ಯಕೀಯ ಇತಿಹಾಸದಲ್ಲಿ ದುಷ್ಯಂತನದು "ಆಮ್ನೇಶಿಯ" ದ ಅತಿ ಪ್ರಾಚೀನ ಉದಾಹರಣೆಯಾಗಿದೆಯೆಂದು ಮೆಡಿಕಲ್ ಕಾಲೇಜಿನ ಪ್ರೊಫೆಸರರೊಬ್ಬರು ಹೇಳುತ್ತಾರೆ. ಇನ್ನೂ ಹೆಚ್ಚು ಜನರು ಹೀಗೆ ಪತ್ನಿ-ಆಮ್ನೇಶಿಯಕ್ಕೆ ಒಳಗಾಗದಿರುವುದು ವಿಷಾದದ ಸಂಗತಿಯೆಂಬುದಾಗಿ ನನ್ನೊಬ್ಬ ಹೆಣ್‌ಪೆಕ್ಡ್ ಮಿತ್ರರು ಗುಪ್ತವಾಗಿ ಹಳಹಳಿಸುತ್ತಾರೆ. ಏನು ಮಾಡುವುದು? ಈಗ ನಾವುಗಳು ಕಾಡಿಗೆ ಹೋಗಿ ಅಲ್ಲಿ ಅಕಸ್ಮಾತ್ತಾಗಿ ಸಿಕ್ಕುವ ಹುಡುಗಿಯರನ್ನು ದಿಢೀರಾಗಿ ಮದುವೆಯಾಗಿ ಅಲ್ಲೇ ಬಿಟ್ಟುಬರುವುದಿಲ್ಲ, ನಾವು ಮಾಡಿಕೊಂಡ ಹೆಂಡರು ನಮ್ಮ ಬೆಂಬತ್ತಿಯೇ ಬರುತ್ತಾರೆ. ಅವರನ್ನು ಮರೆತುಬಿಡುವುದಕ್ಕೆ ಚಾನ್ಸನ್ನೇ ಕೊಡುವುದಿಲ್ಲ, ಶಕುಂತಲೆಯ ಕಾಲದಿಂದ ಹೆಂಗಸರು ತುಂಬಾ ಪಾಠ ಕಲಿತು ಬುದ್ಧಿವಂತರಾಗಿದ್ದಾರೆ.

ಇಡೀ ಪ್ರಕರಣ ಆರಂಭವಾದದ್ದು ದುಷ್ಯಂತನ ಬೇಟೆ ಪ್ರಕರಣದಿಂದ. ಹಿಂದಿನ ಕಾಲದಲ್ಲಿ ಅರಸರು ದಿಗ್ವಿಜಯ ಎಂಬ ಹೆಸರಿನಲ್ಲಿ ಮನುಷ್ಯರನ್ನು ಕೊಲ್ಲುವುದರಲ್ಲಿ ನಿರತರಾಗಿರದಿದ್ದಾಗೆಲ್ಲ ಬೇಟೆಯ ಹೆಸರಲ್ಲಿ ಪ್ರಾಣಿಗಳನ್ನು ಕೊಲ್ಲುವುದರಲ್ಲಿ ಮಗ್ನರಾಗಿರುತ್ತಿದ್ದರೆಂದು ಇಲ್ಲಿ ನೆನೆದುಕೊಳ್ಳಬೇಕು. ಇದಕ್ಕೆ ಅವರು "ಮೃಗಯಾ ವಿನೋದ" ಎಂಬ ಸ್ವಾರಸ್ಯವಾದ ಹೆಸರಿಟ್ಟಿದ್ದರು. ದುಷ್ಯಂತನ ಈ ವಿನೋದವನ್ನು ವಿನೋದವೆಂದು ತಿಳಿದುಕೊಳ್ಳದಿದ್ದ ಒಂದು ಮಿಕ ಜೀವಗಳ್ಳತನದಿಂದ ಪಲಾಯನ ಮಾಡಿದ್ದರಿಂದ ದುಷ್ಯಂತ ಅದಕ್ಕೆ ಇದು ವಿನೋದವೆಂಬುದನ್ನು ಮನವರಿಕೆ ಮಾಡಿಕೊಡುವುದಕ್ಕಾಗಿ ಅದನ್ನು ರಥದಲ್ಲಿ ಬೆಂಬತ್ತಿದ. ಅದಕ್ಕೆ ಮನವರಿಕೆ ಮಾಡಿಸಿಕೊಳ್ಳುವ ಇಷ್ಟವಿದ್ದಿಲ್ಲ. ಅದು ಓಡಿಯೇ ಓಡಿತು. ಕೊನೆಗೆ ದುಷ್ಯಂತ ಕಣ್ವ ಋಷಿಯ ಆಶ್ರಮವಿದ್ದ ಅರಣ್ಯವನ್ನು ಮುಟ್ಟಿದ. ಇದರ ನಂತರ ಆ ಮಿಕದ ಕಥೆ ಏನಾಯಿತೋ ನಮಗೆ ತಿಳಿಯುವುದಿಲ್ಲ. ಯಾಕೆಂದರೆ ಇಲ್ಲಿ ಮಹಾರಾಜನು ನಾಲ್ಕು ಕಾಲಿನ ಮಿಕದ ಸುದ್ದಿ ಬಿಟ್ಟು ಎರಡು ಕಾಲಿನ ಒಂದು ಮಿಕದ ಬೆನ್ನು ಹತ್ತುತ್ತಾನೆ.

ಶಕುಂತಲೆಯಲ್ಲಿ ದುಷ್ಯಂತನ ಮೊತ್ತಮೊದಲ ಆಸಕ್ತಿ ಕೇವಲ ಪರೋಪಕಾರ ಪರವಾದದ್ದಾಗಿತ್ತು. ದುಷ್ಯಂತ ಕಣ್ವಾಶ್ರಮವನ್ನು ಸಮೀಪಿಸಿದಾಗ ಅವಳು ದೊಡ್ಡ ವಿಪತ್ತಿನಲ್ಲಿ ಸಿಲುಕಿದ್ದಳು. ಹೂ ಕೊಯ್ಯುವುದಕ್ಕೋ ಏನೋ ಹೋದ ಅವಳನ್ನು ಒಂದು ತುಂಬಿ ಕಾಡುತ್ತಿತ್ತು. ಅದರದ್ದೂ ತಪ್ಪಿಲ್ಲ ಅನ್ನಿ. ಅವಳ ಮುಖ ಒಂದು ಕಮಲ ಎಂಬ ಭ್ರಮೆ ಅದಕ್ಕೆ ಆಗಿತ್ತು. ಕಾಡಿನಲ್ಲೇ ಹುಟ್ಟಿ ಬೆಳೆದ ಈ ಹುಡುಗಿ ಒಂದು ಬಣಗು ದುಂಬಿಗೆ ಇಷ್ಟು ಹೆದರಿದಳೇ? ಎಂದು ಕೇಳಬೇಡಿ: ಹೆಂಗಸರು, ಗಂಡಸರು ಹತ್ತಿರ ಇದ್ದಾಗ, ಅತ್ಯಂತ ಕ್ಷುಲ್ಲಕ ವಿಷಯಗಳಿಗೂ ಹೆದರುತ್ತಾರೆ; ಬೇರೆ ಸಮಯದಲ್ಲಿ ಅತ್ಯಂತ ಭಯಂಕರ ಭೂತಗಳಿಗೂ ಅಂಜುವು

ದಿಲ್ಲ. ನಮ್ಮ ಜಗದೇಕವೀರ ದುಷ್ಯಂತನೋ ಇಂಥ ವಿಪತ್ತಿಗೊಳಗಾದ ಸ್ತ್ರೀಯರನ್ನು-ಅದು ಅವರು ತರುಣಿಯರಾಗಿದ್ದರೆ-ಕಾಪಾಡುವುದಕ್ಕೆ ಸದಾ ಸಿದ್ಧನೇ.

ಅಂತೂ ಹೀಗೆ ದುಷ್ಯಂತ-ಶಕುಂತಲೆಯರ ಪ್ರಥಮ ದರ್ಶನವಾಯಿತು. ಜಗತ್ತನ್ನೇ ತತ್ತ ಗೊಳಿಸಬಲ್ಲ ದುಷ್ಯಂತನ ಬಿಲ್ಲುಬಾಣಗಳಿಗೆ ಹೆದರಿ ಆ ದುಂಬಿ ಆರ್ಗ್ಯಾಲೋಟದಿಂದ ಪಲ ಯನ ಮಾಡಿದ ಮೇಲೆ ಅವರಿಬ್ಬರಿಗೆ ಪ್ರೇಮದಲ್ಲಿ ಬೀಳುವುದು ಹೊರತು ಬೇರೆ ಏನು ಕೆಲಸ ಕಾಣಲಿಲ್ಲ. ಪ್ರೇಮದಲ್ಲಿ ಬೀಳುವುದರಲ್ಲಿ ರಾಜ ಅನುಭವವಿಲ್ಲದವನಲ್ಲ. ಅವನಿ ಆಗಲೇ ಕನಿಷ್ಠ ಪಕ್ಷ ಒಬ್ಬಳಾದರೂ ರಾಣಿ ಇದ್ದಳು. ಬೇರೆ ಪ್ರೇಯಸಿಯರೂ ಇದ್ದರು. ಅವ ಪ್ರೇಮದಿಂದ ಎದ್ದು ಬಂದಿದ್ದ ರಾಜ ಇನ್ನೊಂದು ಪ್ರೇಮದಲ್ಲಿ ಬೀಳುವುದಕ್ಕೆ ಹದವಾಗಿದ್ದ ನಾವು ಗಂಡಸರು ಪುನಃ ಪುನಃ ಬೀಳುವುದಕ್ಕೆ ಸಂತೋಷದಿಂದ ಅಣಿಯಾಗುವ ಹೊಂಡಗ ಳೆಂದರೆ ಪ್ರೇಮದ ಹೊಂಡಗಳಲ್ಲವೆ? ಶಕುಂತಲೆಗಾದರೋ ಮುದಿ ತಪಸ್ವಿಗಳನ್ನು ಬಿಟ್ಟ ಕಣ್ಣಿಗೆ ಬಿದ್ದ ಮೊದಲ ಗಂಡಸೆಂದರೆನೇ ದುಷ್ಯಂತ. ಈಗ ಪ್ರೇಮದಲ್ಲಿ ಬೀಳದಿದ್ದ ಇನ್ನೊಂದು ಚಾನ್ಸಿಗೆ ಎಷ್ಟು ಕಾಯಬೇಕೋ ಯಾರು ಬಲ್ಲ? ಅವಳು ಕಮಲದ ಎಲೆಯ ಮೇಲೆ ಅವನಿಗೊಂದು ಪ್ರೇಮ ಪತ್ರವನ್ನು ಬರೆದು ಸಖಿಯರ ಕೈಲಿ ಕಳಿಸಿದಳು. ಆ ಕಾಲದ ಋಷ್ಯಾಶ್ರಮಗಳಲ್ಲಿ ತರುಣಿಯರಿಗೆ ಹೇಳಿಕೊಡುತ್ತಿದ್ದ ಪಾಠ್ಯದ ಸಿಲೆಬಸ್ಸಿನಲ್ಲಿ ಪ್ರೇಮಪತ್ರಗ ರಚನೆಗೆ ಮುಖ್ಯ ಸ್ಥಾನವಿತ್ತು. ಸ್ವತಃ ಬ್ರಹ್ಮಚಾರಿಯಾಗಿದ್ದರೂ ಕಣ್ವಋಷಿ ತನ್ನ ಸಾಕುಮಗಳಿ ಸಿಲೆಬಸ್ಸಿನ ಈ ಅಂಶವನ್ನು ಕಲಿಸುವುದಕ್ಕೆ ತಪ್ಪಿರಲಿಲ್ಲ.

ಕಾಳಿದಾಸನ ಪ್ರಕಾರ ಕಣ್ವಋಷಿ ಆಗ ತೀರ್ಥಯಾತ್ರೆಗೆ ಹೋಗಿದ್ದುದರಿಂದಲೂ, ರಾಜನಿ ಅವನು ಮರಳಿ ಬರುವವರೆಗೆ ಕಾಯುವುದಕ್ಕೆ ಪುರುಸೊತ್ತು ಇಲ್ಲದ್ದರಿಂದಲೂ ಅವರಿಬ್ಬರ ದಿಢೀರ್ ಮದುವೆ ಅಥವಾ ಗಾಂಧರ್ವ ವಿಧಿಯಿಂದ ತತ್‌ಕ್ಷಣ ಮದುವೆಯಾದರು. ಇದ ಎಮರ್ಜನ್ಸಿ ವಿವಾಹವೆಂದೂ ಹೆಸರಿದೆ. ಯಾಕೆಂದರೆ ಇದನ್ನು ಜಾರಿಮಾಡಿದಾಗ ಯಾರನ ದರೂ ಭುಜ ಬಂಧನದಲ್ಲಿ ಬಂಧಿಸಬೇಕಾದರೆ ಮೊದಲು ಹಿರಿಯರಿಂದ ವಾರಂಟು ತೆ ದುಕೊಳ್ಳುವ ಅಗತ್ಯ ಬೀಳುವುದಿಲ್ಲ. ಪುರೋಹಿತರ ಮುಂದೆ ಹಾಜರುಪಡಿಸುವ ಕ್ರಮವೂ ಬೇಕಿಲ್ಲ. ಗರ್ಜೀವಾಲೇಕು ಅಕ್ಕಲ್ ನಹೀಂ.

ದುಷ್ಯಂತ ಕೆಲವು ದಿನ ಆಶ್ರಮದಲ್ಲೇ ಇದ್ದು ಮತ್ತೂ ಕಣ್ವಋಷಿ ಬಾರದೆ ಇದ್ದುದರಿಂದ ಪಟ್ಟಣಕ್ಕೆ ಹಿಂದಿರುಗಲು ಸಿದ್ಧನಾದ. ಕಣ್ವಋಷಿ ಹಿಂದಿರುಗಿದರೆ ಅವನನ್ನು ಎದುರಿಸುವ ಧೈರ್ಯ ಸಾಲದೆ ಬೇಗ ಹಿಂದಿರುಗಿರಬಹುದೆಂಬ ಸಂಭಾವ್ಯತೆಯನ್ನೂ ಅಲ್ಲಗಳೆಯಲಾಗುವ ದಿಲ್ಲ. ಆದರೆ ಕಾಳಿದಾಸ ಉದಾರ. ಅವನು ದುಷ್ಯಂತನಿಗೆ ಸಂಶಯದ ಪ್ರಯೋಜನ ಕೊಡುತ್ತಾನೆ. ಕಣ್ವಋಷಿ ಇಲ್ಲದಿರುವಾಗ ಅವನ ಮಗಳನ್ನು ತುರ್ತು ಮದುವೆ ಮಾಡಿ ಕೊಳ್ಳುವುದು ಬೇರೆ ಮಾತು: ಅವನಿಗೆ ಒಂದು ಮಾತು ಹೇಳದೆ ಅವನ ಮನೆಯ ಹುಡುಗಿ ಯನ್ನು ಹಾರಿಸಿಕೊಂಡು ಹೋಗುವುದೇ ಬೇರೆ ಮಾತು. ಅದು ತೀರ ಅನ್-ಜಂಟಲ್‌ಮ್ಯಾನ್ಲಿ ಆದೀತು. ದುಷ್ಯಂತ ಮತ್ತೇನಲ್ಲದಿದ್ದರೂ ಹದಿನಾರಾಣೆ ಜಂಟಲ್ಮನ್ ಆಗಿದ್ದ. ಮೇಲಾಗಿ ಯಾತ್ರೆಯಿಂದ ತಿರುಗಿ ಬಂದು ನೋಡುವಾಗ ಮಗಳು ಏಕಾಏಕಿ ಗಾಯಬ್ ಆಗಿರುವುದನ್ನು ನೋಡಿ ಮುದುಕ ಕಣ್ವನಿಗೆ ಹಾರ್ಟ್‌ಫೇಲ್ ಆಗಬಹುದಿತ್ತು.

ಇದನ್ನೆಲ್ಲ ಯೋಚಿಸಿ ದುಷ್ಯಂತ ಮಹಾರಾಜ ಶಕುಂತಲೆಯನ್ನು ಆಶ್ರಮದಲ್ಲೇ ಬಿಟ್ಟು

"ಪ್ರಿಯೇ, ಬೇಗನೆ ನಿನ್ನನ್ನು ಬಿರುದು ಬಾವಲಿ ಸಮೇತ ಕರೆಸಿಕೊಳ್ಳುತ್ತೇನೆ ಚಿಂತಿಸಬೇಡ. ನೀನೇ ನನ್ನ ಹೃದಯೇಶ್ವರಿ, ಇಂದಿಗೂ ಎಂದಿಗೂ," ಎಂದು ಆಶ್ವಾಸನೆ ಕೊಟ್ಟು ಹೊರಟು ಹೋದ. ಆಶ್ವಾಸನೆಯ ಸಂಗಡ, ಗ್ಯಾರಂಟಿಯ ಸಲುವಾಗಿ, ತನ್ನ ಮುದ್ರೆಯುಂಗುರುವನ್ನು ಅವಳಿಗೆ ತೊಡಿಸಿ, "ಇದು ನನ್ನ ಸರಕಾರಿ ಸೀಲು. ಯಾವ ಆಜ್ಞೆಗಳೂ ಇದನ್ನು ಒತ್ತದೆ ಸಿಂಧುವಾಗುವುದಿಲ್ಲ. ಇದಿಲ್ಲದೆ ನನ್ನ ಕಾರಭಾರ ನಡೆಯಲಾರದಾದ್ದರಿಂದ ಇದು ನನ್ನ ಆಶ್ವಾಸನಕ್ಕೆ ಸಾಕಷ್ಟು ಬಲವಾದ ಜಾಮೀನಾಗಿದೆ" ಎಂದ. ಉಂಗುರ ಚಂದಾಗಿತ್ತು. ಆದರೆ ಅದು ಅವಳ ಬೆರಳಿಗೆ ತೀರ ಸಡಿಲಾಗುತ್ತಿತ್ತು. ಮುಂದೆ ಅದೇ ತನಗೆ ಕುತ್ತಾದೀತೆಂದು, ಪಾಪ, ಅವಳಿಗೆ ಹೊಳೆಯಲಿಲ್ಲ.

ಕಣ್ವಾಶ್ರಮದ ಗಡಿ ದಾಟುತ್ತಲೇ ದುಷ್ಯಂತನಿಗೆ ಇಡೀ ಶಕುಂತಲಾ ಎಪಿಸೋಡೇ ಇದ್ದಕ್ಕಿದ್ದಂತೆ ಮರೆತುಹೋಯಿತು. ಆಮ್ನೇಶಿಯಕ್ಕೆ ತುತ್ತಾಗಿ ಅವನು ರಾಜಧಾನಿಗೆ ಹಿಂದಿರುಗಿದ ಮೇಲೆ ಪ್ರಯತ್ನ ಪೂರ್ವಕ ಶಕುಂತಲೆಯನ್ನು ನೆನೆದುಕೊಳ್ಳುವಂಥ ಪ್ರಸಕ್ತಿ ಬರಲಿಲ್ಲ. ಜನಾನಾದಲ್ಲಿ ಹಿರಿಯ ರಾಣಿಯಲ್ಲದೆ ಇನ್ನೂ ಅನೇಕ ಹೆಂಗಸರಿದ್ದರು; ಅವರಲ್ಲಿ ಕೆಲವರು ಆ ಅಡವಿಯ ಹುಡುಗಿಯಷ್ಟೇ ಚೆನ್ನಾಗಿದ್ದರು. ಅಡವಿಯಲ್ಲಿ ಅವನ ಸಂಗಡ ಇದ್ದ ವಿದೂಷಕ ಬ್ರಾಹ್ಮಣನಿಗೆ ನೆನಪು ಇದ್ದಿರಬೇಕು. ಆತ ತೋರಿಕೆಗೆ ಪೆದ್ದನಾಗಿದ್ದರೂ ರಾಜರ ಮರೆವೆಗೆ ಸಾಕಷ್ಟು ಬಲವಾದ ರಾಜಕೀಯ-ಅಂದರೆ ಡಿಪ್ಲೋಮ್ಯಾಟಿಕ್-ಕಾರಣಗಳಿರುತ್ತವೆಂದು ಅರ್ಥಮಾಡಿಕೊಳ್ಳಲಾರದಷ್ಟು ಹೆಡ್ಡನಾಗಿರಲಿಕ್ಕಿಲ್ಲ. ಆದರೆ ಅರಮನೆಗೆ ರಾಜ ವಾಪಸಾದ ಮೇಲೆ ಅವನ ಬೆರಳಲ್ಲಿ ಮುದ್ರೆಯುಂಗುರ ಇಲ್ಲದಿರುವುದನ್ನು ರಾಣಿ ಗಮನಿಸಲಿಲ್ಲವೆ? ಅವಳು ಅಡ್ಡ ತಿಡ್ಡ ಸವಾಲು ಹಾಕಲಿಲ್ಲವೆ? ಅವಳು ವಿದೂಷಕನನ್ನು ಕರೆಸಿ ಬೆದರಿಸಿ ಕೇಳಲಿಲ್ಲವೇ? ಕಾಳಿದಾಸನಿಗೆ ಇದೊಂದು ಪ್ರಶ್ನೆಯೂ ಹೊಳೆಯುವುದಿಲ್ಲ. ಆದ್ದರಿಂದ ನಾವು ನಿರುತ್ತರರಾಗಿಯೇ ಉಳಿಯುತ್ತೇವೆ. ಕಾಳಿದಾಸ ಎಲ್ಲ ತಪ್ಪನ್ನೂ ದುರ್ವಾಸ ಮುನಿಯ ಶಾಪದ ಮೇಲೆ ಹೊರಿಸಿ ಸುಮ್ಮನಾಗಿದ್ದಾನೆ. ರಾಜ ಆಶ್ರಮದಿಂದ ಹೊರಬೀಳುತ್ತಲೇ ಅಲ್ಲಿಗೆ ದುರ್ವಾಸ ಬಂದನೆಂತಲೂ ಪ್ರಿಯಕರ ಹೊರಟು ಹೋದ ಚಿಂತೆಯಲ್ಲಿದ್ದ ಶಕುಂತಲೆ ಅವನನ್ನು ಸರಿಯಾಗಿ ಆದರಿಸಲಿಲ್ಲವಾದ್ದರಿಂದ ಸಿಟ್ಟಿಗೆದ್ದು ದುಷ್ಯಂತನಿಗೆ ಶಕುಂತಲೆ ಮರೆತು ಹೋಗುವಂತೆ ಶಾಪ ಕೊಟ್ಟನೆಂತಲೂ ಕಾಳಿದಾಸ ನಮಗೆ ಸಮಾಧಾನ ಹೇಳುತ್ತಾನೆ. ದುರ್ವಾಸ ಮುನಿಯ ಶಾಪದಿಂದ ದುಷ್ಯಂತನಿಗೆ ಮರೆವೆ ಆಗಿರಲಿ. ಅವನೊಡನೆ ಹೋದವರಿಗೆ ಹೇಗೆ ಮರೆವೆ ಆಯಿತು? ಅವರು ಗುಜುಗುಜು ಮಾತಾಡಲಿಲ್ಲವೆ? ರಾಣಿಯ ಕಿವಿ ತನಕ ಇದು ತಲುಪಲಿಲ್ಲವೆ? ಮುದ್ರೆಯುಂಗುರ ಕಾಣೆಯಾದದ್ದಕ್ಕೂ ಗುಜು ಗುಜುವಿಗೂ ತಾಳೆನೋಡಿ ಅವಳು ಎರಡೂ ಎರಡೂ ಐದು ಎಂದು ಲೆಕ್ಕ ಹಾಕಿ ಗೆರೆ ಮುಟ್ಟಲಿಲ್ಲವೆ?

ನನ್ನ ಕೇಳಿದರೆ, ರಾಜ ಅರಮನೆಗೆ ಹಿಂದಿರುಗುತ್ತಲೆ ರಾಣಿಯಿಂದ ಕಂಡುಹಿಡಿಯಲ್ಪಟ್ಟು ಪಾಟೀ ಸವಾಲಿಗೊಳಗಾಗಿ ಸತ್ಯವನ್ನು ಕಾರಿರಬೇಕು ಮತ್ತು ಅವಳ ಹೆದರಿಕೆಯಿಂದಲೇ ಅವನಿಗೆ ಆಮ್ನೇಶಿಯ ಆಗಿರಬೇಕು. ಮುದ್ರೆಯುಂಗುರದ ಮಟ್ಟಿಗೆ ಹೇಳುವುದಾದರೆ ಅವನು ಅದನ್ನು ಶಕುಂತಲೆಯಿಂದ ಮರಳಿ ತರಿಸುವ ಬದಲು ಡುಪ್ಲಿಕೇಟ್ ಒಂದನ್ನು ಮಾಡಿಸಿಕೊಳ್ಳುವುದೇ ಜಾಣತನವೆಂದು ಭಾವಿಸಿ ಹಾಗೆ ಮಾಡಿದನೆಂದು ತೋರುತ್ತದೆ. ದುರ್ವಾಸನನ್ನು ಅನ್ಯಾಯವಾಗಿ ಅನಿಷ್ಟಕ್ಕೆ ಶನೀಶ್ವರನಾಗಿ ಮಾಡಿ ಕಾಳಿದಾಸ ದುಷ್ಯಂತನಿಗೆ ಅಲಿಬಿ ಒದ

ಗಿಸಿದ್ದಾನೆಂದು ವ್ಯಾಸರ ವರದಿಯಿಂದ ಊಹಿಸಬಹುದು. ಇರಲಿ.

ಅತ್ತಲಾಗಿ, ಶಕುಂತಲೆ ಬಿರುದು ಬಾವಲಿಗಳೆಂದರೇನೆಂದು ಗೊತ್ತಿಲ್ಲದಿದ್ದರೂ ಬಿರುದು ಬಾವಲಿಗಳೊಡನೆ ರಾಜನ ಕರೆ ಬರುತ್ತದೆಂದು ಕಾದು ಕಾದು ಬೇಸತ್ತಳು. ಅವಳ ಗರ್ಭ ಬೆಳೆಯುತ್ತಿತ್ತು. ಕಣ್ವ ಋಷಿ ತಿರುಗಿ ಬಂದ. ಮಗಳ ಅಹವಾಲು ಕೇಳಿದ. ಬಡಪಾಯಿಗೆ ಏನು ಮಾಡಲು ಸಾಧ್ಯವಿತ್ತು ಈ ನಿಟ್ಟಿನಲ್ಲಿ? ಹೆಚ್ಚು ಕೇಳಿದರೆ ಅವನದೇ ತಪ್ಪು. ಬೆಳೆದ ಹುಡಿಗಿಗೆ ಮೊದಲೇ ವರ ನೋಡಿ ದಾಟಿಸಿ ಕೈತೊಳೆದುಕೊಳ್ಳಬೇಕಾಗಿತ್ತು. ಆದರೆ ಅದೇನು ಸುಲಭವಾಗಿತ್ತೆ? ಯಾವ ಋಷಿಕುಮಾರ ಅವಳನ್ನು ಗಂಟು ಹಾಕಿಕೊಳ್ಳಲು ಒಪ್ಪುತ್ತಿದ್ದ? ಹೇಳಿ ಕೇಳಿ ಅಪ್ಸರೆಯ ಮಗಳಂತೆ. ನಾಳೆ ಏನು ಮಾಡುವಳೋ ಯಾರು ಬಲ್ಲ? ಒಂದು ರೀತಿಯಿಂದ ಈಗಾದದ್ದೇ ಸರಿಯಾಯಿತು. ಹುಡುಗಿ ಅಂತಿಂಥವನಿಗೆ ಮೈ ಸೋಲಲಿಲ್ಲ. ರಾಜನನ್ನೇ ಬುಟ್ಟಿಗೆ ಹಾಕಿಕೊಂಡಿದ್ದಾಳೆ. ಎಲ್ಲಾ ಸರಿ ಹೋದರೆ ತಾನು ಚಕ್ರವರ್ತಿಯ ಅಜ್ಜ ಅಂತ ಮುನಿಗಳಲ್ಲಿ ವಿ.ಐ.ಪಿ. ಆಗಬಹುದು. ಆದರೆ ಇಷ್ಟು ಸುಲಭದಲ್ಲಿ ಅವಳು ಅವನಿಗೆ ವಶವಾಗಬಾರದಿತ್ತು. ಅವನನ್ನು ಸ್ವಲ್ಪ ಕಾಲ ಕೈಯಳತೆಗಿಂತ ದೂರ, ಕಣ್ಣಳತೆಗಿಂತ ಹತ್ತಿರ ಇಟ್ಟುಕೊಂಡಿದ್ದರೆ ದಾರಿಗೆ ಬಂದೇ ಬರುತ್ತಿದ್ದ. ಪಾಪ, ಹುಡುಗಿಗೆ ಬುದ್ಧಿ ಸಾಲದು, ನಾಲ್ಕೊಪ್ಪೊತ್ತು ತಾಯಿ ಮೇನಕೆಯ ಕೈಲಿ ತರಬೇತಾಗಿದ್ದರೆ ಗಂಡಸರನ್ನು ಕುಣಿಸುವುದಕ್ಕೆ ಕಲಿಯಬಹುದಾಗಿತ್ತು. ಅವಳು ಹುಟ್ಟಿದ ಕೂಡಲೆ ಇವಳನ್ನು ಬಿಟ್ಟೇ ಹೋದಳಲ್ಲ. ಈಗ ಏನು ಮಾಡಬೇಕು? ರಾಜ ಇವಳನ್ನು ಕರೆಸಿಕೊಳ್ಳುವ ಲಕ್ಷಣವಿಲ್ಲ-ತನ್ನ ಆಶ್ರಮದಲ್ಲಿಯೇ ಹೆರಿಗೆಗೆ ಏರ್ಪಾಡಿಲ್ಲ. ಸೂಲಗಿತ್ತಿ ಇಲ್ಲ. ಗಂಡು ಹುಟ್ಟಿದರೆ ಅಡ್ಡಿಯಿಲ್ಲ, ಹೆಣ್ಣಾದರೆ? ಮುಂದೆ ಅವಳೂ ಇವಳ ಹಾಗೆ ಇಟ್ಟೆಡೆಯಲ್ಲಿ ಸಿಕ್ಕಿದ ರಾಜಕುಮಾರರು ಯಾರನ್ನಾದರೂ ಗಂಟು ಹಾಕಿಕೊಳ್ಳಲು ಬಲೆ ಬೀಸಬೇಕು. ಯಾರಿಗೆ ಬೇಕು ಇದೆಲ್ಲ ಕಿರಿಕಿರಿ.

ಆದ್ದರಿಂದ ಕಣ್ವ ಋಷಿ ಶಕುಂತಲೆಯನ್ನು ಅರಸನ ಕಡೆ ಕಳಿಸಿದ. ತಾನು ಹೋಗಲಿಲ್ಲ. ಒಂದು ವೇಳೆ ವಿಶ್ವಾಮಿತ್ರ ಕಣ್ವನ ಸ್ಥಳದಲ್ಲಿದ್ದರೆ ಏನು ಮಾಡುತ್ತಿದ್ದ ಎಂದು ನಾನು ಒಮ್ಮೊಮ್ಮೆ ಊಹಾಪೋಹ ಮಾಡುತ್ತೇನೆ. ಅವನು ನೆಟ್ಟಗೆ ಮಗಳ ಸಂಗಡ ದುಷ್ಯಂತನ ಸಭೆಗೆ ಬಂದು ಬಾಯಿಗೆ ಬಂದಂತೆ ಮಾತಾಡಿ, ಇವಳನ್ನು ತೆಗೆದುಕೋ ಇಲ್ಲದಿದ್ದರೆ ತೆಗೆದುಕೋ ಶಾಪ ಎಂದು ಹೆದರಿಸಬಹುದಿತ್ತು. ಕಣ್ವಋಷಿ ಬಲು ಮೆತ್ತಗೆ ಎಂದು ದುಷ್ಯಂತನಿಗೆ ಗೊತ್ತಿರಬೇಕು. ತನ್ನ ಮರೆವೆಯನ್ನು ನೀಗಿಸುವ ತಾಕತ್ತು ಅವನಿಗಿಲ್ಲವಾಗಿದ್ದರಿಂದ ಶಕುಂತಲೆಗೆ ನಿನ್ನನ್ನು ನಾನು ಕಂಡೇ ಇಲ್ಲ ಎಂದುಬಿಟ್ಟ. ಅಡವಿಗೆ ಬಂದದ್ದು, ಕಣ್ವಾಶ್ರಮದಲ್ಲಿ ಕಂಡದ್ದು ವಿವರಿಸಿದರೆ "ಹೋ! ನಾವು ಎಲ್ಲೆಲ್ಲೋ ತಿರುಗುತ್ತೇವೆ. ಯಾವ ಯಾವ ಹೆಂಗಸರ ಕೂಡ ಚೆಲ್ಲಾಟ ಮಾಡುತ್ತೇವೆ. ಅವರನ್ನೆಲ್ಲ ಹೆಂಡಂದಿರು ಅಂತೊಪ್ಪಿದರೆ ತೀರಿಯೆ ಹೋಯಿತು. ರಾಜರು ಹೊತ್ತು ಬಂದಾಗ ಏನೇನೋ ಭಾಷೆ ಕೊಡಬಹುದು. ಅದನ್ನೆಲ್ಲ ಸೀರಿಯಸ್ಸಾಗಿ ತೆಗೆದುಕೊಂಡರೆ ಹೇಗೆ?" ಅಂತ ಬಾಯಿಬಿಟ್ಟು ಹೇಳದಿದ್ದರೂ ಮನಸ್ಸಿನಲ್ಲಿ ಅಂದುಕೊಂಡಿರಬೇಕು.

ಬಡ ಶಕುಂತಲೆ ಏನು ಮಾಡಿಯಾಳು! ಕಡೆಯ ಪ್ರೂಫಾಗಿ ರಾಜ ಕೊಟ್ಟ ಉಂಗುರವನ್ನು ತೋರಿಸುತ್ತೇನೆಂದರೆ ಬೆರಳು ಖಾಲಿ! ಅದನ್ನವಳು ಕಳೆದುಕೊಂಡಿದ್ದಳು. ಅವಳು ಸೊಂಡೆ ಒಣಗಿಸಿಕೊಂಡು ಸಭೆಯಿಂದ ಹೊರಟು ಹೋದಳು.

ಮುಂದೆ ಮೀನು ನುಂಗಿದ ಆ ಉಂಗುರ ಸಿಕ್ಕಿತು, ಅದರ ಫಲವಾಗಿ ಬೆಸ್ತರಿಗೆ ಪೊಲೀಸರ ಯಮದಂಡದ ಪರಿಚರ್ಯೆ ಸಿಕ್ಕಿತು. ರಾಜನ ಆಮ್ನೇಶಿಯ ಹೋಗಿ ನೆನಪು ಮರುಕಳಿಸಿತು. ಅವನು ಹೋಗಿ ಹೆಂಡತಿಯನ್ನು ಮಗನನ್ನೂ ಕರೆ ತಂದ. ಅವನೇ ಮುಂದೆ ಭರತ ಚಕ್ರವರ್ತಿಯಾದ.

ಆದರೆ ನಿಮಗಾಗಲಿ, ಕಾಳಿದಾಸನಿಗಾಗಲಿ, ಕಡೆಗೆ ವ್ಯಾಸ ಮಹರ್ಷಿಗಾಗಲಿ ಗೊತ್ತಿಲ್ಲದ ಒಂದು ಪುರಾತನ ರಹಸ್ಯ ಸಿ.ಬಿ.ಐ. ವರದಿ ಮೇಲಿನದನ್ನೆಲ್ಲ ಬರೆದ ನಂತರ ನನಗೆ ಸಿಕ್ಕಿತು. ಅದು ದುಷ್ಯಂತನ ವರ್ತನೆಯ ರಹಸ್ಯವನ್ನು ಕೆಲ ಮಟ್ಟಿಗೆ ಬಿಡಿಸುತ್ತದೆ.

ಅದರ ಸಾರಾಂಶ ಇಷ್ಟು: ಅಡವಿಯಲ್ಲಿ ಶಕುಂತಲೆಗೆ ಆಶ್ವಾಸನೆ ಕೊಟ್ಟು ಗಾಂಧರ್ವ ವಿವಾಹ ಮಾಡಿಕೊಂಡಾಗ ದುಷ್ಯಂತನಿಗೆ ಯಾವ ದುಷ್ಟ ಇರಾದೆಯೂ ಇರಲಿಲ್ಲ. ಆದರೆ ಅವನು ಪಟ್ಟಣಕ್ಕೆ ಹಿಂತಿರುಗುವ ಮೊದಲೇ ಅವನ ಅಡವಿಯ ಹುಡುಗಿಯ ಸುದ್ದಿ ಗೂಢಚಾರರಿಂದ ಅವನ ರಾಣಿ ಲಕ್ಷಣೆಗೆ ತಿಳಿದು ಹೋಗಿತ್ತು. ಅವಳು ದೊಡ್ಡ ರಾದ್ಧಾಂತ ಎಬ್ಬಿಸಿದಳು. ಅವಳ ತಂದೆ ಗಡಿನಾಡಿನಲ್ಲಿ ಪ್ರಬಲ ರಾಜನಾಗಿದ್ದನು. ಅವನಿಂದ ತನ್ನ ರಾಜ್ಯಕ್ಕೆ ಬರಬಹುದಾದ ಗಂಡಾಂತರವನ್ನು ತಪ್ಪಿಸುವುದಕ್ಕೆಂದೇ ಲಕ್ಷಣೆಯನ್ನು ದುಷ್ಯಂತ ಮದುವೆಯಾಗಿದ್ದು. ಈಗ ಅವಳ ತಂದೆ ಸತ್ತಿದ್ದು ಅವಳ ಅಣ್ಣ ಪಟ್ಟವೇರಿದ್ದ. ಶಕುಂತಲೆಯ ವಿರುದ್ಧ ತನ್ನ ತಂಗಿಯ ಬೆನ್ನು ಕಟ್ಟುವ ನೆವದಿಂದ ಅವನು ಗಡಿಯಲ್ಲಿ ಗಲಾಟೆ ಎಬ್ಬಿಸಬಹುದೆಂಬ ಹೆದರಿಕೆ ಇದ್ದದ್ದರಿಂದ ದುಷ್ಯಂತ ಶಕುಂತಲೆಯನ್ನು ನಡುನೀರಲ್ಲಿ ಕೈಬಿಟ್ಟ. ಅವನು ತನ್ನ ಗೂಢಚಾರರ ಮೂಲಕ ದುರ್ವಾಸ ಶಾಪದ ಕಟ್ಟುಕಥೆಯನ್ನು ಪ್ರಚಾರ ಮಾಡಿದ. ಇದರಿಂದ ಶಕುತಂಲೆಯನ್ನೂ ಒಳಗೊಂಡು ಎಲ್ಲರೂ ಸಂತುಷ್ಟರಾದರು. ಮಾತು ಮಾತಿಗೂ ಶಾಪಕೊಡುವವನೆಂದು ದುರ್ವಾಸನಿಗೆ ಅಪವಾದವಿದ್ದದ್ದರಿಂದ ಈ ಕಥೆ ನಂಬಲರ್ಹವಾಗಿತ್ತು. ಆದರೆ ಒಂದು ಸಲ ಕಶ್ಯಪಾಶ್ರಮಕ್ಕೆ ಬಂದಾಗ ಈ ಶಾಪದ ಸುದ್ದಿಯನ್ನು ಶಕುಂತಲೆಯಿಂದ ತಿಳಿದು ದುರ್ವಾಸ ಕಿಡಿಕಿಡಿಯಾದ. ಮುಂಗೋಪಿಯಾದ ಅವನಿಗೆ. ಶಾಪ ಕೊಡುವುದು ಬಾಯಿ ಮುಕ್ಕಳಿಸುವಷ್ಟು ಸಹಜವಾಗಿದ್ದರೂ ತಾನು ಕೊಡದಿದ್ದ ಶಾಪದ ಹೆಸರಲ್ಲಿ ಶಕುಂತಲೆಗೆ ಅನ್ಯಾಯವಾದದ್ದು ಸಹನೆಯಾಗಲಿಲ್ಲ. ಅವನು ತತ್‌ಕ್ಷಣ ದುಷ್ಯಂತನಲ್ಲಿಗೆ ಹೋಗಿ ಅವನಿಗೆ ಶಾಪ ಕೊಡುವುದಾಗಿ ಹೆದರಿಸಿದ್ದರಿಂದ ಅವನು ಹೌಹಾರಿ ದಮ್ಮಯ್ಯ ಗುಡ್ಡೆಹಾಕಿ ಶಕುಂತಲೆಯನ್ನು ಕರೆಸಿಕೊಂಡ. ಅವನ ಮೊದಲ ರಾಣಿ ಲಕ್ಷಣೆ ಈಗ ವಯಸ್ಸಾಗಿ ತೀರ ಕೊಬ್ಬಿ ನೋಡಲು ಅಸಡ್ಡಾಳವಾಗಿದ್ದುದರಿಂದ ಸುಂದರಿಯಾದ ಶಕುಂತಲೆಯನ್ನು ತಿರುಗಿ ಕರೆಸಿಕೊಳ್ಳುವುದಕ್ಕೆ ದುಷ್ಯಂತನಿಗೆ ಒಂದು ಹೆಚ್ಚಿನ ಪ್ರೇರಣೆ ದೊರೆತಿತ್ತೆಂದೂ ಅರಮನೆ ವಲಯಗಳಲ್ಲಿ ಗುಸುಗುಸು ಇತ್ತು.

ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಯಾಕೆಂದರೆ ಈ ಕಾಲದಂತೆ ಆ ಕಾಲದ ಸಿ.ಬಿ.ಐ. ವರದಿಗಳೂ ಪೂರ್ತಿ ನಂಬಲರ್ಹವಾಗಿರಲಿಲ್ಲವೆಂದು ನನ್ನ ಭಾವನೆ.

(೧೯೭೭)

೧೨. ಶಬ್ದಚಟ ಎಂಬ ರೋಗ

ನಿಮಗೆ ಸಿಗರೇಟಿನ ಅಥವಾ ಬೀಡಿಯ ಅಥವಾ ಚಹದ ಅಥವಾ ಅದಕ್ಕಿಂತಲೂ ತುಸು ಬಲವಾದ ಪೇಯದ ಚಟ ಎಂದು ಅಂಟಿಕೊಂಡಿತು? ಎಂದು ಕೇಳಿದರೆ ನೀವು ಕಾಲದ ಮೋಟಾರಿನಲ್ಲಿ ತುಸು ರಿವರ್ಸ್ ಗೇರಿನ ಮೇಲೆ ಚಲಿಸಿ ಸಾಧಾರಣ ಸರಿಯಾಗಿ ಉತ್ತರ ಹೇಳ ಬಲ್ಲಿರಿ. ಹೌದು, ನಿಮ್ಮ ಮಿತ್ರ ನಿಮಗೆ ಮೊದಲನೇ "ಚಾರ್‌ಮಿನಾರ್" ಸಿಗರೇಟನ್ನು ಕೊಟ್ಟು "ಸೇದಯ್ಯಾ, ಚೆನ್ನಾಗಿರುತ್ತೆ" ಎಂದ ದಿವಸ ಅದರ ಚಟ ನಿಮ್ಮನ್ನು ಸೇರಿಕೊಂಡಿತು; ಮತ್ತು ನಿಮ್ಮ ಆ ಮಿತ್ರ ಆ ಮೊದಲನೇ ಸಿಗರೇಟ್‌ದಾನದ ಪ್ರತಿಫಲವನ್ನು ದಿನಕ್ಕೆ ಶೇಕಡಾ ಇನ್ನೂರರ ದರದಲ್ಲಿ ವಸೂಲು ಮಾಡುತ್ತಿದ್ದಾನೆ ಎಂದು ನಿಮಗೆ ಖಂಡಿತ ನೆನಪಿಗೆ ಬರುವುದು. ಅಥವಾ ಬೀಡಿ, ಸಿಗರೇಟ್, ಚುಟ್ಟಗಳ ಘೋರ ಪರಿಣಾಮಗಳನ್ನು ನಿಮ್ಮ ಆರೋಗ್ಯಶಾಸ್ತ್ರ ಪುಸ್ತಕದಲ್ಲಿ ಓದಿದ ನಂತರ ಅದರ ಸತ್ಯಾಸತ್ಯತೆಯನ್ನು ಒರೆದು ನೋಡುವ ವೈಜ್ಞಾನಿಕ ಲವಲವಿಕೆಯೇ ನಿಮ್ಮನ್ನು ನಿಮ್ಮ ತಂದೆ ಸೇದಿ ಒಗೆದ ಬೀಡಿಯ ತುಣುಕಿನಿಂದ ಪ್ರಯೋಗವನ್ನಾರಂಭಿಸಲು ಪ್ರೇರೇಪಿಸಿತೆಂದು ನೀವು ನೆನೆದುಕೊಳ್ಳುವಿರಿ. ಅಥವಾ ನೀವು ನಿಮ್ಮ ಮೊದಲನೇ ಕವಿತೆ ಯನ್ನು ಬರೆಯಲು ಕುಳಿತಾಗ ಸರಸ್ವತೀದೇವಿ ನಿಮ್ಮನ್ನು ಕೈಬಿಟ್ಟು ಮಾಯವಾಗಿರಬಹುದು. ಆಗ ಪ್ರತಿಯೊಬ್ಬ ಕಲಾವಿದನೂ ಒಂದು ಚಟದ ಮೂಲಕ ಸರಸ್ವತಿಯನ್ನು ಆರಾಧಿಸಿ ಕೃತಕೃತ್ಯ ನಾಗಿದ್ದಾನೆಂಬ ವಿಚಾರ ನಿಮ್ಮ ಮತಿಗೆ ಹೊಳೆದು ನೀವು ನಿಮ್ಮ ಮೊದಲ ಗುಟುಕನ್ನು ಕುಡಿ ದಿರಬಹುದು. ಅನಂತರ ಕಾವ್ಯಕಾಮಿನಿ ನಿಮಗೊಲಿಯದಿದ್ದರೂ ನೀವು ಚಟದ ಭಾಮಿನಿ ಯನ್ನು ನಿಮ್ಮವಳಾಗಿ ಮಾಡಿಕೊಂಡಿದ್ದೀರಿ ಅಥವಾ ಅವಳು ನಿಮ್ಮನ್ನು ತನ್ನವನಾಗಿ ಮಾಡಿ ಕೊಂಡಿದ್ದಾಳೆ ಎಂಬ ಅಂಶವನ್ನು ನೀವು ಮರೆತಿರಲಿಕ್ಕಿಲ್ಲ.

ಆದರೆ ಕೆಲ ಕೆಲವು ಮಾತುಗಳ ಚಟ ನಿಮಗೆ ಎಂದು, ಎಲ್ಲಿ, ಹೇಗೆ ಅಂಟಿಕೊಂಡಿತೆಂದು ಕೇಳಿದರೆ ನೀವು ಕೂದಲು ಕಿತ್ತು ಬರುವವರೆಗೆ ತಲೆ ಕೆರೆದು ಕೊಂಡರೂ ಅದರ ಮೂಲವನ್ನು ಕಂಡುಹಿಡಿಯಲಾರಿರಿ. ನೀವು ಮಾತು ಮಾತಿಗೆ "ಮತ್ತೆ" "ಅಂದಬಳಿಕ" ಎಂದು ಹೇಳುತ್ತೀರಲ್ಲ, ಆ ಚಟ ನಿಮಗೆ ಎಂದು ತಗಲಿತು ಹೇಳಿ? ನೀವು ಮಾತುಮಾತಿಗೆ "ಮತ್ತೆ" ಅನ್ನುತ್ತೀರೆಂದು ಕೇಳಿ ನಿಮಗೇ ಆಶ್ಚರ್ಯವಾಗುತ್ತದೆ. ಯಾಕೆ ನೀವು "ಮತ್ತೆ ಮತ್ತೆ" ಮಂತ್ರ ಹೇಳುತ್ತೀರಿ ಎಂಬುದಕ್ಕೂ ನಿಮ್ಮಲ್ಲಿ ಉತ್ತರವಿಲ್ಲ. ನಿಮ್ಮ ಮೂಗಿನ ತುದಿ ತುಸು ಮೇಲಕ್ಕೆ ಏಕೆ ತಿರುಗಿದೆ? ಎಂದು ಕೇಳಿದ ಹಾಗೆಯೇ ಇದು.

ಪ್ರಪಂಚದಲ್ಲಿ ವಿಕಾರವಾಗಿರುವುದರಲ್ಲೆಲ್ಲ ಅಪರಿಮಿತ ಉತ್ಸಾಹ ನನಗೆ. ಆದ್ದರಿಂದ ನಾನು ಇಂಥ ಅನೇಕ "ಶಬ್ದಚಟ"ಗಳನ್ನು ಸಂಗ್ರಹಿಸಿ ಒಂದು "ಸವನೀರು" ಮಾಡಿದ್ದೇನೆ. ಉದಾಹ ರಣೆಗೆ ನೀವೂ ನನ್ನಂತೆ ಆ "ಭಯಂಕರ" ರೋಗಿಗಳನ್ನು ಕಂಡಿರಲೇಬೇಕು. (ಹೆದರಬೇಡಿ. ಅದೊಂದು ಸ್ವಲ್ಪ ಮಟ್ಟಿಗೆ ಅಂಟುಜಾಡ್ಯ ನಿಜ, ಆದರೆ ಅದರಲ್ಲಿ ಅಪಾಯಕರವಾದದ್ದೇನೂ ಇಲ್ಲ).

ಈ ರೋಗಿಗಳಿಗೆ ಎಲ್ಲವೂ ಭಯಂಕರವೇ ಆಗಿ ಕಾಣಸುತ್ತದೆ. ಆಫೀಸಿನ "ಸಾಹೇಬ", "ಭಯಂಕರ" ಮೂರ್ಖ ಇದ್ದಾನೆ ಎಂದು ಅವರು ನಿಮಗ ಹೇಳುವರು. ಇರಬಹುದು ಎಂದುಕೊಳ್ಳುತ್ತೀರಿ ನೀವು. ನಿಜವಾಗಿ ಕೆಲ ಅಧಿಕಾರಿಗಳು ಸರ್ಕಸ್ ಸಿಂಹದಂತೆ ಭಯಂಕರ

ರಾಗಿರುವುದುಂಟೆಂದು ನಿಮಗೆ ಗೊತ್ತಿದೆ. ಆ ಮೇಲೆ ಅವರು "ನಿನ್ನೆ ನಾಗಪಂಚಮಿಯ ದಿನ ನನ್ನ ಹೆಂಡತಿ ಮಾಡಿದ ಕಡುಬು ಭಯಂಕರ ರುಚಿಯಾಗಿತ್ತು" ಅನ್ನುವರು. ನಿಮಗೀಗ ತುಸು ಸೋಜಿಗವಾಗತೊಡಗುತ್ತದೆ. ಭಯಂಕರ ರುಚಿ ಎಂದರೇನಿರಬಹುದು? ಇದ್ದೀತು. ಕಡುಬು ಎಷ್ಟು ರುಚಿಯಾಗಿತ್ತೆಂದರೆ, ಅದನ್ನು ಸಿಕ್ಕಾಪಟ್ಟೆ ತಿಂದು ಈ ಮನುಷ್ಯನಿಗೆ ಹೊಟ್ಟೆಕಡಿತ ಎದ್ದು ಔಡಲ ಎಣ್ಣೆಯ ಆಶ್ರಯ ಪಡೆಯುವ ಅವಸ್ಥೆ ಬಂದಿರಬೇಕು. ಅದರಿಂದಲೇ ಅದೀಗ ಅವನಿಗೆ ರುಚಿಯಾಗಿದೆ. ಆದರೆ ಪರಿಣಾಮದಲ್ಲಿ ಭಯಂಕರವೂ ಆಗಿದೆ ಎನಿಸಿರಬಹುದು ಎಂದು ನೀವು ತರ್ಕಶಕ್ತಿಯನ್ನುಪಯೋಗಿಸುತ್ತೀರಿ. ಮುಂದಿನ ವಾಕ್ಯದಲ್ಲೇ ಅವರು ನೆರೆಮನೆಯ ಹುಡುಗಿ ಭಯಂಕರ ಸುಂದರಿಯೆಂದೋ ತಮ್ಮ ಗೆಳೆಯ ಭಯಂಕರ ಒಳ್ಳೇ ಮನುಷ್ಯನೆಂದೋ ಹೇಳಿ ನಿಮ್ಮನ್ನು ಗಲಿಬಿಲಿಗೊಳಿಸುತ್ತಾರೆ. ಆದರೂ ಚೇತರಿಸಿಕೊಂಡು ಬರ್ನಾರ್ಡ್ ಶಾ ಹೇಳಿಲ್ಲವೇ, ಅತಿ ಒಳ್ಳೆಯವನಾಗಿರುವುದೂ ಅಪಾಯಕರ ಎಂದು? ಭಯಂಕರ ಸುಂದರಿ, ಭಯಂಕರ ಒಳ್ಳೆಯವ ಕೂಡ ಹೀಗಿರಬಹುದು! ಎಂದು ನೀವು ಸಮಾಧಾನಪಟ್ಟುಕೊಳ್ಳುವಷ್ಟರಲ್ಲಿ ಈ ಭಯಂಕರ ಪುರುಷರು, "ನಿನ್ನೆ ರಾತ್ರಿ ನನಗೆ ಭಯಂಕರ ಚೆನ್ನಾಗಿ ನಿದ್ದೆ ಬಂತು" ಎಂತಲೋ, ಪರೀಕ್ಷೆಯ ಪ್ರಶ್ನೆಗಳು "ಭಯಂಕರ ಸುಲಭವಾಗಿದ್ದವು, ಎಂದೋ, "ನಿಮ್ಮ ಕವಿತೆ ನನಗೆ ಭಯಂಕರ ಮೆಚ್ಚಿಕೆಯಾಯಿತು" ಎಂದೋ ಹೇಳಿ ನಿಮ್ಮನ್ನು ಪೂರ್ತಿ ನಿಶ್ಚೇಷ್ಟಿತರನ್ನಾಗಿ ಮಾಡುವರು.

ಕೆಲಕೆಲವು ರೋಗಗಳಂತೆ ಕೆಲಕೆಲವು "ಶಬ್ದಚಟ"ಗಳು ಕೆಲಕೆಲವು ಪ್ರದೇಶಗಳಲ್ಲೇ ವಿಶೇಷವಾಗಿ ಪ್ರಸಾರವಾಗುವಂತೆ ಕಾಣುತ್ತದೆ. ನೀವು ಘಟ್ಟಗಳನ್ನು ದಾಟಿ ಉತ್ತರ ಕನ್ನಡಕ್ಕೊ ದಕ್ಷಿಣ ಕನ್ನಡಕ್ಕೊ ಹೋಗುತ್ತಿದ್ದರೆ ಗಡಿ ದಾಟುವ ಮೊದಲೇ ಒಂದು ರೋಗದ ಲಕ್ಷಣಗಳು ಕಾಣಿಸತೊಡಗುವವು. ಬಸ್ಸಿನ ಕಂಡಕ್ಟರ ನಿಮಗೆ "ಸ್ವಲ್ಪ ಸರಿದು ಕೂತುಕೊಳ್ಳಬೇಕು, ಗೊತ್ತಾಯ್ತಲ್ವೊ?" ಎಂದು ಕೇಳುತ್ತಾನೆ. ನೀವು ಇದರಿಂದ ಕೆರಳಬಾರದೆಂದು ಈ ಮೂಲಕ ಪ್ರಾರ್ಥಿಸಿಕೊಳ್ಳಲಾಗಿದೆ. ಸರಿದು ಕೂತುಕೊಳ್ಳಬೇಕು ಎಂಬ ಅತ್ಯಂತ ಸರಳವಾದ ವಿಚಾರ ಕೂಡ, ತಿಳಿಹೇಳಿದ ಮೇಲೂ ಗೊತ್ತಾಗಲಾರದ ಮೂಢರು ನೀವೆಂದು ಕಂಡಕ್ಟರನ ಅಭಿಪ್ರಾಯವಲ್ಲ. ನಿಮ್ಮ ಮಿದುಳಿನ ಸಾಮರ್ಥ್ಯದ ಬಗ್ಗೆ ಯಾವುದೊಂದು ಅನುಕೂಲ ಅಥವಾ ಪ್ರತಿಕೂಲ ಟೀಕೆ ಮಾಡುವ ಉದ್ದೇಶ ಅವನ ಕನಸಿನಲ್ಲಿಯೂ ಇಲ್ಲ. "ಗೊತ್ತಾಯ್ತಲ್ವೊ?" ಎಂಬುದು ಅವನ ಮಟ್ಟಿಗೆ ಒಂದು ವಿರಾಮಚಿಹ್ನೆ ಮಾತ್ರ. ಅಲ್ಪವಿರಾಮ (,) ಮಧ್ಯವಿರಾಮ (;) ಮತ್ತು ಪೂರ್ಣವಿರಾಮ (.) ಇದಾವುದನ್ನೂ ಅದು ಪ್ರತಿನಿಧಿಸಬಹುದು. "ನಾನು ಹೇಳಿದೆ, ಗೊತ್ತಾಯ್ತಲ್ವೊ? ಅವನಿಗೆ" ಎಂದು ಆತ ಹೇಳಿದರೆ ಹೋಳಿಗೆಯ ಎರಡು ಪರೆಗಳ ನಡುವೆ ಸಿಲುಕಿದ ಹೂರಣದಂತಿರುವ ಈ "ಗೊತ್ತಾಯ್ತಲ್ವೊ?" ಎಂಬುದು ಅಲ್ಪವಿರಾಮ ಚಿಹ್ನೆಯೆಂದು ತಿಳಿಯಬೇಕು. ಬದಲಿಗೆ ಅದು ತುದಿಯಲ್ಲಿ ಬಂದರೆ ಪೂರ್ಣವಿರಾಮವಾಗುತ್ತದೆ. ಇನ್ನು ಕೆಲವು ವೇಳೆ ಆತ "ಗೊತ್ತಾಯ್ತಲ್ವೊ? ಇಲ್ಲಿ ಹತ್ತು ನಿಮಿಷ ಮೋಟ್ರು ನಿಲ್ತದೆ, ಗೊತ್ತಾಯ್ತಲ್ವೊ?" ಎನ್ನುತ್ತಾನೆ. ಇದನ್ನು ನೀವು ಯಾವುದಾದರೂ ಮಂತ್ರದ ಪ್ರಾರಂಭದಲ್ಲೂ ಕೊನೆಯಲ್ಲೂ ಉಚ್ಚರಿಸುವ ಓಂಕಾರದ ಹಾಗೆ ಎಂದು ಬೇಕಾದರೆ ತಿಳಿದುಕೊಳ್ಳಬಹುದು.

ಒಮ್ಮೊಮ್ಮೆ ಈ "ಗೊತ್ತಾಯ್ತಲ್ವೊ" ದ ಫಲವಾಗಿ ತುಂಬಾ ಕಟು (ಅನುಭವಿಸಿದವರಿ

ಗ)-ಮಧುರ (ಕೇಳುವವರಿಗೆ) ಪರಿಸ್ಥಿತಿಗಳುಂಟಾಗುವುದುಂಟು. ಒಂದು ಸಲ ದಕ್ಷಿಣ ಕನ್ನಡದ ಹಿರಿಯ ಸಾಹಿತಿಗಳೊಬ್ಬರು ಬೆಂಗಳೂರಿಗೆ ಹೋಗಿದ್ದರಂತೆ. ಸ್ವಾಭಾವಿಕವಾಗಿ ಅವರ ದರ್ಶನಕ್ಕಾಗಿ ಬೆಂಗಳೂರಿನ ಸಾಹಿತ್ಯ ಮಹಾರಥಿಗಳನೇಕರು ಬಂದರು. ದಕ್ಷಿಣ ಕನ್ನಡದ ಮಹಾಶಯರು "ಗೊತ್ತಾಯ್ತಲ್ವೊ?" ಗಳನ್ನು ಪ್ರತಿಯೊಂದು ವಾಕ್ಯದಲ್ಲಿ ಉಪಯೋಗಿಸುವುದನ್ನು ಕೇಳಿ ಸೂಕ್ಷ್ಮಸ್ವಭಾವದ ಮೈಸೂರವರಿಗೆ ತಡೆಯಲಾರದಾಗಿ, "ಇಲ್ಲ, ಸ್ವಾಮಿ. ನಮಗೆ ಗೊತ್ತಾಗೋದಿಲ್ಲ. ನಾವು ಶತಮೂರ್ಖರು" ಎಂದು ಹೇಳಿ ಎದ್ದು ಹೋಗಿಬಿಟ್ಟರಂತೆ!

ನನ್ನ ಪರಿಚಿತರೊಬ್ಬರು ಅತ್ಯಂತ ಅಪೂರ್ವವಾದ ಶಬ್ದಚಟದಿಂದ ಪೀಡಿತರಾಗಿದ್ದರು. ಅವರ ಹತ್ತಿರ ಒಂದು ಜೋಡು ಪಲ್ಲವಿ ಇತ್ತು. "ಹೋಗ್ಲತ್ಲಾಗಿ!" "ಬರ್ಲಿತ್ಲಾಗಿ!" ನಿತ್ಯ ಬೆಳಿಗ್ಗೆ ಎದ್ದ ಕೂಡಲೆ ಉಚ್ಚರಿಸಿದ ಮೊದಲನೇ ವಾಕ್ಯ "ಹೋಗ್ಲತ್ಲಾಗಿ" ಯಿಂದ ಮುಕ್ತಾಯವಾಗುತ್ತಿತ್ತು. ಎರಡನೆಯದು "ಬರ್ಲಿತ್ಲಾಗಿ" ಯಿಂದ. ಇದೇ ವರ್ತನೆಯಿಂದ ಅವರಾಡಿದ ಎಲ್ಲ ವಾಕ್ಯಗಳೂ ಬೆಸವಾಕ್ಯವಾದರೆ "ಹೋಗ್ಲತ್ಲಾಗಿ", ಸರಿ ವಾಕ್ಯವಾದರೆ "ಬರ್ಲಿತ್ಲಾಗಿ" ಯಿಂದ ಸಮಾಪ್ತವಾಗುತ್ತಿದ್ದವು. "ಇಸ್ಪೇಟಾಟದಲ್ಲಿ ಹತ್ತು ರೂಪಾಯಿ ಕಳಕೊಂಡೆ. ಹೋಗ್ಲತ್ಲಾಗಿ! ನಿನ್ನೆ ನನ್ನ ಮಗ ಬೊಂಬಾಯಿಂದ ಬಂದ. ಬರ್ಲಿತ್ಲಾಗಿ! ಆಗಲಿ. ಅಡ್ಡಿಯಿಲ್ಲ" ಎಂದುಕೊಳ್ಳುತ್ತಿದ್ದೆ ನಾನು. ಆದರೆ ಯಾವಾಗಲೂ ಅರ್ಥಕ್ಕನುಸಾರವಾಗಿಯೇ ಈ ಪಲ್ಲವಿ ಬರುತ್ತಿತ್ತೆಂಬ ನಿಯಮವಿದ್ದಿಲ್ಲ. ಒಂದು ಸಲ ಅವರು, "ನಮ್ಮ ಮನೆ ಮುಂದೆ ಒಂದು ನಾಯಿಯ ಹೆಣ ಬಿದ್ದಿದೆ" ಎಂದು ಅದರ ತುದಿಗೆ "ಬರ್ಲಿತ್ಲಾಗಿ" ಎಂಬ ಪಲ್ಲವಿ ಹೇಳಿದರು. ಅನಂತರ ಅವರು "ನನ್ನ ಹೆಂಡತಿಗೆ ತುಂಬ ಕಾಯಿಲೆಯಾಗಿದೆ. ಹೋಗ್ಲತ್ಲಾಗಿ!" ಎಂದರು. ಅವರ ಹೆಂಡತಿ ಪಾಪ, ಸಾಧ್ವಿ ಆ ಕಾಯಿಲೆಯಲ್ಲಿ ಹೋಗಿಯೇಬಿಟ್ಟರು.

ಕೆಲವರಿಗೆ "ಇಟ್ಟುಕೊಳ್ಳು"ವ ಚಟ ಹತ್ತಿರುತ್ತದೆ. "....ಅಂತ ಇಟ್ಟುಕೋ" ಎಂದು ಪ್ರತಿ ವಾಕ್ಯಕ್ಕೊಮ್ಮೆ ಹೇಳಲೇಬೇಕು. "ನಾ ಯಾಕೆ ಇಟ್ಟುಕೊಳ್ಳಲಿ, ನೀನೇ ಇಟ್ಟುಕೋ!" ಎಂದೊಮ್ಮೆ ನಾನು ತಡೆಯಲಾರದೆ ಇಂಥ ಒಬ್ಬರಿಗೆ ಹೇಳಬೇಕಾಯಿತು. "ಅಂತಿಳಕೊಂಡು" ಮತ್ತು "ಅಂತಿಳಕೊಂಡುಂತಂತಂದರೆ" ಎಂಬ ಅದರದೇ ದೀರ್ಘೀಭೂತ ಆವೃತ್ತಿಗಳನ್ನು ಮದುವೆ ಮಾಡಿಕೊಂಡವರಿದ್ದಾರೆ. ಒಬ್ಬ ಮಹಾಪುರುಷರು ಒಂದು ತಾಸಿನ ಭಾಷಣದಲ್ಲಿ "ಏನಪಾಂತಂದರೆ" ಎಂಬುದನ್ನು ೧೭೭೯ ಸಲ ಪುನರಾವರ್ತನೆ ಮಾಡಿದರೆಂದು ನಾನೊಮ್ಮೆ ಲೆಕ್ಕ ಮಾಡಿದ್ದೆ. ಈ ಅಂಕ ಸಂಖ್ಯೆ ಸಂಗ್ರಹವು ನನಗೆ ಎಷ್ಟು ಸ್ವಾರಸ್ಯವೆನಿಸಿತೆಂದರೆ ಅವರು ಆವೊತ್ತಿನ ಭಾಷಣದಲ್ಲಿ ಏನು ಹೇಳಿದರೆಂಬ ಪ್ರಜ್ಞೆಯೇ ನನಗಿರಲಿಲ್ಲ. ೫೦ ವರ್ಷದ ಜೀವಮಾನದಲ್ಲಿ ಅವರು "ಏನಪಾಂತಂದರೆ" ಯನ್ನು ಕನಿಷ್ಠ ಒಂದು ಕೋಟಿ ಸಲ ಪುನರುಚ್ಚರಣೆ ಮಾಡಿರಬೇಕು. ಅದು ಯಾವುದಾದರೊಂದು ಮಂತ್ರವಾಗಿದ್ದರೆ ಅವರಿಗೆ ಖಂಡಿತವಾಗಿ ಎಂದೋ ಸಿದ್ಧಿಯಾಗಿಬಿಡುತ್ತಿತ್ತು.

ಆದರೆ ಇವರನ್ನೆಲ್ಲ ನಿವಾಳಿಸಿ ಒಗೆಯುವವರು ಸರ್ವನಾಮಸಿದ್ಧರು. ಇವರ ಶಬ್ದಪ್ರಪಂಚವೆಲ್ಲ ಉಪನಿಷತ್ತಿನ ಶಾಂತಿಮಂತ್ರದಂತೆ "ಅದು ಇದು" ಇವುಗಳಿಂದ ಪೂರ್ಣವಾಗಿದೆ. ಒಬ್ಬ ಮನುಷ್ಯನಿಗೆ ತನ್ನ ಸಾಮಾನ್ಯ ವಿಚಾರಗಳನ್ನು ವ್ಯಕ್ತಗೊಳಿಸಬೇಕಾದರೆ ಕನಿಷ್ಠ ೬೦೦ ಶಬ್ದಗಳಾದರೂ ಬೇಕೆಂದು ಭಾಷಾಪಂಡಿತರ ಮತ. ಆದರೆ ಸರ್ವನಾಮಸಿದ್ಧರು ಇದನ್ನು ಸುಳ್ಳುಗಳೆದು ತೋರಿಸಿದ್ದಾರೆ. ಎರಡೇ ಶಬ್ದಬಾಣಗಳನ್ನು ಬತ್ತಳಿಕೆಯಲ್ಲಿಟ್ಟುಕೊಂಡು ಅವರು ಜಗತ್ತನ್ನು

ಜಯಿಸಿ ಬರುತ್ತಾರೆ. ಅವರ ಪಾಲಿಗೆ ಕೋಶಗಳು ನಿರರ್ಥಕ ಪದಾರ್ಥಗಳು. "ನಾನು ಇದು ಮಾಡುವಾಗ...ಇದು ಆಗಿದ್ದರಿಂದ,...ಇದು ಮಾಡುವ...ಇದು ಬಂತು." ಇವುಗಳಲ್ಲಿ ಪ್ರತಿಯಂದು "ಇದ" ಕ್ಕೂ ಪ್ರತ್ಯೇಕ ಪ್ರತ್ಯೇಕ ಅರ್ಥವಿದೆ, ನಿಮ್ಮ ಊಹಾ ಶಕ್ತಿ ಅತಿ ಪ್ರಬಲವಾಗಿದ್ದರೆ ಮಾತ್ರ ಇವರ ವಾಕ್‌ಸಮಸ್ಯೆಗಳನ್ನು ನೀವು ತಕ್ಕಮಟ್ಟಿಗೆ ಯಶಸ್ವಿಯಾಗಿ ಬಿಡಿಸಬಲ್ಲಿರಿ.

ಮಂಗಳೂರಿನಲ್ಲಿ ಪ್ರಸಿದ್ಧ ಪುರುಷರೊಬ್ಬರು ಮಾಡಿದ "ಕುಮಾರಿ ಭಾಷಣ" (maiden speech) ವೊಂದನ್ನು ನಾನು ಸತ್ತರೂ ಮರೆಯಲಾರೆ. ಅವರು ರಾಜಕೀಯಕ್ಕೆ ಹೊಸಬರಾಗಿದ್ದರು. ಅವರು ಎಂದೂ ಭಾಷಣ ವೇದಿಕೆ ಹತ್ತಿದವರಲ್ಲ, ಅವರನ್ನು ಅಧ್ಯಕ್ಷರು ಭಾಷಣಕ್ಕೆ ಕರೆದೊಡನೆ ಅವರು ಸ್ವಲ್ಪ ನಡುಗುತ್ತಲೇ ಬಂದು ಮೇಜಿನ ಅಂಚು ಹಿಡಿದುಕೊಂಡು ನಿಂತರು. ಒಣ ತುಟಿಗಳಿಗೆ ಒಣ ನಾಲಗೆಯ ಅಮೃತವನ್ನು ಹಚ್ಚುತ್ತ ಅವರು ಪ್ರಾರಂಭಿಸಿದರು. "...ಇವರೇ ಮತ್ತು...ಇವರೇ, ನಾನು...ನನಗೆ ...ಇದು ಮಾಡಿ...ಇದು ಇಲ್ಲ. ಆದರೆ...ಇವರು...ಇದು ಮಾಡಿದ್ದರಿಂದ...ಇದು ಮಾಡಲು.." ಆದರೆ ಈ ಬಡಪಾಯಿಗೆ ಬಹಳ ಹೊತ್ತು "ಇದು" ಮಾಡುವ ಪ್ರಸಂಗ ಬರಲಿಲ್ಲ. ಹಿಂದಿನ ಸಾಲಿನಲ್ಲಿ ನಿಂತಿದ್ದ ಯಾರೋ ಒಬ್ಬ ಕುಚೋದ್ಯಗಾರ. "ಸ್ವಾಮಿ, ನಿಮಗೆ ಇದು ಮಾಡಲು ಇದು ಇಲ್ಲದಿದ್ದರೆ ದಯವಿಟ್ಟು ಇದು ಮುಚ್ಚಿಕೊಂಡು ಇದು ಮಾಡಿ ಬಿಡಿ!" ಎಂದು ಕೂಗಿದ. ಅನಂತರ ಈ ಮಹನೀಯರು ರಾಜಕಾರಣದಲ್ಲಿ ಪ್ರವೀಣರಾದರೂ ಆ ಅವರ ಪ್ರಥಮ ಭಾಷಣವೇ ಕೊನೆಯ ಭಾಷಣವೂ ಆಯಿತು.

ಜನರಿಗೆ ಒಂದೊಂದು ಶಬ್ದದ ರೋಗ ಹೀಗೇಕೆ ಅಂಟಿಕೊಳ್ಳುತ್ತದೆ? ಹೇಗೋ ಮಾಡಿ ಈ ಶಬ್ದಗಳು ಅವರ ಮಿದುಳಿನ ಕತ್ತರಿ ರಸ್ತೆಗಳ ಕೂಟದಲ್ಲಿ ಸೇರಿಕೊಂಡು ಬಿಡುತ್ತವೆಯೋ? ಹಾಗಾಗಿ ಪ್ರತಿಯೊಂದು ವಾಕ್ಯದ ವಾಹನ ಆ ದಾರಿಯಲ್ಲಿ ಬರುವಾಗ ಅದರ ಮೇಲೆ ಅವು ಏರಿ ಬಿಡುತ್ತವೋ ಹೇಗೆ? ಪ್ರತಿಯೊಂದು ಮಂತ್ರಿಮಂಡಲದಲ್ಲಿಯೂ ತಪ್ಪದೆ ಕಾಣಿಸಿಕೊಳ್ಳುವ ಕೆಲ ರಾಜಕಾರಣಿಗಳಂತೆ ಈ ಶಬ್ದಗಳ ಹತ್ತಿರವೂ ಏನಾದರೊಂದು ಯುಕ್ತಿ ಇರುವುದೇ? ಅಥವಾ ಇವು ವಿಚಾರದಾರಿದ್ರ್ಯ ದ್ಯೋತಕವೇ? ಮುಂದೇನು ಹೇಳಬೇಕೆಂದು ಮನ ಚಡಪಡಿತ್ತಿರುವಾಗ ಈ ಶಬ್ದಗಳು ಮಲಬದ್ಧತೆಯುಳ್ಳವನ ತಿಣುಕಾಟದಂತೆ ಹುಟ್ಟಿಕೊಳ್ಳುವವೇ? ನನಗೆ ಗೊತ್ತಿಲ್ಲ. ಕಾರಣವೇನೇ ಇರಲಿ, ಇವು ಸ್ವಲ್ಪ ಹೊತ್ತಿನವರೆಗೆ ಕೇಳುವವರಿಗೆ ಮೋಜೆನಿಸಿ, ಮುಂದೆ ಆಕಳಿಕೆ ತರಲು ಸಮರ್ಥವಾಗುತ್ತವೆಂಬುದಂತೂ ನಿಜ.

ಈ ಚಟವನ್ನು ಬಿಡಿಸುವುದು ಸುಲಭವಲ್ಲ. ನನ್ನ ನಿಕಟ ಮಿತ್ರರೊಬ್ಬರಿಗೆ ಪ್ರತಿ ವಾಕ್ಯಕ್ಕೊಮ್ಮೆ "ಆದರೆ" ಎನ್ನುವ ಅಭ್ಯಾಸವಿತ್ತು. ನಾನು ಅವರಿಗೆ "ಆದರೆ ಹೋದರೆ ಹತ್ತಿ ಬೆಳೆದರೆ ಅಜ್ಜಿಗೊಂದು ಪಟ್ಟೇ ಸೀರೇ" ಎಂದು ಛೇಡಿಸುತ್ತಿದ್ದೆ. ಕೊನೆಗೊಂದು ದಿನ ಅವರು "ಆದರೆ" ಯನ್ನು ಡೈವೋರ್ಸು ಮಾಡುವ ದೃಢ ಪ್ರತಿಜ್ಞೆ ತೊಟ್ಟರು. ಮರುದಿನ ಅವರ ಮಾತಿನಲ್ಲಿ "ಆದರೆ" ಔಷಧಕ್ಕೂ ಸಿಗಲಿಲ್ಲ. ಆದರೆ ಮೆಲ್ಲಮೆಲ್ಲಗೆ ನನಗೆ ಅವರನ್ನು ಬೇರೊಂದು ರೋಗ ಆಕ್ರಮಿಸಿದ್ದು ಲಕ್ಷ್ಯಕ್ಕೆ ಬಂತು. ಅವರೀಗ "ಮತ್ತು..ಮತ್ತು..ಮತ್ತು" ಎಂದು "ಆದರೆ" ಯ ಬದಲಿಗೆ ಹೇಳುತ್ತಿದ್ದರು. ಹೀಗಿದೆ ನೋಡಿ. ಈ ಚಟವೂ ತಂಬಾಕಿನ ಚಟದ ಹಾಗೆಯೇ. ಸಿಗರೇಟಿನ ಚಟ ಬಿಡಬೇಕಾದರೆ ನೀವು ನಶ್ಯದ ಚಟ ಹಿಡಿಯಬೇಕಾ

ಗುತ್ತದೆ. ಕೊನೆಗೆ ಎರಡೂ ಚಟಗಳು ನಿಮ್ಮನ್ನು ಆವರಿಸಿರುತ್ತವೆ. ಬಾಯಿಯೂ ನಾತ, ಕರವಸ್ತ್ರವೂ ಕೊಳಕು!

ಭಾರತದ ಜನರಲ್ಲಿ ಶೇಕಡಾ ೬೦ರಷ್ಟು ರೋಗಗಳು ಹೊಟ್ಟೆಯೊಳಗಿನ ದೋಷದಿಂದ ಉತ್ಪನ್ನವಾದವುಗಳು ಎಂದು ಪ್ರಧಾನ ಮಂತ್ರಿ ಜವಾಹರರು ಹೇಳಿದ್ದಾರೆ.

-ಅದರ ಶಾಸ್ತ್ರೀಯ ಹೆಸರು "ಹೊಟ್ಟೆಕಿಚ್ಚು" ಎಂದೆ?

೧೩. ಶಬ್ದಶಕ್ತಿ ಹೆಚ್ಚಿಸಿಕೊಳ್ಳಿ

ಅಮೇರಿಕದ ಮಿಲಿಟರಿ ವಿಜ್ಞಾನಿಗಳು ಕಿರಿಕಿರಿ ಸದ್ದು ಮಾಡುವ ಯಂತ್ರಗಳ ಶಬ್ದಪೀಡೆಯನ್ನು ತಪ್ಪಿಸಲು ಒಂದು ಉಪಾಯ ಕಂಡುಹಿಡಿದಿದ್ದಾರೆ. ಅದು ನಂಬಲಾರದಷ್ಟು ಸುಲಭವಾಗಿದೆ. ಯಂತ್ರಗಳೊಳಗಿನ ವಿವಿಧ ತರದ ಶಬ್ದಗಳನ್ನು ನಿಶ್ಯಬ್ದಗೊಳಿಸಲು ಅವರು ಯಂತ್ರಗಳ ಹೊರಗೆ ಆ ಶಬ್ದಗಳಿಗಿಂತಲೂ ಗಟ್ಟಿಯಾದ ಬೇರೆ ಶಬ್ದಗಳನ್ನು ಹೊರಡಿಸುವುದು ಉತ್ತಮ ಉಪಾಯವೆಂದು ನಿರ್ಧರಿಸಿದ್ದಾರೆ. ಅಮೇರಿಕನ್ ಸೈನಿಕರಿಗೆ ಈ ಶಬ್ದ ಸಮುದ್ರವು ಶಬ್ದ ನದಿಗಳಿಗಿಂತ ಹೆಚ್ಚು ಪ್ರಿಯವಾಗುವವೋ ಇಲ್ಲವೋ ಎಂಬುದು ಕೇವಲ ಊಹೆಯ ಮಾತಾಗಿದೆ. ಆದರೆ ಅಮೇರಿಕದ ಮಿಲಿಟರಿ ವಿಜ್ಞಾನಿಗಳು ಇಲ್ಲಿ ಹೊಸದೇನನ್ನು ಕಂಡುಹಿಡಿದಿದ್ದಾರೆ ಎಂದು ಲಾಂಗೂಲಾಚಾರ್ಯರಿಗೆ ಅರ್ಥವಾಗದಾಗಿದೆ. ಈ ವಿಜ್ಞಾನಿಗಳಲ್ಲಿ ಯಾರಾದರೊಬ್ಬರು ಹುಬ್ಬಳ್ಳಿಯ ಯಾವುದಾದರೊಂದು ಗಲ್ಲಿಯ ಯಾವುದಾದರೊಂದು ನಲ್ಲಿಯವರೆಗೆ ಬರಲು ಒಪ್ಪುವುದಾದರೆ ಈ ತತ್ವವು ಇಲ್ಲಿ ಸೇರಿದ ಮಹಿಳೆಯರಿಗೆ ಎಂದಿನಿಂದಲೋ ಗೊತ್ತಿದೆಯೆಂದು ಲಾಂಗೂಲಾಚಾರ್ಯರು ತೋರಿಸಿಕೊಡಲು ಸಿದ್ಧರಿದ್ದಾರೆ. ನಿಮಗೆ ಕೇಳಲು ಇಷ್ಟವಿಲ್ಲದ ಶಬ್ದಗಳನ್ನು ನಿಶ್ಯಬ್ದಗೊಳಿಸಲು ಆ ಶಬ್ದಕ್ಕಿಂತ ಗಟ್ಟಿಯಾದ ಶಬ್ದವನ್ನು ಮಾಡುವುದೇ ಎಂದು ಈ ಮಹಿಳೆಯರು ಪ್ರತ್ಯಕ್ಷವಾಗಿ ತೋರಿಸಿಕೊಡುವರು. ಹುಬ್ಬಳ್ಳಿಯ ನಲ್ಲಿಯ ನೀರೆಯರು ಎಷ್ಟೋ ವರ್ಷಗಳ ಹಿಂದೆ ಕಂಡುಹಿಡಿದ ಸಂಗತಿಯನ್ನು ತಮ್ಮ ಶೋಧವೆಂದು ಅಮೇರಿಕನ್ ವಿಜ್ಞಾನಿಗಳು ಹೇಳಿಕೊಳ್ಳುವುದು ಅನ್ಯಾಯ ಮತ್ತು ಕೃತಿಚೌರ್ಯವಲ್ಲವೆ?

ಈ ಬಗೆಯ ಶಬ್ದಾತೀತ ವಿಧಾನವು ಅನೇಕ ಗುಣಗಳಿಂದ ಕೂಡಿದೆಯೆಂದು ಲಾಂಗೂಲಾಚಾರ್ಯರ ಮತ. ಇನ್ನೊಬ್ಬನ ಸದ್ದಡಗಿಸಲು ನೀವು ಅವನಿಗಿಂತ ದೊಡ್ಡ ಸದ್ದು ಮಾಡುವುದು ಯಾವುದಾದರೊಂದು ಜಗಳವನ್ನು ಯಶಸ್ವಿಯಾಗಿ ಕೊನೆಗೊಳಿಸುವ ಅತ್ಯಂತ ಅಹಿಂಸಾತ್ಮಕ ವಿಧಾನವಾಗಿದೆ. ಇದಕ್ಕೆ ಕಂಠತ್ರಾಣವೊಂದೇ ಸಾಕು ಹೊರತು ಬುದ್ಧಿಬಲ ಅಗತ್ಯವಿಲ್ಲ. ಇಬ್ಬರು ಅಥವಾ ಹೆಚ್ಚು ಜನರು ಜಗಳ ಮಾಡುವಲ್ಲಿ ಈ ವಿಧಾನವನ್ನನುಸರಿಸಿದ್ದಾದರೆ ಪ್ರತಿಯೊಬ್ಬನೂ (ಳೂ) ತನ್ನ ಶಕ್ತಿಮೀರಿ ಏಕಕಾಲಕ್ಕೆ ಕೂಗುತ್ತಾನೆ (ಳೆ). ಇದರಿಂದ ನಿಮಗೆ ನಿಮ್ಮ ಎದುರಾಳಿ ಹೇಳಿದ ಯಾವ ಅಪ್ರಿಯ, ಅಸಹ್ಯ, ಅಶ್ಲೀಲ ವಾಕ್ಯಗಳೂ ಕೇಳಿಸದಂತಾಗುತ್ತವೆ. ನಿಮ್ಮ ಕೂಗು ಇತರರ ಕೂಗಿಗಿಂತ ಗಟ್ಟಿಯಾಗಿರದಿದ್ದರೂ ಚಿಂತೆಯಿಲ್ಲ; ನೀವು ಮನಃಪೂರ್ವಕವಾಗಿ ನಿಮ್ಮ ಶಕ್ತಿ ಮೀರಿ ಕೂಗುತ್ತಿದ್ದರೆ ನಿಮಗೆ ಮತ್ತಾವ ಶಬ್ದವೂ ಕೇಳಿಸುವುದಿಲ್ಲೆಂಬುದು ಸುಸ್ಪಷ್ಟವಾಗಿದೆ. ಇದರಿಂದ ನಿಮಗೆ ಒಟ್ಟು ಎದ್ದ ಗಲಭೆಯ ಪ್ರಜ್ಞೆ ಮಾತ್ರ ಇರುವುದಲ್ಲದೆ ಮತ್ತಾವ ವೈಯಕ್ತಿಕ ಶಬ್ದದ ಅರಿವೂ ಬರುವದಿಲ್ಲವಾದ್ದರಿಂದ ಎದುರಾಳಿಯ ಅಪ್ರಿಯ ವಚನಗಳು ನಿಮ್ಮನ್ನು ಘಾಸಿಗೊಳಿಸಲಾರವು. ಬದಲಿಗೆ ನೀವು ಮೌನವಾಗಿ ಕೇಳುತ್ತ ಹೋದರೆ ಎದುರಾಳಿಯ ಕಠೋರ ವಚನಗಳಿಂದ ಉದ್ರಿಕ್ತರಾಗಿ ನೀವು ಅವನ(ಳ)ನ್ನು ಕೊಲ್ಲಲು ಹೋಗಬಹುದು. ಆದ್ದರಿಂದ ಮೌನಯುದ್ಧಕ್ಕಿಂತ ಸಶಬ್ದಯುದ್ಧವು ಹೆಚ್ಚು ಅಹಿಂಸಾತ್ಮಕವಾಗಿದೆ. ಈ ಬಗೆಯ ಯುದ್ಧ ಕೆಲ ನಿಮಿಷಗಳಿಗಿಂತ ಹೆಚ್ಚು ಕಾಲ ನಡೆಯಲಾರದು.

ನಿರ್ವಿಣ್ಣರಾಗಿ ನೀವು ಬೇಗನೇ ಕಲಹವನ್ನು ನಿಲ್ಲಿಸುವಿರಿ. ಸಂಜೆಗೆ ಮತ್ತೆ ನೀವು ಮಿತ್ರರಾಗ ಬಲ್ಲಿರಿ. ಏಕೆಂದರೆ ನಿಮಗೆ ಯಾವ ನೋವುಂಟುಮಾಡುವ ನೆನಪೂ ಉಳಿದಿರುವುದಿಲ್ಲ.

ನೀವು ಯಾರನ್ನಾದರೂ ಬೈಯುತ್ತಿರುವಾಗ ಅವನು ಮೌನವಾಗಿ ಆಲಿಸುತ್ತ ನಿಂತರೆ ನಿಮ್ಮ ಕೋಪವು ಒಳಗಿಂದೊಳಗೇ ಉಕ್ಕೇರುತ್ತ ಹೋಗುವುದನ್ನು ಗಮನಿಸುವಿರಿ. ಏಕೆಂದರೆ ನೀವು ಮೂರ್ಖರೆಂದು ಅವನು ನೆರೆದವರಿಗೆಲ್ಲ ತನ್ನ ಮೌನದಿಂದಲೇ ಹೇಳುತ್ತಿದ್ದಾನೆಂದು ನಿಮಗೆನಿಸುವುದು. ನೆರೆದವರನ್ನು ತನ್ನ ಪಕ್ಷಕ್ಕೆ ಸೆಳೆದುಕೊಳ್ಳುವ ಅವನ ಈ ಮೂಕಗತ್ತು ಅನ್ಯಾಯದ್ದೆಂದೂ, ತಟಸ್ಥರಾದ ಜನರನ್ನು ತನ್ನ ಪಕ್ಷದವರಿಗಾಗಿ ಮಾಡಿಕೊಳ್ಳುವ ಅವನ ಆಟವೆಂದರೆ ಅಧರ್ಮಯುದ್ಧವೆಂದೂ ನೀವು ಬಗೆಯುವಿರಿ. ಇದನ್ನು ಲಾಂಗೂಲಾಚಾರ್ಯರು ಪ್ರಯೋಗದಿಂದ ಕಂಡುಕೊಂಡಿದ್ದಾರೆ. ಶ್ರೀಮತಿ ಲಾಂಗೂಲಾಚಾರ್ಯರು ಯಾವುದೊಂದು ಕಾರಣದಿಂದ ಆಚಾರ್ಯರ ಮೇಲೆ ತಮ್ಮ ಮಾರ್ಮಿಕವಾದ ವಾಗ್ಬಾಣಗಳನ್ನು ಹಾರಿಸತೊಡಗಿದಾಗ ಆಚಾರ್ಯರು ಮಾರ್ಕೊಂಡರೆ ನೆಟ್ಟಗಾಗುತ್ತದೆ. ಅವರು ಮೌನದಿಂದ ಕೇಳುತ್ತಿದ್ದರೆ ಆಕಾಶವೇ ಕಳಚಿ ಬಿದ್ದಂತೆ. "ನಿಮಗೆ ನಾನು ಅಂದರೆ ಕಾಲಕಸ. ಮಾತಾಡಿದ್ದಕ್ಕೆ ಉತ್ತರ ಕೊಡಲಿಕ್ಕೂ ತಯಾರಿಲ್ಲ....." ಎಂದು ಪ್ರಾರಂಭವಾಗಿ ಕಟುಕರು, ಕಣ್ಣಲ್ಲಿ ರಕ್ತ ಇಲ್ಲದವರು ಇತ್ಯಾದಿ ಬಿರುದುಗಳಿಂದ ಮಧ್ಯವಾಗಿ ಗಂಗಾ-ಯುಮುನಾ ಸಂಗಮದಿಂದ ಮುಕ್ತಾಯವಾಗುತ್ತದೆ. ಮಾತಿಗೆ ಪ್ರತಿಮಾತಿನಿಂದ ಉತ್ತರ ಕೊಟ್ಟ ಜಗಳ ರಾತ್ರಿಯೊಳಗೆ ಸಮಾಧಾನ ಹೊಂದಿದರೆ ಮೌನದಿಂದ, ಉತ್ತರ ಕೊಟ್ಟ ಜಗಳ ಒಂದುವಾರದ ವರೆಗೆ ಶಾಂತವಾಗುವದಿಲ್ಲ.

(೧೭-೮-೧೯೫೮)

೧೪. ಶುಕ ಪುರಾಣಂ

ಶುಕ ದೇಶವೆಂಬೊಂದು ದೇಶವುಂಟು, ಆ ದೇಶದೊಳು ಮನುಷ್ಯರಿಲ್ಲ. ಕೇವಲ ದ್ವಿಪಾದ ಪಶುಗಳೂ, ಚತುಷ್ಪಾದ ಪಶುಗಳೂ, ಗಗನದೊಳು ರೆಕ್ಕೆಗಳು ಬಿಚ್ಚಿ ಪಾರ್ವಪಕ್ಷಿಗಳೂ ಇರ್ಪವು. ಈ ದೇಶದೊಳು ಶುಕಂಗಳೇ ರಾಜ್ಯಮಂ ಮಾಡುತ್ತಿರ್ಪವು. ಸಕಲ ಜೀವಿಗಳೂ ಶುಕ ಸಾರಿಕೆಗಳ ಪ್ರಭುತ್ವಮಂ ಮನ್ನಿಸುತ್ತಿರ್ಪವು. ಈ ನಾಡೊಳ್ ಮನುಷ್ಯರು ಯಾವ ಕಾಲದೊಳೂ ಇರ್ದರೆಂಬುದಕ್ಕೆ ಆಧಾರವಿಲ್ಲವು.

ಇಂತಿರಲು ರಾಜ್ಯಂಗೈಯುವ ಈ ಶುಕಸಾರಿಕೆಗಳು ತಮ್ಮ ಮಾತುಗಳಂ ಎಲ್ಲಿಂದ ಕಲಿತವು ಎಂಬುದು ಚೋದ್ಯಮಾಗಿರ್ಪುದು.

ಈ ಶುಕ ಸಾರಿಕೆಗಳು ಸ್ವಂತಮಾಗಿ ಮಾತನಾಡಲ್ ಕಲಿತವೆಂದು ನಂಬಲಸದಳವು. ಏಕನೆ, ಒಂದಂಗುಲ ಅಗಲಮಾದ ಈ ಪಕ್ಷಿಗಳ ತಲೆಗಳೊಳ್ ಇರ್ಪ ಮಿದುಳ್ ಸ್ವಂತಮಾಗಿ ವಿಚಾರಿಸಲು ಅಸಮರ್ಥವೆಂದು ಶಾಸ್ತ್ರಜ್ಞರು ಪೇಳುತ್ತಿರ್ಪರು. ಆದೊಡೆ ಮಿದುಳಿಂಗೆ ಕೊರತೆಯಾದೊಡಂ ಮಾತಿಂಗೆ ದಾರಿದ್ರ್ಯಮಿಲ್ಲೆಂಬ ವೃದ್ಧವಚನಂ ಶುಕ ದೇಶದೋಳ್ ಸತ್ಯಮಾಗಿರ್ಪುದು. ಈ ನಾಡೊಳು ಶುಕಗಳ್ಗೆ ಪಂಡಿತವಕ್ಕಿಗಳೆಂಬ ಬಿರುದಿರ್ಪುದು. ಅದು ಅನ್ವರ್ಥನಾಮವೆಂದೇ ಶುಕ ಸಾರಿಕೆಗಳು ನಂಬಿರ್ಪುವು. ಏಕೆನೆ ಈ ಶುಕ ಸಾರಿಕೆಗಳು ಪದಿನಾಲ್ಕು ಲೋಕಗಳೊಳಂ ಇರ್ದ, ಇಲ್ಲದ ಆವ ವಿಷಯದೊಳಂ ಮಾತಾಡಲಾಪುವು.

ಈ ಶುಕಗಳುಂ, ಸಾರಿಕೆಗಳುಂ ಮಾತಾಡುವೊಡೆ ಎಂತು ಕಲ್ತುವೆಂಬುದಕ್ಕೆ ಕೆಲವರು ಪೊರನಾಡಿನವರು ತರ್ಕವಿತರ್ಕವಂ ಮಾಡಿರ್ಪದುಂಟು ಪುರಾತನ ಕಾಲದೊಳು, ಈ ನಾಡೊಳ್ ಪಲವು ಋಷಿಗಳಿರ್ದರು. ಅವರು ತಪಸ್ವಿಗಳೂ ಚಿಂತಕರೂ ಆಗಿರ್ದರು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕೂ ಪುರುಷಾರ್ಥ ಶಾಸ್ತ್ರಂಗಳೊಳು ಋಷಿಗಳು ಪಾರದರ್ಶಿಗಳಾಗಿದ್ದರು. ಈ ಋಷಿಗಳು ತಮ್ಮೊಳಗೆ ತಮ್ಮ ಅರಣ್ಯಾಶ್ರಮಗಳಲ್ಲಿ ಶಾಸ್ತ್ರಾರ್ಥಂ ಮಾಡುತ್ತಿರ್ಪರು. ಆ ಸಮಯದೊಳ್ ಆಶ್ರಮ ವೃಕ್ಷಗಳನಾಶ್ರಯಿಸಿರ್ದ ಶುಕಂಗಳೂ, ಸಾರಿಕೆಗಳೂ ಈ ಶಾಸ್ತ್ರಾರ್ಥಂಗಳನಾಲಿಸುತ್ತಿರ್ದುದರಿಂದ ಆ ಖಗಂಗಳಿಗೆ ಅವು ಕಂಠಸ್ಥವಾಗಿ ಪೋದವು. ಬಳಿಕ ಯಾವ ಕಾರಣವೋ ಋಷಿಗಳು ಆ ನಾಡಂ ತ್ಯಜಿಸಿ ಪೋದರು. ಆ ಬಳಿಕ ಆ ನಾಡೊಳು ಸ್ವಂತಮಾಗಿ ವಿಚಾರಂ ಮಾಡುವ ಮನುಷ್ಯರಾರುಂ ಪುಟ್ಟಲಿಲ್ಲವು. ಶುಕಸಾರಿಕೆಗಳು ಅಂದು ತಾವು ಕಲ್ತಿರ್ದ ಶಾಸ್ತ್ರಾರ್ಥಮಂ ಮತ್ತಂ ಮತ್ತಂ ಪುನರಾವರ್ತಿಸುತ್ತಿರ್ದವು. ಶುಕಶಿಶುಗಳುಂ ಅದನ್ನೇ ಕಲ್ತವು. ಇಂತು ಸಹಸ್ರ ಸಹಸ್ರ ವರ್ಷಗಳ್ ಕಳದೊಡಂ ಶುಕಸಾರಿಕೆಗಳು ತಮ್ಮೀ ಶಾಸ್ತ್ರಾರ್ಥಮಂ ಬಿಡದೆ ಬೆಂಬತ್ತಿರ್ದುದರಿಂದ ಶಾಸ್ತ್ರಂಗಳು ಶುಕ ಮುಖದೊಳು ಸಂರಕ್ಷಿತಮಾದವು. ಒಂದಕ್ಷರವೂ ಕಳೆಯಲಿಲ್ಲವು. ಒಂದಕ್ಷರವೂ ತಪ್ಪಿಲಿಲ್ಲವು. ಒಂದಕ್ಷರವೂ ಪೊಸತಾಗಿ ಸೇರಲಿಲ್ಲವು. ಇಂತು ಶಾಸ್ತ್ರಮಂ ಪಠಿಸುವುದರಿಂದ ಶುಕಂಗಳಿಗೆ ಪಂಡಿತವಕ್ಕಿ ಎಂಬ ಪೆಸರು ಬಂದದು.

ಪುರಾಣಾಂತರದೊಳು ಶುಕದೇಶದ ಅದ್ಭುತ ಚರಿತ್ರೆಯಂ ಪ್ರಕಾರಾಂತರದಿಂದ ಪೇಳಿರ್ಪರು. ಶುಕದೇಶದೊಳು ಋಷಿಗಳ ನಿರ್ಗಮನಾನಂತರದೊಳ್ ಋಷಿಗಳ ಶಿಷ್ಯರಾದ ಮನುಷ್ಯರು ಶಾಸ್ತ್ರಮಂ ಪರಂಪರೆಯಿಂದಭ್ಯಸಿಸುತ್ತಿರ್ದರು. ಇರ್ಛಾಸಿರ ವರ್ಷಂಗಳ್ ಕಳೆದ

ಬಳಿಕಂ ಋಷಿಗಳು ಈ ಶುಕದೇಶಕ್ಕೆ ಬಂದರು. ಆಗ ಇಲ್ಲಿರ್ದ ಮನುಷ್ಯರು ಋಷಿಪ್ರಣೀತ ಶಾಸ್ತ್ರಂಗಳಲ್ಲಿ ಏನೊಂದೂ ಪೊಸ ವಿಷಯಂ ಸೇರಿಸದೆ ತಮ್ಮ ಸ್ವಬುದ್ಧಿಯಂ ನಡೆಯಿಸದೆ ಇದ್ದಂತಿರ್ದುದಂ ಕಂಡು ಕೋಪಂಗೊಂಡು, "ಎಲೈ ಮನುಷ್ಯರಿರಾ! ನಾವು ಪೇಳಿದ ಶಾಸ್ತ್ರಂಗಳಂ ಏನುಂ ಬೆಳೆಯಿಸದೆ ಪೊಸತಂ ಕಾಣದೆ ಇರ್ದ ನಿಮ್ಮಗಳಿಗೆ ಬುರುಡೆಯೊಳು ಮಿದುಳೇತಕ್ಕಾಗಿ ದೇವರು ಇಟ್ಟುಕಳಿಸಿದನೋ, ಎಲೈ ಪರಪ್ರತ್ಯಯಬುದ್ಧಿಗಳಿರಾ! ನೀವೆಲ್ಲರೂ ಗಿಳಿಗಳಾಗಿ ಪೋಗುವಿರಿ!" ಎಂದು ಋಷಿಗಳು ಶಾಪಂ ಕೊಟ್ಟೊಡೆ ಮನುಜರೆಲ್ಲಂ ಗಿಳಿಗಳುಂ ಸಾರಿಕೆಗಳುಂ ಆಗಿ ಪೋದರೇನದ್ಭುತವೋ.

ಇಂತು ಪಲವುಂ ಯುಗಗಳು ಸವೆದು ಪೋಗಲಾಗಿ ಪಶ್ಚಿಮದಿಂ ಬೇರೆ ಮನುಜರೀ ಶುಕ ದೇಶದಲ್ಲಿ ಬಂದು ನೆಲೆಯೂರಿ ದೇಶವನು ಪಾದಾಕ್ರಾಂತಂ ಮಾಡಿಕೊಂಡು ಶುಕಂಗಳ ಮೇಲೆ ಪ್ರಭುತ್ವ ಸ್ಥಾಪನೆಯಂಗೈದರು. ಆಗಳ್ ಈ ನವಾಗತರು ಈ ಶುಕ ಸಾರಿಕೆಗಳ ಭಾಷಿತ ಗಳಂ ಕೇಳ್ದು ಅಚ್ಚರಿಯಿಂ ತಾಳ್ದು ಶುಕಂಗಳ ಅದ್ಭುತಮಾದ ಪಾಂಡಿತ್ಯಮಂ ಬುದ್ಧಿ ವೈಭ ವಮಂ ಪೊಗಳ್ದರು. ಅಂತಾಗಲು ಈ ಶುಕಂಗಳು ಈ ಪಶ್ಚಿಮದ ಮಾನುಷರ ಪೊಗಳಿಕೆಯಂ ಪೆಕ್ಕಿಕೊಂಡು ಪಾಠಂ ಮಾಡಿ ಪಠಿಸಲು ಮೊದಲಿಟ್ಟವು. ಹಳೆಯ ಶಾಸ್ತ್ರಗಳಂ ಮರೆತವು. ಈ ಶ್ಲಾಘನೆಗಳಂ ಜಟಾಪಾಠದಂತೆ ಪುನರಾವರ್ತಿಸಲಾರಂಭಂಗೈದವು. ಶುಕ ದೇಶದ ಶಾಸ್ತ್ರಮಹಿ ಮೆಗಳ ಕಲಕಲಂ ದೇಶಮೆಲ್ಲಂ ವ್ಯಾಪಿಸಿರಲ್ ಈ ದೇಶದೊಳಿರ್ಪ ಸಕಲ ಪ್ರಾಣಿಗಳ್ ಅದ್ಭುತಂ ಪಟ್ಟವು. ಪಶ್ಚಿಮದಿಂದ ಬಂದವರು ಪಸರುಗಿಳಿಯಲ್ಲದೆ ಪಲವುಂ ಪಕ್ಷಿಗಳ್ ಮಾತಾಡಬಲ್ಲವೆಂದು ಮನಂಗಂಡು ಅವುಗಳಂ ಪಿಡಿದು ಪಂಜರಗಳೊಳಿಕ್ಕಿ ನನೆಗಡಲೆಯಂ ತಿನಿಸಿ ಮಾನುಷ ಮಾತಂ ಕಲಿಸಿದೊಡನೆ ದೇಶಮೆಲ್ಲಂ ಮಾತುಮಯಮಾದುದು. ಮೊದ ಲೊಳ್ ದೇವಭಾಷೆಯೊಳ್ ನುಡಿಯುತ್ತಿರ್ದ ಗಿಳಿಗಳುಂ ಪೊಸ ಭಾಷೆಗಳೊಳ್ ನುಡಿಗಲ್ತವು. ಕಪ್ಪು, ಪಳದಿ, ಕೆಂಪು, ನೀಲ ವರ್ಣಗಳ ಪಲವುಂ ಪಕ್ಷಿಗಳುಂ ಪಲವುಂ ಭಾಷೆಗಳೊಳು ನಿರಂತರಮಾಗಿ ನುಡಿಯಲ್ ಮೊದಲಿಟ್ಟವು. ಕೆಲವು ಖಗಂಗಳು ಪಶ್ಚಿಮ ದೇಶಂಗಳಿಗೆ ಪಂಜರದೊಳ್ ಪೋಗಿಸಲ್ಪಟ್ಟು ಅಲ್ಲಿನ ನರರು ಬರೆದೋದಿದುದನೋದಿ ಮರಳಿ ಆ ಓದಿನಲ್ಲಿ ಒಡನುಡಿವುದನಾರಂಭಿಸಲು ಈ ಪುರಾತನ ಶುಕ ನವಶುಕಂಗಳೆಲ್ಲವುಂ ಪರಶಾಸ್ತ್ರ ಗಳಂ, ಸ್ವಶಾಸ್ತ್ರಗಳಂ, ಪರಶಾಸ್ತ್ರಶ್ಲಾಘನೆಯಂ, ಸ್ವಶಾಸ್ತ್ರ ಶ್ಲಾಘನೆಯಂ ಎಂಭತ್ತನಾಲ್ಕು ಭಾಷೆಗ ಳೊಳ್ ನುಡಿಯಲ್ ಬಲ್ಲವು.

ಇಂತಿರಲು, ಈ ಪುರಾತನ ನೂತನ ನುಡಿ ವಕ್ಕಿಗಳ ಕಲಕಲ ಭೂ-ಸ್ವರ್ಗ-ಪಾತಾಲ ಲೋಕಂಗಳಂ ತೀವಲು ಪಶ್ಚಿಮದಿಂದ ಬಂದ ಮನುಷ್ಯ ನಿದ್ದೆಗೇಡಾಗಿ ಬೇಸತ್ತು ಬಸವಳಿದು ಶುಕದೇಶವಂ ಪರಿವಾರ ಸಮೇತನಾಗಿ ತೊರೆದು ಪೋದನು. ಒಡನೆ ಶುಕದೇಶದೊಳು ಎಲ್ಲ ನುಡಿವಕ್ಕಿಗಳು ಕೂಡಿ ಸ್ವರಾಜ್ಯವಂ ಸ್ಥಾಪನೆಗೈದವು. ಪಗಲೂ ರಾತ್ರಿಯೂ ಈ ಶುಕ ರಾಜ್ಯ ದೊಳು ನುಡಿಗಳೇ ಮಾರ್ನುಡಿಯುತಿರ್ದವು. ಎಂಭತ್ತನಾಲ್ಕು ಭಾಷೆಗಳಲು ಶುಕಭಾ ಷಿತಂಗಳೇ ರಾಜ್ಯಕಾರ್ಯಗಳೆನಿಸಿದವು. ನುಡಿವಕ್ಕಿಗಳ ಬಣ್ಣಂಗಳೊಳು ಭೇದವೆನಿತಿರ್ದೊಡಂ ನುಡಿವಲ್ಲಿ ಸಹಮತಮಾಗಿರ್ದವು. ಕೆಂಪು ಚುಂಚು, ಬಿಳಿಯ ಚುಂಚು, ಕಂದು ಚುಂಚು, ಕಪ್ಪು ಚುಂಚುಗಳ ನುಡಿವಕ್ಕಿಗಳ್ ಕೊನೆಯಿರದಂತೆ ಕಲಿತ ನುಡಿಗಳನೆ ಮರುನುಡಿಯುತ್ತಂ ಸುಖ ಮಾಗಿ ರಾಜ್ಯಂ ಮಾಡುತ್ತಿರ್ದವು. ಅದ್ಭುತಮೆನೆ ಸಿಂಹಂಗಳುಂ, ತೋಳುಗಳುಂ, ಆನೆಗಳುಂ,

ಪುಲಿಗಳುಂ, ಶ್ವಾನಂಗಳುಂ, ನರಿಗಳುಂ ಈ ನುಡಿವಕ್ಕಿಗಳ ಸತ್ತೆಗೆ ತಲೆಯೊಡ್ಡುತ್ತಿರ್ದವು. ಈ ನುಡಿವಕ್ಕಿಗಳು ತಮ್ಮೊಳು ಅಧಿಪತಿಗಳಂ, ಸಚಿವರಂ, ಕಂಚುಕ್ಕಿಗಳಂ, ಸಭಾಸದರಂ, ಸಭಾಪತಿಗಳಂ, ಆಪ್ತ ಮಂತ್ರಿಗಳಂ, ಪ್ರತಿ ಸಚಿವರಂ, ಪ್ರತಿ ಮಂತ್ರಿಗಳಂ ಇಂತು ಶೇಷಂಗಂ ಲೆಕ್ಕಿಸಲು ಬಾರದಷ್ಟು ಅಧಿಕಾರ ಸ್ಥಾನಂಗಳಂ ಮಾಡಿಕೊಂಡಿರ್ದವು. ತಮ್ಮ ಶಾಖಾ ಪೀಠಗಳನ್ನೇರಿ, ಪುಚ್ಛಂಗಳನರಳಿಸಿ, ವಯ್ಯಾರಂ ಬೀರಿ ಶುಕಗಳುಂ ಸಾರಿಕೆಗಳುಂ ಭಾಷಿಸುವ ಸ್ಪರ್ಧೆಗಳಿಂದಲೇ ರಾಜ್ಯ ಕಾರ್ಯಂಗಳಂ ತೀರಿಸುತಿರ್ಪವು. ತಪ್ಪದೆ ತಡೆಯದೆ ಧಾರಾಕಾರಂ ನುಡಿಯ ಬಲ್ಲ ಶುಕವೋ ಸಾರಿಕೆಯೋ ಪೆರ್ಗಡೆಗಳ ಸಿಂಹಾಸನೇರುತಿರ್ಪವು.

ಶುಕದೇಶದೊಳ್ ಸಿಂಹಂಗಳ್ ನೆರೆದೊಡಂ, ಶ್ವಾನಂಗಳ್ ಸೇರಿದೊಡಂ, ಬಕಂಗಳ್ ಒಟ್ಟೈಸಿದೊಡಂ, ಆನೆಗಳ್ ಕೂಡಿರ್ದೊಡಂ, ಪುಲಿಗಳ್ ಒಂದಾದೊಡಂ, ನರಿಗಳ್ ಸಂದೋಹಿಸಿದೊಡಂ ಶುಕ ಪ್ರಮುಖರ್ ಬರಬೇಕು. ಕೋಗಿಲೆಗಳ ಸಭೆಯೊಳ್ ಶುಕಮಂತ್ರಿಗಳು ಪಂಚಮ ಸ್ವರದೊಳೆಂತು ಕೂಗಬೇಕೆಂದು ಕೋಕಿಲಂಗಳಿಗೆ ಉಪದೇಶಂಗೊಡುತಿರ್ಪರು, ಕಾಗೆ ಗೂಡೊಳು, ಕೋಗಿಲೆ ತತ್ತಿಗಳಂ ಮಡುಗುವುದು ಜನ್ಮಸಿದ್ಧ ಹಕ್ಕೆಂದುಂ ಕಾಗೆಗಳದನು ವಿರೋಧಿಸೆ ಶುಕರಾಜ್ಯದೊಳ್ ಸಲ್ಲದೆಂದು ಪೇಳುತ್ತಿರ್ಪರು. ಕೋಗಿಲೆಗಳಿದಂ ಜೀಯ ಹಸಾದಮೆಂದು ಆಲಿಸುತ್ತಿರ್ಪವು. ಶುಕ ಸಚಿವಂ ಶ್ವಾನ ಸಮೂಹದೊಳ್ ಸ್ವರ್ಗಂ ಗದಗುಟ್ಟುವಂತೆ ಬೊಗಳಬೇಕೆಂದೂ, ಶುಕದೇಶದೊಳ್ ಶ್ವಾನಧ್ವನಿ ಅತ್ಯವಶ್ಯವೆಂದೂ ನುಡಿವಂ, ಶ್ವಾನ ಲಾಂಗೂಲವನು ನೇರ ಮಾಡುವೊಡೆ ಲಕ್ಷ ಕೊಳವೆಗಳಂ ಅಣಿಗೊಳಿಸಲು ಶುಕಾಧಿಪತ್ಯ ನಿಶ್ಚಯಿಸಿದೆ ಎಂಬಂ. ಸಿಂಹಂಗಳ ಸಭೆಯೊಳು ಬೇಟೆಯ ವಿದ್ಯೆಯನು, ಆನೆಗಳ ನೆರವಿಯೊಳು ಖೆಡ್ಡಾದ ಅನ್ಯಾಯಂಗಳನು, ಬಕಾಯತನದೊಳು ಧ್ಯಾನಯೋಗವನು, ನರಿಗಳ ಸಂದೋಹದೊಳು ಉಪಾಯವೇದಾಂತವನು ಬೋಧಿಸುವರ್. ಈ ನುಡಿಗಳೆಲ್ಲ ಪಶ್ಚಿಮದೇಶಗಳಿಂ ಕಂಠಸ್ಥಂ ಮಾಡಿಕೊಂಡವಲ್ಲದೆ ಶುಕಬುದ್ಧಿ ಯೊಳ್ ಪುಟ್ಟಿದವಲ್ಲವು.

ಈ ಪಂಡಿತವಕ್ಕಿಗಳ ವಿಷಯ ಸಂಗ್ರಹಮಂ ಕಂಡು ಸರ್ವ ವಿದ್ಯಾ ವಿಶಾರದರೆಂದು ತೋರಲಪ್ಪುದು. ಸಕಲ ಜೀವಿಗಳು ಶುಕರಾಜರ ಚರಣಾಶ್ರಯವನಪ್ಪುಕೊಂಡಿರ್ಪರು, ಆದೊಡಂ ಶುಕರಾಜ್ಯದ ನೈಮಿಷಾರಣ್ಯ ವಾಸಿಗಳಾದ ವೃಷಾಕಪಿಗಳ್ ತಮ್ಮ ಸಭೆಗೆ ಶುಕರಾಜರಂ ಸಾರಿಕಾ ಮಂತ್ರಿಗಳಂ ನಿಮಂತ್ರಿಸುದಿರ್ಪುದು ಚೋದ್ಯಂ. ಶುಕಂಗಳ ಬುರುಡೆಯೊಳಗೊಂದುಮಿಲ್ಲಂ, ಇದೆಲ್ಲಂ ಶುಕಪಾಠಂ, ಯಾವ ಶುಕಕ್ಕೂ ತಾನೆನ್ನುತಿರ್ಪ ನುಡಿಗಳ ಅರ್ಥಂ ತಿಳಿಯದೆಂದು ವೃಷಾ ಕಪಿಗಳ್ ನಗುವವು. ಅದರಿಂದಂ ಕಪಿಗಳ್ ವನವಾಸಂ ಕಂಡವು.

(ಇದು ಲಾಂಗೂಲಾಚಾರ್ಯರ ಹಳೇ ಸಂಗ್ರಹದ ತಾಡವಾಲೆ ಗ್ರಂಥದ ಶುಕ ಪುರಾಣಾಧ್ಯಾಯದಿಂದ ಆಯ್ದ ಅಂಶವಾಗಿದೆ)

೧೫. ಶೇಕ್‌ಸ್ಪಿಯರನನ್ನು ಯಾರು ಬರೆದರು?

ಯಮನಿಗಂಜಿ ಲಾಂಗೂಲಾಚಾರ್ಯರು ಇನ್ನೂ ಸಾಯದೆ ಉಳಿದಿದ್ದಾರೆಂದು ಯಾರಾದರೂ ನಂಬಿದ್ದರೆ ಅದು ದೊಡ್ಡ ತಪ್ಪು. ಲಾಂಗೂಲಾಚಾರ್ಯರು ಸಾಯಲು ಹಿಂಜರಿಯುತ್ತಿರುವುದು ಸಂಶೋಧಕರಿಗಂಜಿ. ಸತ್ತವರ ಬೆನ್ನು ಹತ್ತುವ ಈ ಜನರು ಯಮಲೋಕದಲ್ಲಿ ಸಹ ನಮ್ಮನ್ನು ಸುಖವಾಗಿ ಬಾಳಲು ಕೊಡುವುದಿಲ್ಲ. ಮುನ್ನೂರು ನಾನೂರು ವರ್ಷಗಳಾಚೆಗೆ ಆಚಾರ್ಯರು ಯಮಲೋಕದಲ್ಲಿ ಅಲ್ಲಿನ ಚೇಳು ಹಾವುಗಳಿಗೂ, ಕುದಿಯುವ ಸೀಸದ ಅಭ್ಯಂಜನಕ್ಕೂ ಮೈ ಒಗ್ಗಿಸಿಕೊಂಡು ಸಮಾಧಾನದಿಂದ ಇರಲು ಕಲಿಯುತ್ತಿರುವಷ್ಟು ಹೊತ್ತಿಗೆ ಒಮ್ಮೆಲೇ ಒಬ್ಬ ಸಂಶೋಧಕನು ಲಾಂಗೂಲಾಚಾರ್ಯರ ಹರಟೆಗಳನ್ನು ಲಾಂಗೂಲಾಚಾರ್ಯರರು ಬರೆದಿರದೆ ಬೇರೆ ಯಾರೋ, ಉದಾಹರಣೆಗೆ ಶ್ರೀರಂಗರೋ, ಬೀಚಿಯವರೋ, ಕಸ್ತೂರಿಯವರೋ- ಬರೆದಿರಬೇಕೆಂದು ಸಾಧಿಸುವ ಸಂಶೋಧನೆಗಳಲ್ಲಿ ತೊಡಗಬಹುದು. ಈ ಮೂವರು ಹಿರಿಯ ಹರಟೆಗಾರರು ಲಾಂಗೂಲಾಚಾರ್ಯರ ಹರಟೆಗಳು ತಮ್ಮವಲ್ಲವೆಂದು ಡಾಣಾಡಂಗುರವಾಗಿ ಸಾರಬಯಸಬಹುದಾದರೂ ಅವರು ಆಗ ಈ ಲೋಕದಲ್ಲಿರುವ ಸಂಭವವಿಲ್ಲ. ಅದರಿಂದ ಲಾಂಗೂಲಾಚಾರ್ಯರಿಗೆ ಮಾತ್ರವಲ್ಲದೆ ಯಮರಾಯನಿಗೂ ತುಂಬ ಪೇಚಾಟವೇ ಉಂಟಾಗದಿರದು. ಯಾವನಾದರೊಬ್ಬ ಸಂಶೋಧಕನು ಲಾಂಗೂಲಾಚಾರ್ಯರ ಹರಟೆಗಳನ್ನು ಬರೆದವರು ಮೇಲಿನ ಮೂವರಲ್ಲೊಬ್ಬರೆಂದು ಅಥವಾ ಇನ್ನಾರಾದರೊಬ್ಬರೆಂದು ಸಿದ್ಧಾಂತಪಡಿಸಿಟ್ಟನೆಂದು ತಿಳಿಯಿರಿ. ಆಗ ಯಮನು ಲಾಂಗೂಲಾಚಾರ್ಯರಿಗೆ, ಹರಟೆಗಳಲ್ಲಿ ಮಾಡಿದ ದೈವನಿಂದೆ, ಪಿತೃನಿಂದೆ, ಗುರುನಿಂದೆ- ಎಲ್ಲಕ್ಕೂ ಹೆಚ್ಚಾಗಿ ದೇಶಭಕ್ತನಿಂದೆಗಾಗಿ ಆಗಲೇ ಕೊಟ್ಟ ಶಿಕ್ಷೆಯನ್ನು ಏನು ಮಾಡಬೇಕು? ಕುದಿಯುವ ಸೀಸದ ಕೆರೆಯಲ್ಲಿ ತಪ್ಪಾಗಿ ಸ್ನಾನಮಾಡಿಸಿದ್ದನು. ಸರಿಪಡಿಸಲು ಅವನು ಆಚಾರ್ಯರನ್ನು ಮಂಜುಗಡ್ಡೆಯ ನದಿಯಲ್ಲಿ ಮುಳುಗಿಸಿ ಎತ್ತಬೇಕಾಗುವುದು- ಲಾಂಗೂಲಾಚಾರ್ಯರು ತಣ್ಣೀರು ಸ್ನಾನಕ್ಕೇ ಅಂಜುತ್ತಾರೆ; ೫೦ ಡಿಗ್ರಿ ಬಿಲೋ ಜೀರೊ ಹಿಮಸ್ನಾನವೆಂದರೆ ಅವರ ಮೈ ಈಗಲೇ ನಡಗುತ್ತದೆ.

ಬಡಪಾಯಿ ಶೇಕ್ಸಪಿಯರನನ್ನು ನೋಡಿರಿ. ಅವನ ೩೭ ಜಗತ್ಪ್ರಸಿದ್ಧ ನಾಟಕಗಳನ್ನೂ ಅನೇಕ-ಟಂಡನ್ ಋಷಿಗಳು ಸುಡಬಹುದಾದ- ಕವನಗಳನ್ನೂ ಅವನು ಬರೆದೇ ಇಲ್ಲವೆಂದು ಸಾಧಿಸುತ್ತಿದ್ದ ಹಲ ಸಂಶೋಧಕರಲ್ಲಿ ಒಬ್ಬನು ಈಗ ಅದನ್ನು ಸಿದ್ಧಮಾಡಿ ತೋರಿಸಲು ಸರ್ ಥಾಮಸ್ ವಾಲ್ಸಿಂಗ್ಯಾಮನ ಗೋರಿಯನ್ನು ಅಗೆಯುವವನಿದ್ದಾನಂತೆ. ಶೇಕ್ಸಪಿಯರನು ಪ್ರಾರಂಭದಲ್ಲಿ ಕುದುರೆ ಕದ್ದಂತೆ ಕೊನೆಯಲ್ಲಿ ಈ ನಾಟಕಗಳನ್ನೂ ಕದ್ದಿರಬೇಕೆಂದು ಸಂಶೋಧಕರು ಎಂದಿನಿಂದಲೂ ಸಂಶಯಪಡುತ್ತಿದ್ದರು. ತನ್ನ ಸ್ವಂತ ಹೆಸರನ್ನು ಸಹಿತ ಸರಿಯಾಗಿ ಬರೆಯಲು ಬಾರದಿದ್ದ ಶೇಕ್ಸಪಿಯರನು ಈ ನಾಟಕಗಳನ್ನು ಬರೆಯುವುದೆಂದರೆ ಕಾಳಿದಾಸನು ಕಾಳಿದಾಸನ ನಾಟಕಗಳನ್ನು ಬರೆದಿದ್ದನೆನ್ನುವಷ್ಟೇ ಅರ್ಥರಹಿತವಾಗಿದೆಯಲ್ಲವೆ? ಘಟಿಂಗರೇ ಈ ಜಗದ್ವಂದ್ಯ ನಾಟಕಗಳನ್ನು ಬರೆದಿರಬೇಕೆಂಬಲ್ಲಿ ಅವರಿಗೆ ಸಂಶಯವಿದ್ದಿಲ್ಲ. ಆದ್ದರಿಂದ ಲಂಚತಿಂದು ನ್ಯಾಯಮೂರ್ತಿ ಪದದಿಂದ ಕಿತ್ತು ಹಾಕಲ್ಪಟ್ಟ ತತ್ವಜ್ಞಾನಿ-ವಿಜ್ಞಾನಿ ಬೇಕನ್ನನಾ

ಗಲಿ, ಹೆಂಡದಂಗಡಿಯಲ್ಲಿ ಜಗಳಾಡಿ ಸತ್ತ ಕ್ರಿಸ್ಟೋಫರ ಮಾರ್ಲೋವಾಗಲಿ, ಶೇಕ್ಸಪಿಯರನ ನಾಟಕಗಳನ್ನು ಬರೆದಿರಬೇಕೇ ಹೊರತು ಬರೇ ಕುದುರೆ ಕದ್ದು ಸಿಕ್ಕಿ ಬಿದ್ದ ಶೇಕ್ಸಪಿಯರನಾಗಿರಲಿಕ್ಕಿಲ್ಲವೆಂದು ಅವರು ತೀರ್ಮಾನಿಸಿದರು. ಬೆನ್ ಜಾನ್ಸನ್ನನೇ ಈ ನಾಟಕಗಳನ್ನು ಬರೆದಿರಬೇಕೆಂದು ಕೆಲವರು ಶಂಕಿಸಿದರೂ- ಅವನು ಪ್ರಸಿದ್ಧ ಅನಾಚಾರಿಯಾಗಿದ್ದನೆಂಬುದಕ್ಕೆ ಯಾವ ಸಾಕ್ಷಿಯೂ ಇಲ್ಲದ್ದರಿಂದವೆಂದು ತೋರುತ್ತದೆ- ಬೆನ್ ಜಾನ್ಸನ್ನನ ಕೊರಳಿಗೆ ಸಂಶೋಧಕರು ಶೇಕ್ಸಪಿಯರನ ನಾಟಕಗಳನ್ನು ಗಟ್ಟಿಯಾಗಿ ಕಟ್ಟಲಿಲ್ಲ. ಈಗ ಹೆಂಡದಂಗಡಿಯಲ್ಲಿ ಸತ್ತ ಮಾರ್ಲೋವನೇ ಶೇಕ್ಸಪಿಯರನ ನಾಟಕಗಳನ್ನು ಬರೆದನೆಂದು ತೋರಿಸಲು ಮಾರ್ಲೋವನ ಗೆಳೆಯನ ಗೋರಿಯನ್ನು ಅಗೆಯಲು ನಿರ್ಧರಿಸಲಾಗಿದೆ.

ವಿಚಾರ ಮಾಡಿದರೆ ಕಾಳಿದಾಸನು ಕಾಳಿದಾಸನ ಕೃತಿಗಳನ್ನು ಬರೆದನೆಂದು ನಂಬುವುದೂ ತೀರ ಹಾಸ್ಯಾಸ್ಪದವಾಗಿ ಕಾಣಿಸುತ್ತದೆ. ಕಾಳಿದಾಸನಲ್ಲದೆ ಬೇರಾರೂ ಅವುಗಳನ್ನು ಬರೆಯಲಿಲ್ಲೆಂದು ನಂಬಲು ಯಾವ ಆಧಾರವೂ ಇಲ್ಲ. ಆಧಾರವಿಲ್ಲದ ಸಂಗತಿಗಳನ್ನು ನಂಬುವುದು ಸಂಶೋಧಕರ ಲಕ್ಷಣವಲ್ಲ. ಕಾಳಿದಾಸನೇ ಅಶ್ವಘೋಷನೋ ಎಂಬ ಸಂಶಯ ಆಗಲೇ ವ್ಯಕ್ತಗೊಳಿಸಲ್ಪಟ್ಟಿದೆ. ಶೇಕ್ಸಪಿಯರನಂತೆ ಕಾಳಿದಾಸನೂ ಕುದುರೆ ಕದ್ದಿದ್ದನೆಂದು ತಿಳಿದುಬಂದಿಲ್ಲವಾದರೂ ಅವನು ಹಿಂದೆ ಕುರುಬನಾಗಿದ್ದನೆಂದು ತಿಳಿದುಬರುತ್ತದೆ. ಕುರುಬನು ಕಾವ್ಯಗಳನ್ನೂ, ನಾಟಕಗಳನ್ನೂ ಬರೆದನೆಂದು ನಂಬುವುದು ಹೆಡ್ಡತನವೇ ಸೈ. ಕವಿತೆ ಬರೆಯುವುದಕ್ಕಿಂತ ಕುರಿಕಾಯುವುದು ಎಷ್ಟೋ ಲಾಭದಾಯಕವಾಗಿದೆಯೆಂದು ಇಂದಿನ ಕವಿಗಳ ಉತ್ಪನ್ನದ ಮೇಲಿಂದ ಖಂಡಿತವಾಗಿ ಹೇಳಬಹುದು. ಆದ್ದರಿಂದ ಕುರಿಕಾಯುವುದನ್ನು ಬಿಟ್ಟು ಕಾಳಿದಾಸನು ಕವಿತೆ ಬರೆಯತೊಡಗಿದನೆಂದು ಸಾಧಿಸುವುದು ಕಾಳಿದಾಸನ ಬುದ್ಧಿಯ ಅವಹೇಳನವಲ್ಲವೆ? ಕಾಳಿದಾಸನೇ ಅವನ ಕಾವ್ಯಗಳನ್ನು ಬರೆದನೆಂದು ನಂಬಲು ಒಂದೇ ಆಧಾರವಿದೆ. ಅದೆಂದರೆ ಅವನು ಅಷ್ಟಿಷ್ಟು ಹೆಣ್ಣು ಮರುಳನೆಂದು ಹೇಳಲಾಗಿದೆ. ಇದು ಕಾವ್ಯಕರ್ತರ ಲಕ್ಷಣವೆಂದೊಪ್ಪಬಹುದಾದರೂ ಅದೊಂದರಿಂದಲೇ ಅವನು ತನ್ನ ಕಾವ್ಯಗಳನ್ನು ಬರೆದನೆಂದು ಖಚಿತವಾಗಿ ಹೇಳುವುದೆಂತು? ದುರ್ದೈವದಿಂದ ಭಾರತದ ಆರ್ಯರು ಹೆಣಗಳನ್ನು ಸುಟ್ಟುಬಿಡುವ ದೂರದರ್ಶಿ ಸಂಪ್ರದಾಯವನ್ನು ಅನುಸರಿಸಿರುವುದರಿಂದ ಕಾಳಿದಾಸನ ಕಾವ್ಯಗಳನ್ನು ಭರ್ತೃಹರಿಯು ಬರೆದಿದ್ದನೆಂದು ತೋರಿಸಲು ಯಾವುದೊಂದು ಗೋರಿಯನ್ನು ಅಗೆಯಲು ನಮಗೆ ಸಂದರ್ಭ ದೊರೆಯದಾಗಿದೆ. ಆದರೆ ಹರ್ಷದೇವನು ತನ್ನ ನಾಟಕಗಳನ್ನು ಬರೆಯದೆ ಬಾಣಭಟ್ಟನೇ ಬರೆದಿರಬೇಕೆಂಬುದು ನಮಗೆ ಖಚಿತವಾಗಿದೆ. ಠಕ್ಕ ಬಾಣನು ತನ್ನ ನಿಕೃಷ್ಟಮಟ್ಟದ ಕೃತಿಗಳನ್ನು ದೊರೆಯಾದ ಹರ್ಷನ ಕುತ್ತಿಗೆಗೆ ಕಟ್ಟಿ ಉತ್ತಮವಾದ ಕಾದಂಬರಿಯ ಕೀರ್ತಿಯನ್ನು ತನಗೇ ಉಳಿಸಿಕೊಂಡಿರಬೇಕೆಂಬುದು ಬ್ರಾಹ್ಮಣ ಸಾಧಾರಣರ ಮೋಸಗಾರಿಕೆಯ ದ್ಯೋತಕವಾಗಿದೆ.

೧೬. ಶ್ರೀಮದ್ರಾಮಾಯಣ ದರ್ಶನಂ

ಒಬ್ಬ ರಾಜನಿಗೆ ಒಂದು ಹೆಂಡತಿ ಕಡಿಮೆ ಇದ್ದಿದ್ದರೆ, ಅಥವಾ ಆ ಹೆಂಡತಿಯ ಮನಸ್ಸು ಸ್ವಲ್ಪ ಕಡಿಮೆ ಗಟ್ಟಿಯಾಗಿದ್ದಿದ್ದರೆ ಅಥವಾ ಅವನ ರಥದ ಗಾಲಿಯ ಕೀಲು ಸ್ವಲ್ಪ ಹೆಚ್ಚು ಗಟ್ಟಿಯಾಗಿದ್ದಿದ್ದರೆ- ರಾಮಾಯಣವೇ ಆಗುತ್ತಿದ್ದಿಲ್ಲ. ಅಲ್ಪ ಸಂಗತಿಗಳು ಮಹಾ ರಾಮಾಯಣಗಳಿಗೆ ಹೇಗೆ ಕಾರಣವಾಗುತ್ತವೆಂದು ಇದು ತೋರಿಸುತ್ತದೆ.

ದಶರಥರಾಜ ಮೂರು ಹೆಂಡಂದಿರನ್ನು ಏಕೆ ಮಾಡಿಕೊಂಡ ಎಂಬ ಪ್ರಶ್ನೆಗೆ ಯಾರೂ ಸಮರ್ಪಕ ಉತ್ತರ ಕೊಟ್ಟಿಲ್ಲ. ಅವನು ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಂಡದ್ದೇಕೆಂಬ ಬಗ್ಗೆ ನನ್ನಲ್ಲೊಂದು "ಥಿಯರಿ" ಇದೆ. ಅವನ ತಂದೆ ಅಜರಾಜ ಒಂದೇ ಹೆಂಡತಿಯನ್ನು ನಂಬಿ ಬದುಕಿದ್ದ. ದಶರಥ ಹುಟ್ಟಿದ ಕೆಲವೇ ಕಾಲದಲ್ಲಿ ಒಂದು ದಿನ ಆಕಾಶದಿಂದ ಒಂದು ಹೂಮಾಲೆ ಬಿದ್ದು ಇಂದುಮತಿ ಸತ್ತಮೇಲೆ, ಅಜರಾಜ ಎಷ್ಟು ಕಂಗಾಲಾಗಿ ಹೋದನೆಂದರೆ ಅವನಿಗೆ ಜಗತ್ತೇ ಶೂನ್ಯವಾಗಿ ಕಂಡಿತು. ಅಯೋಧ್ಯೆಯ ಹೊರಗೊಂದು ಗುಡಿಸಲು ಹಾಕಿಕೊಂಡು ಸತ್ತ ಹೆಂಡತಿಯನ್ನೇ ಧೇನಿಸಿ ಕೊರಗುತ್ತ ಆತ ಅಕಾಲ ಮರಣಕ್ಕೆ ತುತ್ತಾದ.

ತಂದೆಯ ಈ ದುರವಸ್ಥೆ ಚಿಕ್ಕ ಬಾಲಕನಾಗಿದ್ದ ದಶರಥನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವಾಗಿರಬೇಕು. ಒಂದೇ ಹೆಂಡತಿಯನ್ನು ನಂಬಿರುವುದರಲ್ಲಿ ಅಡಕವಾದ ಅಪಾಯವನ್ನಾತ ಮನಗಂಡು ತಾನಂತೂ ಒಂದು "ಸ್ಪೇರ್" ಹೆಂಡತಿಯನ್ನು ಇಟ್ಟುಕೊಳ್ಳುವುದಾಗಿ ಆಗಲೇ ನಿರ್ಧರಿಸಿಕೊಂಡಿರಬೇಕು. ಒಂದು ಹೆಂಡತಿ ಸತ್ತ ಮೇಲೆ ಇನ್ನೊಬ್ಬಳನ್ನು ಮಾಡಿಕೊಳ್ಳಬಾರದಿತ್ತೇ ಎಂದು ನೀವು ಕೇಳುತ್ತೀರಿ. ಆದರೆ ಒಮ್ಮೆ ಒಂದು ಹೆಂಡತಿಗೆ ತಗಲಿಕೊಂಡ ಮೇಲೆ ಹೊಸ ಹೆಂಡತಿಗೆ ಹೊಂದಿಕೊಳ್ಳುವುದು. ಒಂದು ಬ್ರ್ಯಾಂಡಿನ ಸಿಗರೇಟು ಬಿಟ್ಟು ಇನ್ನೊಂದಕ್ಕೆ ಹೊಂದಿಕೊಳ್ಳುವಷ್ಟೇ ಕಷ್ಟ. ಹಿಂದಿನ ಬ್ರ್ಯಾಂಡಿನ ರುಚಿಯನ್ನು ನೆನೆಯುತ್ತ ನೀವು ಈಗಿನ ಬ್ರ್ಯಾಂಡಿನ ಸವಿಯನ್ನು ಅನುಭವಿಸಲಾರದೇ ಹೋಗುತ್ತೀರಿ. ಅದಕ್ಕಾಗಿ ದಶರಥ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಬ್ರ್ಯಾಂಡುಗಳ ಅಭ್ಯಾಸಮಾಡಿಕೊಂಡನೆಂದು ತೋರುತ್ತದೆ. ನನ್ನ ಅಭಿಪ್ರಾಯದಲ್ಲಿ ಅವನು ಜಾಣನೇ ಸೈ.

ಎರಡಾದ ಮೇಲೆ ಮೂರೂ ಆಗಲಿ ಎಂದು ದಶರಥ ಕೈಕೇಯಿಯನ್ನು ಮದುವೆಯಾದ. ಅಲ್ಲೇ ಅವನು ಜಾರಿದನೆಂದು ನನ್ನ ಮತ. ಆದರೆ ಅವನಿಗೆ ತಕ್ಕ ಕಾರಣವೂ ಇದ್ದಿರಬಹುದು. ಬಹುಶಃ ಕೌಸಲ್ಯೆ-ಸುಮಿತ್ರೆಯರು ತುಂಬ ಜಗಳವಾಡತೊಡಗಿದ್ದರಿಂದ ಅವನು ಬೇಸತ್ತು "ತೃತೀಯಃ ಪಂಥಾಃ" ಹಿಡಿಯಲು ಮನಸುಮಾಡಿರಬಹುದು. ಯಾರಾದರೂ ಇಬ್ಬರು ಜಗಳವಾಡುತ್ತಿದ್ದಾಗ ಮೂರನೆಯವಳು ತನಗೆ "ಓಪನ್" ಆಗಿರುತ್ತಾಳಲ್ಲ ಎಂದು ಲೆಕ್ಕ ಹಾಕಿರಬಹುದು. ಇದರಿಂದ ಅವನಿಗೆ ಇಬ್ಬರನ್ನೂ ಏಕಕಾಲದಲ್ಲಿ ಸಂತೈಸುವ ಉಭಯಸಂಕಟ ತಪ್ಪುತ್ತಿತ್ತು.

ಅಂತೂ ದಶರಥ ಮೂರನೆಯವಳನ್ನು ಮದುವೆಯಾದ. ಅವಳನ್ನು ತನ್ನೊಡನೆ ಯುದ್ಧಕ್ಕೆ ಕರೆದೊಯ್ಯುವ ಹುಚ್ಚು ಅವನಿಗೆ ಏಕೆ ಅಂಟಿತೆಂದು ರಾಮಾಯಣದಲ್ಲಿ ಎಲ್ಲಿಯೂ ಹೇಳಿಲ್ಲ. ಆದರೆ ಆ ವಿಚಾರ ನನಗೆ ಗೊತ್ತಿದೆಯೆಂದು ಹೇಳಬಲ್ಲೆ. ದಶರಥ ಮುದುಕನಾಗುತ್ತ ಬಂದಿದ್ದ. ಅವನ ಗುರಿ ಅಷ್ಟು ಸರಿಯಾಗಿರಲಿಲ್ಲವೆಂದು ತೋರುತ್ತದೆ. ಆದರೆ ತನ್ನ ರಥದಲ್ಲಿ, ದೃಷ್ಟಿ

ಬಾಣಗಳನ್ನು ಎತ್ತೆತ್ತಲೂ ಹಾರಿಸುವ ಬಿನ್ನಾಣಗಿತ್ತಿ ತರುಣಿಯೊಬ್ಬಳನ್ನು ಕರೆದೊಯ್ದರೆ ಶತ್ರು ವೀರರ ಕಣ್ಣುಗುರಿ ಒಂದೆಡೆ, ಬಾಣದ ಗುರಿ ಬೇರೊಂದೆಡೆ ಆಗಿ ಅವರು ಗೊಂದಲಕ್ಕೀಡಾಗುವರೆಂದು ದಶರಥ ಎಣಿಸಿದ. ಅದು ತಪ್ಪಾಗಲಿಲ್ಲ. ಅವನು ಯುದ್ಧದಲ್ಲಿ ಗೆದ್ದದ್ದರಲ್ಲಿ ಆಶ್ಚರ್ಯವಿಲ್ಲ. ನನ್ನನ್ನು ಕೇಳಿದರೆ, ಯುದ್ಧ ವಿದ್ಯೆಗೆ ಇದು ದಶರಥನ ಮೌಲಿಕ ಕೊಡುಗೆಯಾಗಿತ್ತು. ಈ ಗತ್ತನ್ನು ಅವನ ಅನಂತರ ಬಂದವರು ಉಪಯೋಗಿಸಿಕೊಳ್ಳದೆ ಇದ್ದದ್ದು ದುರದೃಷ್ಟಕರ. ದಶರಥ ತುಂಬ ಎಚ್ಚರಗೇಡಿ ವೀರನಾಗಿರಬೇಕು. ಯುದ್ಧಕ್ಕೆ ಹೊರಡುವ ಮೊದಲು ತನ್ನ ರಥದ ಗಾಲಿಯ ಕೀಲು ಸರಿಯಾಗಿದೆಯೋ ಎಂದು ನೋಡಿಕೊಳ್ಳದೆ ಹೊರಡುತ್ತಿದ್ದ. ನಮ್ಮ ರೈಲಿನವರು ತೆಗೆದುಕೊಳ್ಳುವಷ್ಟು ಮುಂಜಾಗ್ರತೆಯನ್ನು ಕೂಡ ಆತ ತೆಗೆದುಕೊಳ್ಳಲು ತಪ್ಪಿದ್ದು ಆಶ್ಚರ್ಯ, ಹೀಗಾಗಿ ಯುದ್ಧದ ನಡುವೆ ಗಾಡಿಯ ಕೀಲು ಜಾರಿಯೋ, ಮುರಿದೋ ಹೋಯಿತು. ಚುರುಕು ಕಣ್ಣಿನ ಕೈಕೇಯಿ ಇದನ್ನು ಕಂಡಳು. ರಥ ಬಿದ್ದರೆ, ಗಂಡನಿಗೆ ಮತ್ತು ತನಗೆ ಬರುವ ವಿಪತ್ತನ್ನು ಊಹಿಸಿದಳು. ಕೀಲಿಯ ತೂತಿಗೆ ತನ್ನ ಕಿರಿಬೆರಳನ್ನು ತುರುಕಿ ಗಾಲಿ ಸರಿದು ಬೀಳುವುದನ್ನು ತಡೆದಳು. ಕೈಕೇಯಿಯ ಧೈರ್ಯ ಎಷ್ಟು ಬಲವಾಗಿತ್ತೋ ಅಷ್ಟೇ ಅವಳ ಕಿರಿಬೆರಳೂ ಗಟ್ಟಿಯಾಗಿರಬೇಕು. ಚಲಿಸುತ್ತಿರುವ ಯುದ್ಧರಥದ ಗಾಲಿಯ ಕೀಲಿನ ತೂತಿನಲ್ಲಿ ಬೆರಳು ತುರುಕಿಸಲು ಸಾಧ್ಯವಾಗಬೇಕಾದರೆ ಕೈಕೇಯಿಯ ತೋಳು ಎಷ್ಟು ಉದ್ದವಾಗಿರಬೇಕು. ಅವಳ ಕೈಬೆರಳು ಎಷ್ಟು ದಪ್ಪವಾಗಿರಬೇಕು ಎಂದೆಲ್ಲ ತರ್ಕ-ವಿತರ್ಕ ಮಾಡುತ್ತ ಈ ಇಡೀ ಕಥೆಯ ಸತ್ಯತ್ವದ ಬಗ್ಗೆಯೆ ಸಂದೇಹವನ್ನುಂಟುಮಾಡಲು ಕೆಲ ಸಂಶೋಧಕಬ್ರುವರು ಪ್ರಯತ್ನಿಸುತ್ತಾರೆ. ನಮ್ಮ ಪುರಾಣಗಳ ಬಗ್ಗೆ ಇಂಥ ಅಬ್ರಹ್ಮಣ್ಯವಾದ ಸಂಶೋಧಕ ವೃತ್ತಿ ಸಲ್ಲದೆಂದಿಷ್ಟೇ ಹೇಳಬೇಕಾಗಿದೆ.

ಕಾಳಗ ಮುಗಿದ ಮೇಲೆಯೆ ತನ್ನ ಹೆಂಡತಿ ತನಗೆ ಮಾಡಿದ ಉಪಕಾರದ ಅರಿವು ದಶರಥನಿಗೆ ಬಂದದ್ದು. ಮೆಚ್ಚಿ ಅವಳಿಗೆ ಎರಡು ವರಗಳನ್ನು ದಯಪಾಲಿಸಿದ. ಒಂದು ಉಪಕಾರಕ್ಕೆ ಎರಡು ವರಗಳನ್ನು ಏಕೆ ಕೊಡಬೇಕಾಗಿತ್ತು? ಹೆಂಗಸಿಗೆ ಒಂದು ವರ ಕೊಡುವುದೇ ಅಪಾಯಕರ. ಆದರೆ ದಶರಥನ ಈ ಹೆಡ್ಡತನ ಕ್ಷಮ್ಯವಾಗಿದೆ. ಅವಳು ಅವನ ಮೂರನೇ ಹೆಂಡತಿಯಾಗಿದ್ದಳು ಮತ್ತು ನೆತ್ತರು ಸುರಿಯುವ ಅವಳ ಕಿರಿಬೆರಳು ಅವನ ಕಣ್ಮುಂದಿತ್ತು. ಕೈಕೇಯಿ ಈ ವರಗಳನ್ನು ನ್ಯಾಸವಾಗಿ ಅಂದರೆ ರಿಝರ್ವ್ ಆಗಿ ಇಟ್ಟಳು. ಅವು ಟೈಂಬಾಂಬಿನಂತೆ ರಾಮಾಯಣವನ್ನು ಸ್ಫೋಟಗೊಳಿಸಿದವು.

ರಾಜರಿಗೆ ಮಕ್ಕಳಾಗದಿರುವುದು ತ್ರೇತಾಯುಗದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿತ್ತು. (ಬಹುಶಃ ಇದು ಸಾಮಾನ್ಯ ಜನರಿಗೂ ವ್ಯಾಪಿಸಿದ ಸಮಸ್ಯೆಯಾಗಿತ್ತೆಂದು ನಂಬಲು ಆಧಾರಗಳಿವೆ. ಭಾರತೀಯರು ಮಕ್ಕಳನ್ನು ಹಡೆಯುವುದರಲ್ಲಿ ಎಂದು ಪಳಗಿದರೆಂಬುದು ಸಂಶೋಧಕರಿಗೆ ಒಂದು ವಿಷಯವಾಗಬಲ್ಲದು). ದಶರಥನ ಮುತ್ತಜ್ಜ ದಿಲೀಪನಿಗೆ ಬಹು ಕಾಲ ಮಕ್ಕಳಾಗದೆ ಆತ ಕಾಮಧೇನುವಿನ ಮಗಳಾದ ನಂದಿನಿಯನ್ನು ಸೇವಿಸಬೇಕಾಯಿತು. ಈ ಸೇವೆಯ ನಡುವೆ ಆ ಆಕಳು ಅವನಿಗಿತ್ತ ತೊಂದರೆಗಳನ್ನು ನೋಡಿದರೆ ಮಕ್ಕಳಾಗದಿದ್ದರೆ ಹೋಗಲಿ, ಈ ಪೀಡಾ ತಪ್ಪಿದರೆ ಸಾಕು ಎನಿಸಿರಬಹುದು. ಮಿಥಿಲೆಯ ಜನಕರಾಜನಿಗೆ ಮಕ್ಕಳಾಗದೆ ಅವನು ಯಜ್ಞಕ್ಕಾಗಿ ನೆಲ ಉಳುತ್ತಿರುವಾಗ ಒಂದು ಹೆಣ್ಣುಮಗು ಸಿಕ್ಕಿತಂತೆ. ಅರ್ಥಾತ್ ಆ ಕಾಲದಲ್ಲಿ ಹೆಂಗಸರ ಹೊಟ್ಟೆಯಲ್ಲಿ ಹೊರತು ಎಲ್ಲೆಲ್ಲಿಯೂ ಶಿಶುಗಳು ಹುದುಗಿರುತ್ತಿದ್ದವು.

ದಶರಥ ಮಹಾರಾಜನೂ ಇದಕ್ಕೆ ಅಪವಾದವಾಗಿರಲಿಲ್ಲ. ಮಕ್ಕಳನ್ನು ಪಡೆಯುವ ನೈಸರ್ಗಿಕ ವಿಧಾನವನ್ನು ಅನೇಕ ಕಾಲ ಪ್ರಯತ್ನಿಸಿ ವಿಫಲನಾಗಿ ಆತ ಕೊನೆಗೆ ಕೃತಕ ವಿಧಾನಕ್ಕೆ ಶರಣು ಹೋಗಬೇಕಾಯಿತು. ಪುತ್ರಕಾಮೇಷ್ಟಿಯನ್ನು ಮಾಡಿ ಯಜ್ಞಪುರುಷನು ಕೊಟ್ಟ ಪಾಯಸವನ್ನು ದಶರಥ ತನ್ನ ಹೆಂಡರಿಗೆ ಪಾಲುಮಾಡಿಕೊಟ್ಟ. ದಶರಥ ತುಂಬ ಮರವೆಯ ಸ್ವಭಾವದ ವನೆಂದೂ ಪಾಯಸವನ್ನು ಹಂಚುವಾಗ ಕೌಸಲ್ಯೆ ಕೈಕೇಯಿಯರಿಗೆ ಮಾತ್ರ ಕೊಟ್ಟು ಆಮೇಲೆ ನೆನೆದುಕೊಂಡು ಅವರಿಬ್ಬರಿಂದಲೂ ಸ್ವಲ್ಪ-ಸ್ವಲ್ಪವನ್ನು ನಡುವಿನವಳಿಗೆ ಕೊಡಿಸಿದನೆಂದೂ ಕೆಲವರು ಹೇಳುತ್ತಾರೆ. ಹೀಗಾಗಿ ಇಬ್ಬರ ನ್ಯಾಯ ನಡುವಿನವನಿಗೆ ಆಯ ಎಂಬ ಹಾಗೆ ಸುಮಿತ್ರೆಗೆ ಡಬ್ಬಲ್ ಪಾಯಸ ಮತ್ತು ಡಬ್ಬಲ್ ಮಕ್ಕಳು ಸಿಕ್ಕುವಂತಾಯಿತು. ಇಬ್ಬರು ಮಕ್ಕಳಿದ್ದುದರಿಂದ ಮುಂದೆ ಸುಮಿತ್ರೆಗೆ ತುಂಬ ಅನುಕೂಲವಾಯಿತು. ಒಬ್ಬನನ್ನು ರಾಮನೊಡನೆ ಕಾಡಿಗೆ ಕಳಿಸಿ ಇನ್ನೊಬ್ಬನನ್ನು ಭರತನೊಡನೆ ನಾಡಿನಲ್ಲಿ ಉಳಿಸಿ ಎರಡೂ ಪಕ್ಷಗಳೊಡನೆ ಒಳ್ಳೇ ಸಂಬಂಧವನ್ನು ಕಾಯ್ದುಕೊಳ್ಳಲು ಅವಳಿಗೆ ಸಾಧ್ಯವಾಯಿತು. ಏಕಕಾಲದಲ್ಲಿ ಎರಡೂ ಪಕ್ಷಗಳಲ್ಲಿರುವ ಈ ರಾಜಕೀಯ ಗತ್ತಿಗೆ ಇಂಗ್ಲಿಷಿನಲ್ಲಿ 'running with the hares and hunting with the hounds' ಮೊಲಗಳೊಡನೆ ಓಡುತ್ತ ನಾಯಿಗಳೊಡನೆ ಬೇಟೆಯನ್ನು ಆಡುವ ನೀತಿ ಎನ್ನುತ್ತಾರೆ.

ದಶರಥನ ನಾಲ್ವರು ಮಕ್ಕಳಲ್ಲಿ ಹಿರಿಯನಾದ ಶ್ರೀರಾಮ ಆದರ್ಶವಾದಿಯಾಗಿ ಬೆಳೆಯಲಿದ್ದ. ಅವನು ಚಿಕ್ಕವನಾಗಿದ್ದಾಗ ನಡೆದ ಒಂದು ಘಟನೆ ಇದನ್ನು ಮುನ್-ಸೂಚಿಸಿತ್ತು. ಒಂದಾನೊಂದು ಹುಣ್ಣಿಮೆಯ ದಿನ ಮಗು ರಾಮಚಂದ್ರ ಆಕಾಶದಲ್ಲಿ ಚಂದ್ರನನ್ನು ಕಂಡು ಅದು ತನಗೆ ಬೇಕೆಂದು ಅಳತೊಡಗಿದ. ಅವನ ರಂಪಾಟ ಎಷ್ಟು ಹೆಚ್ಚಾಯಿತೆಂದರೆ, ಅರಮನೆಯೆಲ್ಲ ಗಾಬರಿಯಿಂದ ಅಲ್ಲೋಲ ಕಲ್ಲೋಲವಾಗಿ ಹೋಯಿತು. ಅಷ್ಟರಲ್ಲಿ ಯಾರಿಗೋ ಒಂದು ಉಪಾಯ ಹೊಳೆದು ಅವರು ಒಂದು ಕನ್ನಡಿಯನ್ನು ತಂದು, ಮಗುವನ್ನು ಚಂದ್ರನಿಗೆ ಬೆನ್ನಾಗಿ ಕೂಡ್ರಿಸಿ ಕನ್ನಡಿಯನ್ನು ಅದರ ಕೈಗೆ ಕೊಟ್ಟರು. ಕನ್ನಡಿಯಲ್ಲಿ ಚಂದ್ರನನ್ನು ಕಂಡು ರಾಮಚಂದ್ರ ಸಂತುಷ್ಟನಾಗಿ ಅಳು ನಿಲ್ಲಿಸಿದ. ಇದು ಶುದ್ಧ ಆದರ್ಶವಾದಿಗಳ ಲಕ್ಷಣವೆಂದು ಇಲ್ಲಿ ಹೇಳಬಹುದಾಗಿದೆ. ಅವರು ಬಾನಿನಲ್ಲಿರುವ ಚಂದ್ರನನ್ನು ಭೂಮಿಗೆ ತರಬೇಕೆಂದು ಹಟತೊಟ್ಟು ಪ್ರಪಂಚವನ್ನೆಲ್ಲ ತಲೆಕೆಳಗು ಮಾಡುವಷ್ಟು ಗದ್ದಲ ಎಬ್ಬಿಸುತ್ತಾರೆ. ಕಡೆಗೆ ಚಂದ್ರನ ನೆರಳನ್ನು ಕೊಟ್ಟರೇ ಚಂದ್ರನು ಸಿಕ್ಕಿದನೆಂದು ಸಮಾಧಾನ ಹೊಂದುತ್ತಾರೆ.

ಶ್ರೀರಾಮಚಂದ್ರ ತಾರುಣ್ಯದಲ್ಲಿ ಕಾಲಿಡುತ್ತಿದ್ದಾಗ್ಗ ವಿಶ್ವಾಮಿತ್ರ ಋಷಿ ಒಂದು ದಿನ ಅಯೋಧ್ಯೆಗೆ ಬಂದ. ನಿಮಗೆಲ್ಲ ಗೊತ್ತಿರುವಂತೆ ಈತ ಕ್ಷತ್ರಿಯತ್ವದಿಂದ ಬ್ರಾಹ್ಮಣತ್ವಕ್ಕೆ ಪ್ರೊಮೋಶನ್ ಪಡೆದ ಒಬ್ಬ ರಾಜ. ಪೌರೋಹಿತ್ಯದ ಸಿವಿಲ್ ಸರ್ವೀಸಿನಲ್ಲಿ ಬ್ರಾಹ್ಮಣರು ಎಲ್ಲ ಸ್ಥಾನಗಳನ್ನು ಆಕ್ರಮಿಸಿಕೊಂಡು ಇತರರಿಗೆ ಇಲ್ಲಿ ಪ್ರವೇಶಕೊಡದಿದ್ದ ಆ ಕಾಲದಲ್ಲಿ ಬ್ರಾಹ್ಮಣತ್ವಕ್ಕಾಗಿ ಹೋರಾಡಿ ಗೆದ್ದ ವಿಶ್ವಾಮಿತ್ರನನ್ನು ಭಾರತದ ಪ್ರಥಮ ಬ್ರಾಹ್ಮಣೇತರ ಪ್ರಮುಖನೆಂದು ಹೇಳಲಡ್ಡಿಯಿಲ್ಲ. ಅವನು ಬ್ರಾಹ್ಮಣನಾದದ್ದಷ್ಟೇ ಅಲ್ಲ, ಉದ್ದವಾದ ಗಡ್ಡ ಬೆಳೆಸಿ ಋಷಿ ಕೂಡ ಆದ. ಆವೊತ್ತಿನಿಂದ ವಿಶ್ವಾಮಿತ್ರ ಸತ್ಯ ಹೇಳುವ ರಾಜರಿಗೆ ತೊಂದರೆ ಕೊಡುವುದು, ತ್ರಿಶಂಕು ಸ್ವರ್ಗವನ್ನು ನಿರ್ಮಿಸುವುದು ಮೊದಲಾದ ಉಪದ್ವ್ಯಾಪಗಳನ್ನು ಮಾಡುತ್ತ ತಿರುಗುತ್ತಿದ್ದ.

ಈ ಸಮಯದಲ್ಲಿ ವಿಶ್ವಾಮಿತ್ರ ಸಿದ್ಧಾಶ್ರಮ ಎಂಬ ಅಡವಿಯಲ್ಲಿ ಯಜ್ಞ ಮಾಡಬೇಕೆಂದಿದ್ದ. ಈ ಯಜ್ಞಗಳೆಂದರೆ ಕಾಡುಗಳಲ್ಲಿ ವಾಸಿಸುತ್ತಿದ್ದ ರಾಕ್ಷಸರಿಗೆ ಆಗುತ್ತಿದ್ದಿಲ್ಲ. ಯಜ್ಞ ಎಂದು ಒಳ್ಳೇ ತುಪ್ಪವನ್ನು ಬೆಂಕಿಯಲ್ಲಿ ಹಾಕಿ ಸುಡುವುದು ಅವರಿಗೆ ತಪ್ಪಾಗಿ ಕಾಣಿಸುತ್ತಿತ್ತೋ ಅಥವಾ ಇವರು ಎಬ್ಬಿಸಿದ ಹೊಗೆಯಿಂದಾಗಿ ಅವರ ಉಸಿರು ಕಟ್ಟುತ್ತಿತ್ತೋ ನನಗೆ ಗೊತ್ತಿಲ್ಲ. ಇದು ಋಷಿಗಳಿಗೆ ಗೊತ್ತಾಗಿ ಅವರು ತಮಗೆ ಆಗದಿದ್ದ ರಾಕ್ಷಸರಿದ್ದ ಅಡವಿಗಳಿಗೆ ಬಂದು ಯಜ್ಞಮಾಡುತ್ತಿದ್ದರೆಂದೂ ಆಗ ಸಹಜವಾಗಿ ಜಗಳಕ್ಕೆ ಬಂದ ರಾಕ್ಷಸರನ್ನು ಆ ನೆವದಿಂದ ಕ್ಷತ್ರಿಯರಿಂದ ಕೊಲ್ಲಿಸುತ್ತಿದ್ದರೆಂದೂ ದ್ರಾವಿಡ ಕಳಗದವರು ಹೇಳುತ್ತಾರೆ.

ಸಿದ್ಧಾಶ್ರಮದಲ್ಲಿ ತಾಟಕಿ ಮತ್ತು ಅವಳ ಇಬ್ಬರು ಮಕ್ಕಳಾದ ಸುಬಾಹು. ಮಾರೀಚರು ಇದ್ದು ಅವರ ಮೇಲೆ ಏಕೋ ವಿಶ್ವಾಮಿತ್ರನಿಗೆ ಸೇಡು ತೀರಿಸಿಕೊಳ್ಳಬೇಕೆನಿಸಿ ಅವನು ಈ ಯಜ್ಞದ ನೆವ ಹೂಡಿದ್ದನೆಂದೂ ದ್ರಾವಿಡ ಕಳಗದವರ ಹೇಳಿಕೆಯಿದೆ. ಅವರನ್ನು ಕೊಲ್ಲಲೆಂದೇ ಅವನು ದಶರಥನನ್ನು ಹೆದರಿಸಿ ರಾಮ-ಲಕ್ಷ್ಮಣರನ್ನು ಕರೆದುಕೊಂಡು ಹೋದನು. ರಾಮನಿಗೆ ಹೆಂಗಸರನ್ನು ಕೊಲ್ಲುವುದಕ್ಕೆ ಸ್ವಲ್ಪ ಮನಸು ಅಳುಕುತ್ತಿತ್ತು. ಆದರೆ ವಿಶ್ವಾಮಿತ್ರನು ರಾಮನಿಗೆ ಸರಿಯಾಗಿ ಅರ್ಥವಾಗದ ಆರ್ಷ ಸಂಸ್ಕೃತದಲ್ಲಿ ಅನೇಕ ಶಾಸ್ತ್ರವಚನಗಳನ್ನು ಉದ್ಧರಿಸಿ ಅವನನ್ನು ತೀರ ಮಾನಸಿಕ ಗೊಂದಲಕ್ಕೆ ಗುರಿಪಡಿಸಿದ್ದರಿಂದ ರಾಮ ಒಪ್ಪಿ ತಾಟಕಿಯನ್ನೂ ಅವಳ ಒಬ್ಬ ಮಗನನ್ನೂ ಕೊಂದು ಇನ್ನೊಬ್ಬನನ್ನು ಓಡಿಸಿದ.

ರಾಕ್ಷಸರನ್ನು ಕೊಲ್ಲುವುದರಲ್ಲಿ ಹೀಗೆ ಗ್ರ್ಯಾಜುಯೇಟತನಾದ ಶ್ರೀ ರಾಮಚಂದ್ರನನ್ನು ವಿಶ್ವಾಮಿತ್ರನು ಮಿಥಿಲೆಗೆ ಕರೆದುಕೊಂಡು ಹೊರಟನು. ಆಗ ಮಿಥಿಲೆಯಲ್ಲಿ ಜನಕರಾಜ ಆಳುತ್ತಿದ್ದ. ಈ ಜನಕನ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುವುದು ಅವಶ್ಯ.

"ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ಕಿಂಚನ ದಹ್ಯತೇ" ಎಂದು ಹೇಳಿದ್ದಕ್ಕಾಗಿ ಈತನು ತತ್ವಜ್ಞಾನಿಗಳ ವರ್ಗದಲ್ಲಿ ಪ್ರಸಿದ್ಧನಾಗಿದ್ದ. ಅರ್ಥಾತ್ ರೋಂ ನಗರ ಸುಡುತ್ತಿದ್ದಾಗ ನೀರೋ ದೊರೆ ಪಿಟೀಲು ಬಾರಿಸುತ್ತಿದ್ದರೆ ಮಿಥಿಲೆ ಸುಡುತ್ತಿದ್ದಾಗ ಜನಕ ತತ್ವಜ್ಞಾನ ಹೇಳುತ್ತಿದ್ದ. "ಮಿಥಿಲೆ ಸುಟ್ಟರೆ ನನ್ನದೇನೂ ಸುಡುವುದಿಲ್ಲ" ಎಂದು ಜನಕ ಏಕೆ ಹೇಳಿದ? ಎಂಬ ವಿಚಾರದಲ್ಲಿ ನಾನು ಸಾಕಷ್ಟು ತಲೆ ಕೆಡಿಸಿಕೊಂಡ ನಂತರ ಒಂದು ನಿರ್ಣಯಕ್ಕೆ ಬಂದಿದ್ದೇನೆ. ಈ ಕಾಲದ ಅನೇಕ ರಾಜಕಾರಣಿಗಳು ತಮ್ಮ ಆಸ್ತಿಯನ್ನು ಆಪತ್ಕಾಲ ಬಂದರೆ ಇರಲಿ ಎಂದು ವಿದೇಶಗಳ ಬ್ಯಾಂಕುಗಳಲ್ಲಿ ತೊಡಗಿಸುವ ಹಾಗೆ ಜನಕನೂ ತನ್ನ ಸೊತ್ತಿನ ಬಹುಭಾಗವನ್ನು ತನ್ನ ರಾಜ್ಯದ ಹೊರಗೆ ಇಟ್ಟಿದ್ದುದರಿಂದ ಅವನಿಗೆ 'ನನ್ನದೇನೂ ಸುಡುವುದಿಲ್ಲ' ಎಂದು ಧೈರ್ಯದಿಂದ ಹೇಳಲು ಶಕ್ಯವಾಯಿತು.

ನೆಲ ಉಳುವಾಗ ಸಿಕ್ಕಿದ ಮಗಳ ಮದುವೆ ಮಾಡಬೇಕೆಂದು ಜನಕ ಈ ಸಮಯದಲ್ಲಿ ನಿರ್ಧರಿಸಿದ್ದ. ಆ ಕಾಲದಲ್ಲಿ ಮದುವೆ ಮಾಡಬೇಕಾದರೆ ಕುಂಡಲಿ ನೋಡುವುದು, ಹೆಣ್ಣು ತೋರಿಸುವುದು ಮೊದಲಾದ ಪದ್ಧತಿಗಳ ಬದಲು ಒಂದು ವಿಚಿತ್ರ ಕ್ರಮ ಜಾರಿಯಲ್ಲಿತ್ತು. ನೀವು ಹೋಗಿ ಕನ್ಯಾಪಿತನ ಮನೆಯಲ್ಲಿದ್ದ ಯಾವುದಾದರೂ ಬಿಲ್ಲನ್ನು ಮುರಿದು ಹಾಕಿಬಿಟ್ಟರೆ ಅವನ ಮಗಳು ನಿಮಗೆ ಮಾಲೆ ಹಾಕುತ್ತಿದ್ದಳು. ಜನಕನ ಮನೆಯಲ್ಲಿ ಒಂದು ಹಳೇ ಬಿಲ್ಲು ಇತ್ತು. ಅದು ಎಷ್ಟು ಹಳೆಯದು, ಯಾವಾಗಿನಿಂದ ಮಿಥಿಲೆಯಲ್ಲಿತ್ತು ಎಂದು ಯಾರಿಗೂ ಸರಿಯಾಗಿ ಗೊತ್ತಿರಲಿಲ್ಲ, ಅದನ್ನು ಹಿಂದೆ ಶಿವನು ಉಪಯೋಗಿಸುತ್ತಿದ್ದನೆಂದು ಪ್ರತೀತಿ ಇತ್ತು.

ಅವನು ಅದನ್ನು ಏಕೆ ಕೈಬಿಟ್ಟನೆಂಬ ಬಗ್ಗೆಯೂ ವಿಶ್ವಸನೀಯ ಆಧಾರಗಳಿಲ್ಲ. ಅದು ತೀರ ಹಳೆಯದಾಯಿತೆಂದೆ? ಅಥವಾ ತ್ರಿಶೂಲವು ಬಿಲ್ಲಿಗಿಂತ ಹೆಚ್ಚು ಅನುಕೂಲವಾದ ಆಯುಧವೆಂದು ಕಂಡುಕೊಂಡ ಮೇಲೆ ಅವನು ಕೋದಂಡವನ್ನು ರಿಟೈರ್ ಮಾಡಿಸಿದ್ದರೂ ಇರಬಹುದು.

ಅದು ಹೇಗೆಯೇ ಇರಲಿ, ಬಿಲ್ಲು ಭಾರೀ ದೊಡ್ಡದಿತ್ತೆಂಬುದನ್ನಂತೂ ಎಲ್ಲರೂ ಒಪ್ಪುತ್ತಾರೆ. ಅದರ ಕೀರ್ತಿ ಎದೆ ನಡುಗಿಸುವಂತಿತ್ತು. ಈ ಬಿಲ್ಲಿಗೆ ಹೆದೆಯೇರಿಸುವವರಿಗೆ ತನ್ನ ಮಗಳನ್ನು ಕೊಡುವುದಾಗಿ ಜನಕ ಘೋಷಿಸಿದ ನಂತರ, ತಮ್ಮ ಕೈತೋರಿಸಲು ಬಂದ ಅನೇಕರು ಅದರ ಗಾತ್ರ ನೋಡಿ ಅದರ ಕೀರ್ತಿ ಕೇಳಿಯೇ ಹೆದರಿ ಹೋಗಿದ್ದರೆಂಬ ಅನುಮಾನಕ್ಕೆ ಆಸ್ಪದವಿದೆ. ರಾವಣ ಕೂಡ ಈ ಕೀರ್ತಿಶನಿಯ ಪ್ರತಾಪದಿಂದಲೇ ಅಂಜಿರಬೇಕು. ರಾಮ ಮಾತ್ರ ಬಂದು ನೋಡಿದ, ಎತ್ತಿದ, ಮತ್ತು ಮುರಿದ. ಅದಕ್ಕೆ ನಿಜವಾಗಿ ಹೆದರಬೇಕಾಗಿದ್ದಿಲ್ಲ. ಅದು ಸಾವಿರಾರು ವರ್ಷದಿಂದ ಇಟ್ಟಲ್ಲೆ ಅನೇಕ ಕಡೆ ಲಡ್ಡಾಗಿದೆ ಎಂಬ ಗುಟ್ಟನ್ನು ವಿಶ್ವಾಮಿತ್ರನಷ್ಟೇ ಅರಿತಿದ್ದನೆಂದೂ, ಅವನು ರಾಮನಿಗೆ ಮೊದಲೇ ಹೇಳಿಟ್ಟಿದ್ದನೆಂದೂ ಯಾವ ಪುರಾಣದಲ್ಲಿಯೂ ಹೇಳಿಲ್ಲ.

ಸೀತೆ ಶ್ರೀರಾಮನನ್ನು ವರಿಸಿದಳು. ಇದೇ ಸಂದರ್ಭ ಸಾಧಿಸಿ ಜನಕನು ತನ್ನ ಮನೆತನದಲ್ಲಿ ಬೆಳೆಯುತ್ತಿದ್ದ ಹುಡುಗಿಯರನ್ನೆಲ್ಲ ದಶರಥನ ಇತರ ಮಕ್ಕಳಿಗೆ ಮದುವೆ ಮಾಡಿಕೊಟ್ಟು ಪಾರಾದ. ರಾಮನ ತಮ್ಮಂದಿರೂ ಬಿಲ್ಲುಗಳನ್ನು ಮುರಿದುಹಾಕಬೇಕೆಂದು ಅವನೇಕೋ ಹಟ ಹಿಡಿಯಲಿಲ್ಲ.

ಇದು ಕರ್ನಾಟಕ ಕಾವ್ಯಕುಠಾರ ಬಿರುದಾಂಕಿತ ಶ್ರೀಮಲ್ಲಾಂಗೂಲಾಚಾರ್ಯವಿರಚಿತಮಾದ ಶ್ರೀಮದ್ರಾಮಾಯಣದರ್ಶನ ಗದ್ಯಮಹಾ ಪ್ರಬಂಧದೋಳ್ ಬಾಲಕಾಂಡಂ ಸಂಪೂರ್ಣಮ್.|| ಶ್ರೀ ಶ್ರೀ||

ಯುವಕರು ಆಕಾಶ ಮುಟ್ಟಲು ಯತ್ನಿಸಬೇಕೆಂದು ಪ್ರಧಾನಿ ನೆಹರು ಹೈದರಾಬಾದಿನ ವಿದ್ಯಾರ್ಥಿಗಳಿಗೆ ಉಪದೇಶವಿತ್ತರು.

ಭೂಮಿಯ ಮೇಲೆಯೇ ತಾರೆಗಳು ಸಿಗುವಾಗ ಆಕಾಶಕ್ಕೆ ಏಣಿ ಹಚ್ಚುವ ಗೊಡವೆ ಏಕೆ ಅಂತ?

೧೭. ಸಂಶೋಧನೆಯ ಸಮಸ್ಯೆಗಳು

ಐತಿಹಾಸಿಕ ಸಂಶೋಧನೆ ಒಂದು ಮೋಜಿನ ಕೆಲಸ. ಓದುವವರಿಗೆ ಸಂಶೋಧನಾತ್ಮಕ ಲೇಖನಗಳ ಪ್ರತಿಪುಟವ ಕೆಳಗೂ ಇರುವ ಹನುಮಂತನ ಬಾಲದಂಥ ಟಿಪ್ಪಣೆಗಳು ತಲೆ ಬೇಸರ ತರುವಂತಿದ್ದರೂ ಒಟ್ಟಿನ ಮೇಲೆ ಇತಿಹಾಸದ ಹುಚ್ಚುಳ್ಳವರಿಗೆ ಅದು ಯಾವಾಗಲೂ ಮನೋರಂಜಕವಾಗಿರುತ್ತದೆ. ಅದರಲ್ಲಿರುವ ಸೊಗಸಿನ ಮುಕ್ಕಾಲು ಪಾಲು ಸಂಶೋಧಕ-ಸಂಶೋಧಕರಲ್ಲಿ ನಡೆಯುವ ಕಚ್ಚಾಟದಲ್ಲಿದೆ. ಒಂದು ದಿನ ಬೆಳಗ್ಗೆ ನಿಮ್ಮ ಮೇಲೆ ಸಂಶೋಧಕರೊಬ್ಬರು "ಮಧ್ವಾಚಾರ್ಯರು ಕಾಣ್ವರೇ?" ಅಥವಾ "ಕುಮಾರ ವ್ಯಾಸನು ಲಿಂಗಾಯತನೇ?" ಅಥವಾ "ಕಾಳಿದಾಸನೇ ಅಶ್ವಘೋಷನಾಗಿದ್ದನೆ?" ಎಂಬ ಏನಾದರೊಂದು ಬಾಂಬನ್ನು ಒಗೆಯುತ್ತಾರೆ. ಆ ಮೇಲೆ ತಗೋ! ಸಂಶೋಧಕರ ತಂಡತಂಡವೇ ಈ ಬಾಂಬಿನ ವಿರುದ್ಧ ಅಸ್ತ್ರಪ್ರತ್ಯಸ್ತ್ರಗಳನ್ನು ಎಸೆಯುತ್ತ ನಿಮ್ಮ ಅಭಿಪ್ರಾಯವನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಯತ್ನಿಸುತ್ತಾರೆ. ಎರಡೂ ಪಕ್ಷಗಳು ಉಪಯೋಗಿಸುವ 'ಪ್ರಮಾಣ'ಗಳೆಂದರೆ ಉಳ್ಳಾಗಡ್ಡೆಯ ಒಣ ಸಿಪ್ಪೆಗಳಷ್ಟೇ ಭಾರವಾದವುಗಳು. ಆದ್ದರಿಂದಲೇ ನೀವು ಬದುಕಿಕೊಳ್ಳುತ್ತೀರಿ. ಅದಕ್ಕಿಂತ ಭಾರವಾದುದನ್ನೇದಾರೂ ಅವರು ಉಪಯೋಗಿಸಿದರೆ ನಿಮ್ಮ ತಲೆಯೆಂಬುದು ದಕ್ಷಿಣ ಕೊರಿಯದ ರಾಜಧಾನಿಯಂತೆ ಉಭಯ ಪಕ್ಷಗಳಲ್ಲಿ ಕೈ ಬದಲಿಸಿ ಬದಲಿಸಿ ನಜ್ಜುಗುಜ್ಜಾಗಿ ಹೋದೀತು.

"ಭಾಸನ ನಾಟಕಗಳನ್ನು ಭಾಸನೇ ಬರೆದನೇ" ಎಂಬ ಜಗಳ ನಮ್ಮಲ್ಲಿ ಹಲವಾರು ದಶಕಗಳಿಂದ ಕೋರಿಯನ್ ಯುದ್ಧದಷ್ಟೇ ಅನಿರ್ವಾಯಕವಾಗಿ ನಡೆಯುತ್ತಿದೆ. ಕೊನೆಗೆ ನೀವು ಬೇಸತ್ತು ಯಾಕಾದರೂ ಭಾಸನು ನಾಟಕಗಳನ್ನು ಬರೆದನೋ ಅನ್ನುವಿರಿ. ಕಾಳಿದಾಸ ಒಂದು ದಿನ ಮುಂದೆ ಹುಟ್ಟಿದ್ದನೋ ಒಂದು ದಿನ ತಡವಾಗಿಯೋ ಎಂದು ಸಂಶೋಧಕರು ಒಂದು ಯುಗದವರೆಗೂ ಹೋರಾಡುವರು. ಕನಿಷ್ಠ ಮೂರು ಜನರಾದರೂ ಕಾಳಿದಾಸರಿದ್ದರು ಎಂದು ಕೇಳಿ ನೀವು ಗಾಬಾಗುವಿರಿ. ಅಶ್ವಘೋಷನು ಮಾಡಿದ ವ್ಯಾಕರಣದ ತಪ್ಪುಗಳನ್ನೇ ಕಾಳಿದಾಸನೂ ಮಾಡಿರುವುದರಿಂದ ಇವನೇ ಅವನಾಗಿರಕೂಡದೇಕೆ? ಕಾಳಿದಾಸನ ಎಲ್ಲ ಗ್ರಂಥಗಳಲ್ಲಿಯೂ ಒಂದೇ ಬಗೆಯ ತಪ್ಪುಗಳಿಲ್ಲದ್ದರಿಂದ ಅವು ಬೇರೆ ಬೇರೆ ಕಾಳಿದಾಸರಿಂದ ಬರೆಯಲ್ಪಟ್ಟಿರಬೇಕು. ಕಾಳಿದಾಸನು ಗುಪ್ತ ಶಬ್ದವನ್ನು ಅನೇಕ ಕಡೆ ಉಪಯೋಗಿಸಿರುವುದರಿಂದ ಅವನು ಗುಪ್ತ ಅರಸರ ಆಶ್ರಿತನಾಗಿರಬೇಕು, ಇತ್ಯಾದಿ.

ಭಾವೀ ಸಂಶೋಧಕರು ನಮ್ಮ ಕಾಲದ ಕವಿಗಳ ಬಗ್ಗೆ ಏನೇನು ತರ್ಕಗಳನ್ನು ತೆಗೆಯಬಹುದೆಂದು ಒಮ್ಮೊಮ್ಮೆ ಲಾಂಗೂಲಾಚಾರ್ಯರು ಕೌತುಕಪಡುವುದುಂಟು. ಅವರು ಖಂಡಿತವಾಗಿಯೂ ಎರಡು ಬೇಂದ್ರೆಗಳಿದ್ದರೆಂದು ವಾದಿಸುವರು- ಜನಪದ ಶೈಲಿಯಲ್ಲಿ ಬರೆದ ಬೇಂದ್ರೆ ಬೇರೆಯೇ. ಗ್ರಾಂಥಿಕ ಶೈಲಿಯಲ್ಲಿ ಬರೆದವ ಬೇರೆಯೇ, "ತುತ್ತಿನ ಚೀಲ" ಬರೆದ ನಾಸ್ತಿಕ ಕವಿ ಅರವಿಂದ ಭಕ್ತ ಬೇಂದ್ರೆಯಾಗಿರಲು ಶಕ್ಯವೇ ಇಲ್ಲದ್ದರಿಂದ ಮೂರು ಬೇಂದ್ರೆಗಳಿದ್ದಿರಬೇಕು ಇಲ್ಲವೆ "ತುತ್ತಿನ ಚೀಲ" ಇತ್ಯಾದಿಗಳು ಪ್ರಕ್ಷಿಪ್ತವಿರಬೇಕು ಎಂದೂ

ಅವರು ಸಾಧಿಸುವ ಸಂಭವವುಂಟು. ಪುಟ್ಟಪ್ಪನವರು ಇಪ್ಪತ್ತನೇ ಶತಮಾನದವರಿರಲಿಕ್ಕಿಲ್ಲವೆಂದೂ ಅವರು ಚಂಪೂಕಾವ್ಯ ಮತ್ತು ಷಟ್ಪದಿ ಕಾವ್ಯಗಳ ನಡುವಣ ಕಾಲದವರಿರಬೇಕೆಂದೂ ಅವರ ಶೈಲಿಯ ಆಧಾರದಿಂದ ನಿರ್ಣಯಿಸುವ ಸಾಹಸಿಗಳೂ ಹುಟ್ಟಬಹುದು. ಮುದ್ದಣನು ತನ್ನ ಕಾವ್ಯಗಳು ಪ್ರಾಚೀನವೆಂದು ಭ್ರಮೆಯುಂಟುಮಾಡಲು ಹೆಣಗಿದಂತೆ ಪುಟ್ಟಪ್ಪನವರು ತನ್ನದು ಅರ್ವಾಚೀನವೆಂದು ತೋರಿಸಲು ಪ್ರಯತ್ನಿಸಿರಬಾರದೇಕೆ?

ಈ ಐತಿಹಾಸಿಕ ಯುದ್ಧ ನಮ್ಮ ದೇಶಕ್ಕೇ ಮೀಸಲಾಗಿದೆಯೆಂದು ತಿಳಿಯಬೇಡಿರಿ. ಲಾಂಗೂಲಾಚಾರ್ಯರಿಂದ ಇಷ್ಟೆಲ್ಲ ಹರಟಿಸಲು ಕಾರಣವಾದ ಸಂಗತಿಯೆಂದರೆ ಇಂಗ್ಲಿಷ್ ಪತ್ರಿಕೆಗಳಲ್ಲಿ ಬಂದ "ಬೇಕನ್ನನು ಎಲಿಜಬೆತ್‌ಳ ಮಗನೇ?" ಎಂಬ ಲೇಖ. ಎಲಿಜಬೆತ್‌ಳು ೧೬ನೇ ಶತಕದ ಇಂಗ್ಲೆಂಡಿನ ಕುಮಾರಿ ರಾಣಿಯೆಂಬುದು ಪ್ರಸಿದ್ಧವಾಗಿದೆ. ಆದರೆ ಅವಳಿಗೆ ಅರ್ಲ್‌ಆಫ್ ಲೀಸೆಸ್ಟರನಿಂದ ಗುಪ್ತ ಪ್ರಣಯದ ಮೂಲಕ ಒಬ್ಬನಲ್ಲ ಇಬ್ಬರು ಮಕ್ಕಳಿದ್ದರೆಂದು ಸಂಶೋಧಕರೀಗ ಹುಯಿಲೆಬ್ಬಿಸಿದ್ದಾರೆ. ಇಬ್ಬರೂ ಟವರ್ ಆಫ್ ಲಂಡನ್ ಸೆರೆಮನೆಯಲ್ಲಿ ಕೊಳೆಯುತ್ತಿದ್ದಾಗ ಅವರಲ್ಲಿ ಪ್ರಣಯ ಬೆಳೆಯಿತಂತೆ. ಮುಂದೆ ಎಲಿಜಬೆತ್‌ಳಿಗೆ ಪಟ್ಟ ದೊರೆತ ಮೇಲೆ ಅವನನ್ನು ಅರಮನೆಯಲ್ಲಿ ಅಶ್ವಾಧಿಕಾರಿಯಾಗಿ ನೇಮಿಸಿಕೊಂಡು ಎಲಿಜಬೆತ್‌ಳು ಹಗಲೂ-ರಾತ್ರಿ ಅವನೊಡನೆ ಬೆರೆಯುತ್ತಿದಳಂತೆ. ಸರ್ ಫ್ರಾನ್ಸಿಸ್ ಬೇಕನ್ ಎಂದು ಮುಂದೆ ಜಗತ್ಪ್ರಸಿದ್ಧ ತತ್ವಜ್ಞಾನಿಯಾದಾತನು ಹುಟ್ಟಿದಾಗ ಅವನನ್ನು ಗುಟ್ಟಾಗಿ ರಾಣಿಯ ಸೈರಂಧ್ರಿಯಾಗಿದ್ದ ಆ್ಯನ್ ಬೇಕನ್ನಳು ಒಯ್ದು ತನ್ನ ಮಗನೆಂದೇ ಸಾಕಿದಳಂತೆ. ಎಸೆಕ್ಸಿನ ಅರ್ಲನಾಗಿದ್ದ ರಾಬರ್ಟನು ಅವಳ ಇನ್ನೊಬ್ಬ ಮಗನಂತೆ. ಅರಮನೆಯಲ್ಲಿ ಉಚ್ಚ ಮರ್ಯಾದೆ ಪಡೆಯುತ್ತಿದ್ದ ಬೇಕನ್ನನು ಹದಿನಾರು ವರ್ಷದವನಾಗಿದ್ದಾಗ ಒಮ್ಮೆ ಕ್ರೋಧೋನ್ಮತ್ತಳಾದ ಎಲಿಜಬೆತ್‌ರಾಣಿ ತಾನೇ ಅವನ ತಾಯಿಯೆಂದು ಒದರಿಬಿಟ್ಟಳಂತೆ. ಆಮೇಲೆ ಈ ಮಾತನ್ನು ಯಾರ ಮುಂದೆಯೂ ಬಿಚ್ಚತಕ್ಕದ್ದಲ್ಲವೆಂದು ಶಾಸನ ಮಾಡಿ ಅವನನ್ನು ಫ್ರಾನ್ಸಿಗೆ ರಾಯಭಾರಿಯಾಗಿ ಅಟ್ಟಿದಳು. ಪ್ರಾಣಭಯದಿಂದ ಅವನು ಕೊನೆಯವರೆಗೂ ಅವಳ ಗುಟ್ಟನ್ನು ಕಾಪಾಡಿದರೂ ತನ್ನ ಗ್ರಂಥಗಳಲ್ಲಿ ಮಿತಾಕ್ಷರಿ ಸಾಂಕೇತಿಕ ಭಾಷೆಯಲ್ಲಿ ಈ ಗುಟ್ಟನ್ನು ಬರೆದಿಟ್ಟಿದ್ದಾನೆಂದೂ ಈ ಸಂಶೋಧಕರು ಸಾಧಿಸುತ್ತಾರೆ. ಈ ಸಾಂಕೇತಿಕ ಭಾಷೆಯ ಆಧಾರದಿಂದಲೇ ಅವರು ಹಲದಿನಗಳಿಂದ ಬೇಕನ್ನನೇ ಶೇಕ್ಸಪಿಯರನ ನಾಟಕಗಳನ್ನು ಬರೆದನೆಂದು ಸಾಧಿಸುತ್ತಿದ್ದರು. ಈಗ ಶೇಕ್ಸಪಿಯರನ ಸ್ವಹಸ್ತದ ಮೂಲಪ್ರತಿ ಸಿಕ್ಕಿರುವುದರಿಂದ ಅದು ಸುಳ್ಳುಗಳೆಯಲ್ಪಟ್ಟಿದೆ. ಆದರೇನು? ಬೇಕನ್ನನಿಗೆ ರಾಣಿಯ ಮಗನ ಪಟ್ಟ ದೊರಕಿಸಲು ಅವರೀಗ ಯತ್ನಿಸುತ್ತಿದ್ದಾರೆ. ಎಲಿಜಬೆತ್‌ಳ ಈ ಎರಡೂ "ಮಕ್ಕಳಿ"ಗೆ ಆದ ಗತಿ ಮಾತ್ರ ಶೋಚನೀಯ. ಬೇಕನ್ನನು ಇಂಗ್ಲೆಂಡಿನ ಮುಖ್ಯ ನ್ಯಾಯಾಧೀಶನ ಪದವಿಯವರೆಗೂ ಏರಿ ಲಂಚಗುಳಿತನಕ್ಕಾಗಿ ಪದಚ್ಯುತನಾದನು. ರಾಬರ್ಟನು ದಂಗೆಯೆದ್ದದ್ದಕ್ಕೆ ಎಲಿಜಬೆತ್‌ಳು ಅವನ ತಲೆ ಕಡಿಸಿದಳು!

(೭-೫-೧೯೫೧)

೧೮. ಸಪ್ತಾಕ್ಷರಿ ಮಂತ್ರ

ಆಂಧ್ರದ ಕಾಕಿನಾಡಿನಲ್ಲಿ ಶಾಲಾಮಾಸ್ತರುಗಳು ಜೋಳಿಗೆ ಹಾಕಿಕೊಂಡು ಭಿಕ್ಷೆ ಬೇಡಿದರಂತೆ. ಕಾರಣ ಅವರಿಗೆ ಅನೇಕ ತಿಂಗಳುಗಳಿಂದ ಸಂಬಳವೇ ಸಿಕ್ಕಿಲ್ಲ. ತಪ್ಪೇನು ಹೇಳಿ? ಕರ್ನಾಟಕದ ಸಂಧಿಕಾಲದ ಮಹಾಕವಿ ಮುದ್ದಣ ಅವನೂ ಶಾಲಾ ಮಾಸ್ತರನೇ. ತನ್ನ ರಾಮಾಶ್ವಮೇಧದಲ್ಲಿ ಬಹಳ ರಹಸ್ಯಪೂರ್ಣವಾಗಿ ತನ್ನ ಮನೋರಮೆಗೆ ಸಪ್ತಾಕ್ಷರಿ ಮಂತ್ರದ ಮಹಿಮೆ ಹೇಳುತ್ತಾನೆ. ಆ ಮಂತ್ರ ಯಾವುದೆಂದು ಆ ನಾರೀಮಣಿ ಸಾಕಷ್ಟು ಪೀಡಿಸಿದ ಮೇಲೆ ಕವಿಗಳಿಗೆ ಸಿದ್ಧಿದಾಯಕವಾದ ಆ ಮಂತ್ರದ ಗುಟ್ಟು ರಟ್ಟು ಮಾಡುತ್ತಾನೆ. "ಭವತಿ ಭಿಕ್ಷಾಂ ದೇಹಿ!" ಅಂತ. ಈ ಮಂತ್ರಕ್ಕೆ ಈ ದೇಶದಲ್ಲಿ ಅತ್ಯಂತ ಗೌರವದ ಸ್ಥಾನವಿದೆ. ಉಪನಿಷತ್ತಿನ ಋಷಿಗಳೆಂಬ ಆ ಸೂಪರ್ ಮಾಸ್ತರರು ಭಿಕ್ಷೆಯಿಂದಲೇ ಜೀವಿಸುತ್ತಿದ್ದರು. ಆದರೆ ಸ್ವತಃ ಭಿಕ್ಷೆಗೆ ಹೋಗದೆ ತಮ್ಮ ಶಿಷ್ಯರನ್ನು ಸುತ್ತಮುತ್ತಲಿನ ಊರುಗಳಿಗೆ ಕಳಿಸುತ್ತಿದ್ದರು ಅಷ್ಟೆ. ಶಿಷ್ಯರು ತಂದ ಭಿಕ್ಷೆಯಲ್ಲಿ ಒಂದು ಪಾಲನ್ನು ಮೊದಲು ಗುರುಗಳಿಗೆ ಕೊಡಬೇಕಾಗುತ್ತಿತ್ತು.

ಆ ಮೇಲೆ, ತಕ್ಷಶಿಲೆ, ವಿಕ್ರಮಶಿಲೆಗಳಲ್ಲಿ ಏನಿತ್ತೋ ನನಗೆ ಖಚಿತವಾಗಿ ಗೊತ್ತಿಲ್ಲ. ನಾಲಂದದ ಜಗತ್ಪ್ರಸಿದ್ಧ ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಶಿಷ್ಯರು ಸಪ್ತಾಕ್ಷರಿ ಮಂತ್ರದ ಪ್ರಯೋಜನವನ್ನು ಸಾಕಷ್ಟು ಪಡೆಯುತ್ತಿದ್ದರು ಮತ್ತು ಉಪನಿಷತ್ತಿನ ಋಷಿಗಳ ಪರಂಪರೆಯನ್ನು ಅನುಸರಿಸಿ ಗುರುಗಳು ಶಿಷ್ಯರನ್ನು ತಮ್ಮ ಪರವಾಗಿ ಪ್ರಾಕ್ಸಿಗಳಾಗಿ ಉಪಯೋಗಿಸುತ್ತಿದ್ದರೆಂಬುದಕ್ಕೆ ಆಧಾರವಿದೆ. ಮಾಸ್ತರ್ ಎಕ್‌ಸ್ಟ್ರಾ ಆರ್ಡಿನರಿ ಎಂದು ನಾವು ಕರೆಯಬಹುದಾದ ಪುರಂದರದಾಸರು ಕೂಡ ಗೋಪಾಳ ಬುಟ್ಟಿ ಹಿಡಿದವರೇ. "ಹೆಂಡತಿ ಸಂತತಿ ಸಾವಿರವಾಗಲಿ, ದಂಡಿಗೆ ಬೆತ್ತ ಹಿಡಿಸಿದಳಯ್ಯ" ಅಂತ ಅವರು ಸಪ್ತಾಕ್ಷರಿ ಮಂತ್ರೋಪದೇಶ ಮಾಡಿದ ಹೆಂಡತಿಗೆ ಧನ್ಯವಾದ ಹೇಳಿದ್ದಾರೆ. ಗೌತಮಬುದ್ಧ, ಮಹಾವೀರಜಿನ, ಶಂಕರಾಚಾರ್ಯ ಮೊದಲಾದ ಮಹಾ ಗುರುಗಳೆಲ್ಲ ಹೆಮ್ಮೆಯಿಂದ ಪಠಿಸಿದ ಮಂತ್ರ ಇದು. ಪುರಂದರದಾಸರಿಗೆ ಗೋಪಾಳ ಬುಟ್ಟಿ ಹಿಡಿಸಿದವಳು ಹೆಂಡತಿಯಾದರೆ, ಆಂಧ್ರದ ಆಧುನಿಕ ಗುರುಗಳಿಗೆ ಸರಕಾರವೇ ಅದನ್ನು ಹಿಡಿಸಿತಷ್ಟೇ.

ಆಂಧ್ರದ ಈ ಗುರುಗಳು ಉಪನಿಷತ್ ಋಷಿಗಳ ಹಾದಿಯನ್ನನುಸರಿಸಿ ಶಿಷ್ಯರಿಂದ ಭಿಕ್ಷೆ ಎತ್ತಿಸುವುದಿಲ್ಲವೇಕೆ? ಎಂದೊಬ್ಬರು ನನಗೆ ಕೇಳಿದರು, ಕಲಿಯುಗದ ಶಿಷ್ಯರನ್ನು ನಂಬಲು ಅವರು ಸಿದ್ಧರಿರಲಿಕ್ಕಿಲ್ಲ ಎಂದು ನಾನು ಉತ್ತರ ಕೊಟ್ಟೆ. ಭಿಕ್ಷಾನ್ನವೆಲ್ಲ ಶಿಷ್ಯರ ಹೊಟ್ಟೆ ಸೇರಿ, ತಟ್ಟೆ ತೊಳೆಯುವ ಕೆಲಸ ಮಾತ್ರ ಗುರುಗಳಿಗೆ ಅಥವಾ ಗುರು ಪತ್ನಿಯರಿಗೆ ಬರಬಹುದು. ಕರ್ನಾಟಕದಲ್ಲಿಯೂ ಕೆಲ ಪ್ರದೇಶಗಳ ಮಾಸ್ತರ ಮಹಾಶಯರಿಗೆ ನಾಲ್ಕೈದು ತಿಂಗಳ ಸಂಬಳ ಬಂದಿಲ್ಲವಂತೆ. ಅವರೂ ಆಂಧ್ರದವರನ್ನು ಅನುಸರಿಸಬಾರದೇಕೆ? ಒಂದೇ ಭಯ ಅಂದರೆ, ಮಾಸ್ತರರು ಹೇಗೂ ಸಪ್ತಾಕ್ಷರಿ ಮಂತ್ರೋಪದೇಶ ಪಡೆದಿರುವುದರಿಂದ ಇನ್ನು ಅವರಿಗೆ ಸಂಬಳ ಕೊಡುವ ಅಗತ್ಯವೇ ಇಲ್ಲ ಅಂತ ಸರಕಾರ ತಿಳಿದುಕೊಳ್ಳಬಹುದು. ಗುರುಗಳಿಗೆಲ್ಲ ವರ್ಷಕ್ಕೊಂದು ಜೋಳಿಗೆ ಮತ್ತು ಒಂದು ಸೋರೆ ಬುರುಡೆ ಒದಗಿಸುವುದಷ್ಟೇ ತಮ್ಮ ಜವಾಬ್ದಾರಿಯೆಂದು ಅವರು ಹೇಳಬಹುದು.

ಇಂಗ್ಲಿಷಿನ ಬೆಗ್, ಸಂಸ್ಕೃತದ ಭಿಕ್ಷ ಎರಡೂ ಒಂದೇ ಮೂಲದ ಶಬ್ದಗಳು, ಆದರೆ

ಎರಡೂ ಭಾಷೆಗಳಲ್ಲಿ ಆ ಪದಗಳಿಗೆ ಇರುವ ಅರ್ಥ, ಗೌರವಗಳ ಅಂತರ ನೋಡಿರಿ. ಇಂಗ್ಲೀಷಿನಲ್ಲಿ Beg, borrow, steal ಅಂತ. ಭಿಕ್ಷೆ ಎಂಬುದು ಸಾಲ, ಕಳವುಗಳ ಸಾಲಿನಲ್ಲಿ ಸೇರುತ್ತದೆ. ಸಂಸ್ಕೃತ ಮತ್ತು ಅದರ ಉಪಭಾಷೆಗಳಲ್ಲಿ ಅದಕ್ಕಿರುವ ಗೌರವ ಎಷ್ಟು! ಇಡೀ ಭಾರತೀಯ ಸಂಸ್ಕೃತಿಯೇ ದಕ್ಷಿಣೆ ಮತ್ತು ಭಿಕ್ಷೆ ಎಂಬೆರಡು ಶಬ್ದಗಳ ಮೇಲೆ ನಿಂತಿದೆ. ಬ್ರಾಹ್ಮಣರು ಯಜ್ಞಗಳನ್ನು ಮಾಡಿಸಿ ತೆಗೆದುಕೊಳ್ಳುವುದು ದಕ್ಷಿಣೆ. ಸಂನ್ಯಾಸಿಗಳು ಏನೂ ಮಾಡದೆ ತೆಗೆದುಕೊಳ್ಳುವುದು ಭಿಕ್ಷೆ. ಬರಬರುತ್ತ ದಕ್ಷಿಣಾರ್ಥಿಗಳ ಪ್ರಭಾವ ಇಳಿಮುಖವಾಗಿ ಭಿಕ್ಷಾರ್ಥಿಗಳದು ಏರಿತು. ಬೌದ್ಧಯತಿಗಳು ಭಿಕ್ಷುಗಳಾದರು. ಜೈನರೂ ಹಾಗೆಯೇ. ಅವರು ಬ್ರಾಹ್ಮಣರಿಗಿಂತ ಹೆಚ್ಚು ಪ್ರೊಗ್ರೆಸ್ಸಿವ್ ಆಗಿದ್ದುದರಿಂದ ಜನರಲ್ಲಿ ಅವರಿಗೆ ಗೌರವ ಹೆಚ್ಚಾಯಿತು. ಅದರೊಡನೆ ಭಿಕ್ಷೆಗೂ ಎಷ್ಟು ಮರ್ಯಾದೆ ಬಂತೆಂದರೆ ಜಗತ್ತು ಸುಖದಲ್ಲಿದೆಯೋ, ಕಷ್ಟದಲ್ಲಿದೆಯೋ ಎಂಬುದನ್ನು ಅಳೆಯುವುದಕ್ಕೆ ಭಿಕ್ಷೆಯೇ ಅಳತೆಗೋಲಾಗಿ ಬಿಟ್ಟಿತು.

ಬರಗಾಲ ಅನ್ನುವುದು ದುರ್ಭಿಕ್ಷ ಎನಿಸಿತು. ಆಗ ಭಿಕ್ಷೆ ಸಿಗುವುದೂ ಕಷ್ಟ. ಬೆಳೆ ಚೆನ್ನಾಗಿ ಬಂದರೆ ಅದು ಸುಭಿಕ್ಷೆ. ಸುಲಭವಾಗಿ ಭಿಕ್ಷೆ ಸಿಗುತ್ತದೆ. ಜಗತ್ತಿನ ಬೇರಾವ ದೇಶದಲ್ಲಿ ದೇಶದ ಸುಖ ಕಷ್ಟಗಳನ್ನು ಭಿಕ್ಷೆಯಿಂದ ಅಳೆದು ನೋಡುವ ಸಂಪ್ರದಾಯವುಂಟೇ? ನಿಮಗೆ ಗೊತ್ತಿದ್ದರೆ ಹೇಳಿ, ಬೌದ್ಧಧರ್ಮವನ್ನು ಬ್ರಾಹ್ಮಣರು ಹೇಗೆ ಸೋಲಿಸಿದರು ಎಂಬ ಪ್ರಶ್ನೆಯ ಬಗ್ಗೆ ಇತಿಹಾಸಕಾರರು ಈಗ ನೂರು ವರ್ಷಗಳಿಂದ ತಲೆ ಚಚ್ಚಿಕೊಳ್ಳುತ್ತಿದ್ದಾರೆ. ಇದಕ್ಕೆ ಉತ್ತರ ಭಿಕ್ಷದಲ್ಲಿದೆಯೆಂದು, ಪಾಪ, ಪುಸ್ತಕ ಕೀಟಗಳಾದ ಅವರಿಗೆ ತಿಳಿದಿಲ್ಲ. ಬ್ರಾಹ್ಮಣರೂ ಕೆಲ ಭಿಕ್ಷುಗಳನ್ನು ಸಿದ್ಧ ಮಾಡಿದರು. ಜನಸಾಮಾನ್ಯರಿಗೆ ಇಬ್ಬರು ಭಿಕ್ಷುಗಳಲ್ಲಿ ಯಾರು ಮೇಲು ಎಂದೇ ತಿಳಿಯಲಿಲ್ಲ. ಆ ಭಿಕ್ಷುಗಳು ಹೇಳುತ್ತಿದ್ದುದೂ, ಈ ಭಿಕ್ಷುಗಳು ಹೇಳುತ್ತಿದ್ದುದೂ ಜನಸಾಮಾನ್ಯರಿಗೆ ಅರ್ಥವೇ ಆಗುತ್ತಿರಲಿಲ್ಲ. ಅದು ಅವರಿಗೆ ಬೇಕಾಗಿಯೂ ಇರಲಿಲ್ಲ. ಆದರೆ ಬೌದ್ಧರೂ, ಜೈನರೂ ಜನರಿಗೆ ಸ್ವಲ್ಪ ಸ್ವಲ್ಪವಾದರೂ ತಿಳಿಯುವ ಭಾಷೆಯಲ್ಲಿ ಮಾತಾಡುತ್ತಿದ್ದರು. ಬ್ರಾಹ್ಮಣರು ತಮ್ಮತಮ್ಮೊಳಗೊಂಡು ಯಾರಿಗೂ ತಿಳಿಯದ ಭಾಷೆಯಲ್ಲಿ ಮಾತಾಡುತ್ತಿದ್ದರು. ಸ್ವಾಭಾವಿಕವಾಗಿ ತಿಳಿಯದ ಭಾಷೆಯಲ್ಲಿ ಮಾತಾಡುವವರು ಶ್ರೇಷ್ಠರೆಂದು ಜನರು ತೀರ್ಮಾನಿಸಿದರು. ಇದು ಬ್ರಾಹ್ಮಣ ವಿಜಯದ ರಹಸ್ಯ. ಭಾರತೀಯ ಸಂಸ್ಕೃತಿ ತನ್ನ ಅತ್ಯುನ್ನತ ಶಿಖರವನ್ನು ಯಾವಾಗ ಮುಟ್ಟಿತು ಅಂತೀರಿ? ಭಿಕ್ಷವೇ 'ಧರ್ಮ' ಎನಿಸಿದಾಗ.

(೨೦-೧೦-೧೯೭೪)

೧೯. ಸಕ್ಕರೆ ಗೀತ

ಸಿಹಿ ವಸ್ತುಗಳಿಂದ ಕಹಿ ವಾತಾವರಣವುಂಟಾಗುವುದು ಅಸಂಬದ್ಧವಾಗಿ ತೋರಿದರೂ ಅಸಂಬದ್ಧಗಳ ಕಂತೆಯಾದ ಈ ಪ್ರಪಂಚದಲ್ಲಿ ಅದು ನಿತ್ಯ ಘಟನೆಯೇ. ಎಷ್ಟು ಸವಿತುಟಿಯ ಬಾಲೆಯರು ಕಟುತರ ಜಗಳಗಳನ್ನೆಬ್ಬಿಸಿಲ್ಲ? ಎಷ್ಟು ಜನರು ಸವಿನಾಲಿಗೆಗೆ ಮರುಳಾಗಿ ಕಹಿ ಫಲಗಳನ್ನು ಉಂಡಿಲ್ಲ?

ಆದ್ದರಿಂದ ಸಿಹಿ ಮಳಲಾದ ಸಕ್ಕರೆಯ (ಅಥವಾ ಅದರ ಅಭಾವದ) ದೆಸೆಯಿಂದ ದೇಶ ದಲ್ಲಿ ಕಹಿಕಹಿ ವಾದಗಳೇಳುವುದು ಅನಿಷ್ಟವಾದರೂ ಅಸ್ವಾಭಾವಿಕವಲ್ಲ. ಅಳಿಯ ದೇವರು ಮನೆಗೆ ಚಿತ್ತೈಸಿದಾಗ ಹೊತ್ತಲ್ಲದ ಹೊತ್ತಿನಲ್ಲಿ ಹೊರಗೆ ಕೂರುವ ಮಗಳ ಹಾಗೆ ಸಕ್ಕರೆ ಪೇಟೆಯಿಂದ ಮಾಯವಾಗಿಬಿಟ್ಟಿದೆ. ಇದಕ್ಕೆ ಮಾನ್ಯ ಮಂತ್ರಿ ರಫಿ ಅಹಮದರು ವರ್ತಕ ರನ್ನೂ, ವರ್ತಕರು ಸಾಗಾಟ ಮಾಡದ ರೈಲುಗಳನ್ನೂ ಕಹಿಕಹಿಯಾಗಿ ದೂರಿದ್ದಾರೆ. ಇಷ್ಟೆಲ್ಲ ಕಹಿಯ ನಡುವೆ ಸಕ್ಕರೆ ಯಾವುದಾದರೂ ಚಮತ್ಕಾರದಿಂದ ಪ್ರತ್ಯಕ್ಷವಾಗಿಯೇ ಬಿಟ್ಟರೆ ಅದೂ ಕಹಿಯಾಗಿಯೇ ರುಚಿಸಬಹುದೇ ಎಂದು ಸಂಶಯ ಬರುತ್ತಿದೆ.

ಆದರೆ ಲಾಂಗೂಲಾಚಾರ್ಯರ ಮಟ್ಟಿಗೆ ಇದೊಂದು ಸುದೈವದ ಅವಘಡವೇ ಆಗಿದೆ. ತಿಂಗಳಿನ ಅವಸಾನವನ್ನು ಚಾತಕದಂತೆ ಎದುರು ನೋಡುತ್ತಿರುವಾಗ ಮತ್ತು ಆ ಅವಸಾನ ಬೇಕೆಂದೇ ವಿಳಂಬ ಮಾಡುತ್ತಿರುವಾಗ, ಜೇಬು "ವಿಜಯ ವಿಠ್ಠಲನ ಗುಡಿ ಭಣಗುಡುವ ತೆರ ದಲ್ಲಿ" ರುವಾಗ, ಮನೆಯಲ್ಲಿ ಅರ್ಧ ಮಣ ಸಕ್ಕರೆಗೆ ಇಂಡೆಂಟ್ ಆಗಿರುವಾಗ, ಆಚಾರ್ಯರು ಪೇಟೆಯ ದಿಕ್ಕಿಗೆ ಮುಖ ಮಾಡಲಿಕ್ಕೂ ಅಂಜುತ್ತಿರುವಾಗ "ಸಕ್ಕರೆ ಇಲ್ಲ" ಎಂಬ ಸುದ್ದಿಯನ್ನು ಓದಿ, ಅವರಿಗೆ ವಾರ ಭವಿಷ್ಯದಲ್ಲಿ "ಆಕಸ್ಮಿಕ ಧನಲಾಭ" ಎಂದು ಬರೆದದ್ದು ಕೊನೆಗೊಮ್ಮೆ ನಿಜವಾದಂತೆ ಆನಂದವಾಯಿತು. ಆಚಾರ್ಯಾಣಿಯವರಿಗೆ ಆಚಾರ್ಯರು ಈ ಸುದ್ದಿಯನ್ನು, ಸಾಧ್ಯ ವಿದ್ದಷ್ಟು ಅಳುಮೋರೆ ಮಾಡಿಕೊಂಡು ತಲುಪಿಸಿದರು. ಒಂದು ಕ್ಷಣ ಅವರು ಇವರನ್ನು ಇವರೇ ಈ ಸುದ್ದಿ ಅಥವಾ ಶರ್ಕರಾಭಾವವನ್ನು ಸೃಷ್ಟಿಸಿರಬಹುದೇ ಎಂಬ ಸಂಶಯದಿಂದ ನೋಡಿದರು. ಆದರೆ ಮುಖದ ನಿರ್ವಿಣ್ಣ ಕಳೆಯನ್ನು ಕಂಡು ಸುದ್ದಿ ಸತ್ಯವೆಂದು ಮನ ಗಂಡರು.

ಆಗ ಆಚಾರ್ಯರ ಆನಂದೋತ್ಸಾಹವು ಈ ಕೆಳಗಿನಂತೆ ಕವಿತಾರೂಪವಾಗಿ ಹೊರ ಹೊಮ್ಮಿತು:

ಸಕ್ಕರೇ!
ನಿನ್ನ ಮೇಲೆ ನನಗದೆಷ್ಟು
ಅಕ್ಕರೇ!
ಗೊತ್ತೆ ನಿನಗೆ ಸಕ್ಕರೇ,
ಓ ಸಕ್ಕರೇ!
ಉದರಿಯಿಂದ ಸಿಕ್ಕರೆ
ಅಥವ ಕೈಗಡವು ದೊರೆವ
ಲಕ್ಕ'ರೇ*

ನನ್ನ ಮೆಚ್ಚಿ ಸಕ್ಕರೆ,
ನಿನ್ನ ತಂದು ಚೊಕ್ಕ... ರೇ!
ಹಬ್ಬ ಮಾಳ್ಪೆನೆಂಬದಿದ್ದರೇ,
ಪೇಟೆಗೆಂಬದೆದ್ದರೇ,
ಎಲಗೆ ಸಕ್ಕರೇ!
ಅಕ್ಕಟ, ಎಂಥ ದುಕ್ಕ .. ರೇ!
ಎಷ್ಟು ರೊಕ್ಕ...' ರೇ!
ಕೊಡುವೆನೆಂದರೂನು ಸಿಕ್ಕದೇ
ಯಾವ ಮೂಲೆ ಹೊಕ್ಕಿದೆ,
ಸವಿಯ ಸಕ್ಕರೇ!
ಹಬ್ಬಕಾಯ್ತೆ ನಮಗೆ ಬರೀ
ಚಟ್ನಿ ಭಕ್ಕರೆ?

ಇಷ್ಟು ಕವನಿಸಿದ ಮೇಲೆ ಲಾಂಗೂಲಾಚಾರ್ಯರ ಹತ್ತಿಕ್ಕಿದ ಕಮ್ಯೂನಿಜಂ ಒಮ್ಮೆಲೇ ಪ್ರಾಸ ಬದ್ಧವಾಗಿ ಹೊರಬಿದ್ದು ಕವಿತೆಯನ್ನು ಹೀಗೆ ಪೂರ್ತಿಗೊಳಿಸಿತು:

ಅಲಲಲಲಲ ಠಕ್ಕರೇ
ಬಂಡ್ವಾಳಶಾಹಿ ಸೊಕ್ಕರೇ!
(ಧ್ಯಾನಮಾಳ್ಪ ಕೊಕ್ಕರೇ!)
ಜನತೆಯೆದ್ದು ನಿತ್ತರೇ
ನಿಮ್ಮ ತಿಕ್ಕಿ ಮುಕ್ಕರೇ?
ಕೈಗೆ ಮಾತ್ರ ಸಿಕ್ಕರೇ,
ಆಗ ನೀವು ತಿಂದುದೆಲ್ಲ ಕಕ್ಕಿರೇ?
ಸೇಠುಗಳಿಗೆ ಧಿಕ್ಕು ರೇ!
ನಮ್ಮ ಜನ್ಮಸಿದ್ಧ ಹಕ್ಕು ರೇ!
ಲಕ್ಕ' ರೇ ಲಕ್ಕಾದರೂ, ಸುದೈವವಾದರೂ
ಚೊಕ್ಕ' ರೇ ಚೊಕ್ಕವಾಗಿಯಾದರೂ
ರೊಕ್ಕ' ರೇ ರೊಕ್ಕವಾದರೂ

೨೦. ಸಾಹಿತ್ಯದ ಒಂದು ಅದ್ಭುತ

ಒಂದು ಕಪಿಯನ್ನು ಟೈಪ್‌ರೈಟರಿನ ಗುಂಡಿಗಳನ್ನು ಯದ್ವಾತದ್ವಾ ಬಡಿಯುವದಕ್ಕೆ ತರಬೇತು ಮಾಡಿದರೆ ಮತ್ತು ಅದಕ್ಕೆ ಸಾಕಷ್ಟು ವರ್ಷಗಳ ಅವಕಾಶವನ್ನು ಕೊಟ್ಟರೆ ಅದು ಮಹಾಕವಿ ಶೇಕ್‌ಸ್ಪಿಯರನ ಎಲ್ಲಾ ನಾಟಕಗಳನ್ನು ತನಗರಿಯದೆಯೇ ಟೈಪ್ ಮಾಡಿ ಕೊಡಬಹುದು ಎಂಬುದಾಗಿ ಒಬ್ಬ ರಸಿಕ ಗಣಿತ ಶಾಸ್ತ್ರಿ ಗಣಿತ ಶಾಸ್ತ್ರದಲ್ಲಿ ಆಕಸ್ಮಿಕತೆಯ ತತ್ವವನ್ನು ವಿವರಿಸುತ್ತ ಹೇಳಿದ್ದಾನೆ. ಮಹಾಕಪಿಗಳನ್ನು ಮಹಾಕವಿಗಳನ್ನಾಗಿ ಮಾಡುವದಕ್ಕೆ ಬೇಕಾಗಿರುವದು ಸಾಕಷ್ಟು ಕಾಲಾವಧಿ ಮಾತ್ರ. ಆದರೆ ಈ ಗಣಿತ ಶಾಸ್ತ್ರಿಯ ಲೆಕ್ಕಾಚಾರ ನವ್ಯ ಕಲೆಗೆ ಅನ್ವಯಿಸುವದಿಲ್ಲವೆಂದು ತೋರುತ್ತದೆ. ಅಮೇರಿಕದ ಕನ್ಸಾಸ್‌ನಲ್ಲಿರುವ ಒಂದು ಮನೋರಂಜನ ಕ್ಲಬ್ಬಿನವರು ಏರ್ಪಡಿಸಿದ ಒಂದು ಕಲಾಸ್ಪರ್ಧೆಯಲ್ಲಿ ಒಂದು ಬಾಲವಿಲ್ಲದ ಕಪಿಯ ಚಿತ್ರಕ್ಕೆ ಪ್ರಥಮ ಬಹುಮಾನ ಸಿಕ್ಕಿತು. ನವ್ಯ ಕಲೆಯಲ್ಲಿ ಮನುಷ್ಯರನ್ನು ಕಪಿ ಸೋಲಿಸಿತು. ಇದಕ್ಕೂ ಆಶ್ಚರ್ಯ ಪಡಬೇಕಾಗಿಲ್ಲ. ಮನುಷ್ಯನೂ ಬಾಲವಿಲ್ಲದ ಕಪಿಯೇ ತಾನೆ. ಇಷ್ಟೇ ಮನುಷ್ಯ ಕೆಲ ಸಾವಿರ ವರ್ಷಗಳ ಹಿಂದೆ ನೆಲಕ್ಕಿಳಿದು ಬಂದವನು. ಬಹುಮಾನಿತ ಓರಂಗ್ ಉಟಾಂಗ್ ಕಪಿ ಇನ್ನೂ ಮರಗಳಲ್ಲೇ ವಾಸಿಸುತ್ತಾನೆ.

ನನ್ನ ಕೇಳಿದರೆ ಓರಂಗ್ ಉಟಾಂಗ್ ಇಲ್ಲವೆ ಮತ್ತಾವ ಕಪಿಯ ಹತ್ತಿರ ಒಂದು ಟೈಪ್ ರೈಟರ್ ಕೊಟ್ಟರೆ ಶೇಕ್‌ಸ್ಪಿಯರ್‌ನ ನಾಟಕಗಳನ್ನು ಟೈಪು ಮಾಡಿಕೊಡುವದಕ್ಕೆ ಅದಕ್ಕೆ ಎಷ್ಟೇ ವರ್ಷಗಳು ಬೇಕಾಗಲಿ, ಅದು ಬಹು ಬೇಗನೆ ಕೆಲ ನವ್ಯ ಕವಿತೆಗಳನ್ನು ಉತ್ಪಾದಿಸಿ ಕೊಡುವದು ಖಂಡಿತ. ಈಚೆಗೆ ನನ್ನ ನವ್ಯಕವಿ ಮಿತ್ರರೊಬ್ಬರು ಪತ್ರಿಕೆಗಳ ಹೆಡ್‌ಲೈನುಗಳಿಂದ ಶಬ್ದಗಳನ್ನು ಯದ್ವಾತದ್ವಾ ಕತ್ತರಿಸಿ ಯದ್ವಾತದ್ವಾ ಹಚ್ಚಿ ಲಬ್ಧವಾದ ಪರಿಣಾಮವನ್ನು ಪ್ರಕಟಿಸಿದರು. ಈ ಕವಿತೆಯ ಬಗ್ಗೆ ಭಾರಿ ಚರ್ಚೆ ನಡೆಯಿತು. ನಾನೂ ಅದನ್ನೋದಿದೆ. ಏನೂ ಅರ್ಥವಾಗಲಿಲ್ಲ. ಇದು ಶ್ರೇಷ್ಠ ಕವಿತೆಯೇ ಇರಬೇಕೆಂಬ ತೀರ್ಮಾನಕ್ಕೆ ಬಂದೆ. ಏಕೆಂದರೆ ಆವರೆಗೆ ನಾನು ಓದಿದ್ದ ಅನೇಕ ನವ್ಯ ಕವಿತೆಗಳಲ್ಲಿ ಪ್ರತಿಯೊಂದೂ ನನಗೆ ಕಬ್ಬಿಣದ ಕಡಲೆಯಾಗಿದ್ದರೂ ಅದು ಕಬ್ಬಿಣದ್ದೇ ಕಡಲೆ ಎಂಬಷ್ಟಾದರೂ ತಿಳಿದಿತ್ತು. ಇದು ಏನೆಂಬುದೇ ತಿಳಿಯಲಿಲ್ಲ. ಇದು ಅತ್ಯುನ್ನತ ಮಟ್ಟದ್ದಾಗಿರದಿದ್ದರೆ ಹೀಗಾಗಲು ಕಾರಣವೇ ಇರಲಿಲ್ಲ. ಅದನ್ನು ಪ್ರಶಂಸಿಸಿ ಒಂದು ವಿಮರ್ಶೆ ಬರೆದು ಕಳಿಸಬೇಕೆಂದು ನನಗೆ ಆಸೆಯಿತ್ತು. ಆದರೆ ನನಗೆ ಅರ್ಥವಾಗದ್ದನ್ನು ಕುರಿತು ಯಾರಿಗೂ ಅರ್ಥವಾಗದ ಹಾಗೆ ವಿಮರ್ಶೆ ಬರೆಯುವ ಕಲೆ ನನಗೆ ಗೊತ್ತಿಲ್ಲ. ನನಗೆ ಅರ್ಥವಾಗದ್ದನ್ನು ಕುರಿತು ಬರೆಯುವುದಕ್ಕೆ ಹೋದಾಗಲೆಲ್ಲ ನನಗೆ ಅರ್ಥವಾಗಿಲ್ಲ ಎಂಬ ಅಂಶ ಬಹಿರಂಗವಾಗಿ ಬಿಡುತ್ತದೆ. ಇದು ವಿಮರ್ಶಕನಿಗೆ ಒಳ್ಳೇ ಗುಣವಲ್ಲ.

ಆದರೂ ಒಂದಲ್ಲ ಒಂದು ದಿನ ನಾನು ಶ್ರೇಷ್ಠ ನವ್ಯ ವಿಮರ್ಶಕನಾಗುವೆನೆಂಬ ಆಶೆ ನನಗಿದೆ. ಸದ್ಯಕ್ಕಿರುವ ತೊಂದರೆ ಎಂದರೆ, ನವ್ಯ ಕಲೆ, ನವ್ಯ ಕವಿತೆಗೆ ನಮಗೆ ತಿಳಿದ ಹಾಗೆ ಅರ್ಥವಿರಬೇಕೆಂಬ ನಿಯಮವಿಲ್ಲದಿದ್ದರೂ ನವ್ಯ ವಿಮರ್ಶೆಯಲ್ಲಿ ಅರ್ಥವಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಇದು ಬಹಳ ಕಾಲ ಉಳಿಯಲಿಕ್ಕಿಲ್ಲ. ಕವಿತೆಯನ್ನು ಉತ್ತರೋತ್ತರವಾಗಿ ಕಥೆಯ, ಛಂದಸ್ಸಿನ, ಗೇಯತೆಯ, ತಾಳದ ಬಂಧನದಿಂದ ವಿಮೋಚನೆ ಮಾಡಿದ ಹಾಗೆಯೇ

ವಿಮರ್ಶೆಯನ್ನು ಅರ್ಥದ ಸೆರೆಯಿಂದ ಬಿಡುಗಡೆ ಮಾಡುವ ಪುರೂರವ ಯಾರಾದರೊಬ್ಬ ಹುಟ್ಟಿಯೇ ತೀರುವನೆಂದು ನನಗೆ ಭರವಸೆ ಇದೆ. ಆಮೇಲೆ ನಾನು ದಿನ ಪತ್ರಿಕೆಗಳಿಂದ ಕಣ್ಣುಚ್ಚಿ ಪಂಕ್ತಿಗಳನ್ನು ಕತ್ತರಿಸಿ ಜೋಡಿಸಿ ಅದ್ಭುತವಾದ ನವ್ಯ ವಿಮರ್ಶೆಗಳನ್ನು ತಯಾರಿಸುವೆ. ಅದು ಕನ್ನಡ ಸಾಹಿತ್ಯದಲ್ಲಿ ನನ್ನ ಹೆಸರನ್ನು ಅಜರಾಮರವಾಗುವುದರಲ್ಲಿ ಸಂಶಯವಿಲ್ಲ. ಅಷ್ಟರ ವರೆಗೆ ನಾನು ಹೊಸ ರೀತಿಯಲ್ಲಿ ನವ್ಯಕಾವ್ಯವನ್ನು ಸೃಷ್ಟಿಸುತ್ತಿದ್ದೇನೆ. 'ಕರ್ಮವೀರ' ಪತ್ರಿಕೆಯ ಪ್ರತಿ ಪುಟದ ಪ್ರತಿ ಸಾಲಿನ ಮೊದಲನೇ ಶಬ್ದವನ್ನು ಕತ್ತರಿಸಿ ಒಂದು ದೊಡ್ಡ ಡ್ರಮ್ಮಿನಲ್ಲಿ ಹಾಕು ಡುತ್ತಿದ್ದೇನೆ. ಹೀಗೆ ಈವರೆಗೆ ೪೦ ಸಾವಿರ ಶಬ್ದಗಳು ಅದರಲ್ಲಿ ಜಮಾ ಆಗಿವೆ. ಅವುಗಳನ್ನೆಲ್ಲಾ ಒಂದು ಕೋಲಿನಿಂದ ಚೆನ್ನಾಗಿ ಪ್ರತಿದಿನ ಬೆಳಿಗ್ಗೆ ಕಲಸುತ್ತಿದ್ದೇನೆ, ನನ್ನ ಮೂರು ವರ್ಷದ ಮೊಮ್ಮಗನನ್ನು ಡ್ರಮ್ಮಿನೊಳಗೆ ಇಳಿಸಿ ಅವನಿಂದ ಒಂದೊದೇ ಶಬ್ದವನ್ನು ಲಾಟರಿ ಎತ್ತಿದಂತೆ ಎತ್ತಿಸುತ್ತಿದ್ದೇನೆ. ಅವನು ಯಾವ ವರಸೆಯಲ್ಲಿ ಶಬ್ದಗಳನ್ನು ಎತ್ತಿಕೊಟ್ಟನೋ ಅದೇ ವರಸೆ ಯಲ್ಲಿ ಒಂದು ಆಲ್ಬಮ್ಮಿನಂಥ ಪುಸ್ತಕದಲ್ಲಿ ಹಚ್ಚಿಡುತ್ತಿದ್ದೇನೆ. ಹೀಗೆ ಎರಡು ಸಾವಿರ ಪದಗಳ ಐದು ಪದ್ಯಗಳು ಸಿದ್ಧವಾಗಿವೆ. ಅವು ಪ್ರಕಟವಾದಾಗ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಉತ್ಪಾತವೇ ಆಗಲಿದೆಯೆಂದು ಭರವಸೆ ಕೊಡುತ್ತೇನೆ.

ಈ ಕವಿತೆಗಳ ಮಾದರಿ ಪಂಕ್ತಿಗಳನ್ನು ಮೊದಲೇ ಪ್ರಕಟಿಸಿ ಬೆಕ್ಕನ್ನು ಚೀಲದಿಂದ ಹೊರ ಬಿಡುವ ಇಚ್ಛೆ ನನಗಿಲ್ಲ. ಆದರೆ ಕೆಲ ಸಂಗತಿಗಳನ್ನು ಬಹಿರಂಗಪಡಿಸಲಡ್ಡಿಯಿಲ್ಲ. ನಾನು ಈ ಲೇಖನದ ಪ್ರಾರಂಭದಲ್ಲಿ ಪ್ರಸ್ತಾಪಿಸಿದ ರಸಿಕ ಗಣಿತ ಶಾಸ್ತ್ರಿಯ ಹೇಳಿಕೆ ಸುಳ್ಳಲ್ಲ. ನನ್ನ ಮತ್ತು ನನ್ನ ಮೊಮ್ಮಗನ ಈ ಜಂಟಿ ಕವಿತೆಯಲ್ಲಿ ಕುವೆಂಪು ರಾಮಾಯಣ ದರ್ಶನದ ಕೆಲವು ಸಾಲುಗಳೂ, ಬೇಂದ್ರೆಯವರ 'ನಿರ್ಭಯಾ ನಿನ್ನ ನಾಡಿಸ್ಪಂದ' ಎಂಬ ಕವಿತೆಯ ಒಂದು ಸಾಲೂ, ಅಡಿಗರ ಚಂಡೆ ಮದ್ದಲೆಯ ಅರ್ಧಸಾಲೂ ಸ್ವಯಂ ಪ್ರೇರಣೆಯಿಂದ ನಿರ್ಮಾಣವಾ ಗಿವೆ. ಇನ್ನೊಂದು ಆಶ್ಚರ್ಯವೆಂದರೆ ಅತ್ಯಂತ ಮಡಿವಂತ ಪತ್ರಿಕೆಯಾದ ಕರ್ಮವೀರದ ಪದ ಗಳಿಂದ ರಚಿಸಲ್ಪಟ್ಟ ಈ ಕವಿತೆಗಳಲ್ಲಿ ಡಿ.ಎಚ್. ಲಾರೆನ್ಸ್, ನಾರ್ಮನ್, ಮೇಲರ್ ವ್ಲಾಡಿ ಮೀರ್, ನವ ಕೋಪರನ್ನು ನಾಚಿಸಬಹುದಾದ ಕೆಲ ಅಶ್ಲೀಲ ಸಾಲುಗಳು ತಯಾರಾಗಿ ರುವುದು. ಇದು ಹೇಗೆ ಸಾಧ್ಯವಾಯಿತೆಂದು ನನಗೆ ಆಶ್ಚರ್ಯವಾಗದಿರಲಿಲ್ಲ. ಕೊನೆಗೆ ಸಮಸ್ಯೆ ಬಗೆಹರಿಯಿತು. ಕಂಪೋಜಿಟರರು ಶಬ್ದಗಳನ್ನು ಒಡೆದು ಅರ್ಧವನ್ನು ಮುಂದಿನ ಸಾಲು ಗಳಿ ಗೊಯ್ಯುತ್ತಾರಲ್ಲ, ಈ ಮಡಿ ಶಬ್ದಗಳ ತುಣುಕುಗಳು ಒಂದಕ್ಕೊಂದು ಆಕಸ್ಮಿಕವಾಗಿ ಸೇರಿದಾಗ ಅದ್ಭುತವಾದ ಅಶ್ಲೀಲ ಪಂಕ್ತಿಗಳು ಸೃಷ್ಟಿಯಾಗಿವೆ.

ಇಂಥ ಹತ್ತು ಪದ್ಯಗಳು ತಯಾರಾದೊಡನೆ ಪ್ರಥಮ ಸಂಕಲನ ಪ್ರಕಟವಾಗುವುದು. ಬೆಲೆ ರೂ. ೧೮.೫೦ ಮಾತ್ರ, ಪುಸ್ತಕದ ಹೆಸರು 'ಅರ್ಥ-ಅನರ್ಥ'. ಕರ್ತೃಗಳು ಲಾಂಗೂಲಾಚಾರ್ಯ ಮತ್ತು ಪೌತ್ರ, ಇದು ನವ್ಯ ಕವನ ಸಂಪ್ರದಾಯದಲ್ಲಿ ಚರಮ ಶಬ್ದವಾಗಲಿದೆ. ತ್ವರೆ ಮಾಡಿರಿ.

(೭-೩-೧೯೭೦)

೨೧. 'ಇಸು' ಸಮೃದ್ಧಿ!

ಶ್ರೀ ಗೋವಿಂದ ಪೈಗಳು ಕನ್ನಡ ಭಾಷೆಯ ಶಬ್ದಸಂಪತ್ತಿಯನ್ನು ಬೆಳೆಸಿಕೊಳ್ಳುವ ವಿಧಾನಗಳನ್ನು ತಮ್ಮ ಸಮ್ಮೇಲನಾಧ್ಯಕ್ಷ ಭಾಷಣದಲ್ಲಿ ಸೂಚಿಸಿದ್ದಾರೆ. ಅವರು ಕೊಟ್ಟ ಕೆಲ ಉದಾಹರಣೆಗಳು: "ಸವ್ಯಸಾಚಿಸು"- ಎರಡೂ ಕೈಯಗ್ಗಳಿಂದಲೂ ಬಾಣಗಳನ್ನು ಎಸೆ, ಕೆಳಗಿಸು-ಕೈಗರೆ ಇಳಿಸು, ಇತ್ಯಾದಿ ಇತ್ಯಾದಿ. ತುಂಬ ಉಪಯುಕ್ತ ಸಂಗತಿ.

ಇದನ್ನು ಅಕ್ಷರಶಃ ಅನುಸರಿಸಿದರೆ ಆಗುವ ಅದ್ಭುತ ಪರಿಣಾಮಗಳನ್ನು, ಕಂಡು ನನಗೆ ಅತ್ಯಂತ ಕೌತುಕವಾಯಿತು. ನೋಡಿರಿ: ಶ್ರೀ ಗೋವಿಂದ ಪೈಗಳು ಮುಂಬಯಿಗೆ ಹಡಗಿಯಲ್ಲಿ ಹೋದರಂತೆ, ಎನ್ನುವುದಕ್ಕೆ ನೀವು ಶ್ರೀ ಗೋವಿಂದ ಪೈಗಳು ಮುಂಬಯಿಗೆ ಹಡಗಿಸಿದರಂತೆ ಎನ್ನಬಹುದು. ನಾನು ಮಂಜೇಶ್ವರಕ್ಕೆ ಅರ್ಧದಾರಿ ಮೋಟಾರಿನಲ್ಲಿ ಹೋಗಿ ಆಮೇಲೆ ರೈಲಿನಲ್ಲಿ ಹೋದೆ, ಎನ್ನುವುದಕ್ಕೆ ಅರ್ಧದಾರಿ ಮೋಟರಿಸಿಸಿ (ಮೋಟರಿಸಿ ಅಲ್ಲ, ಹಾಗೆ ಹೇಳಿದ್ದರೆ ನಾನೇ ಮೋಟಾರು ಹೊಡೆದೆ ಎಂದರ್ಥವಾದೀತು) ಆ ಮೇಲೆ ರೈಲಿಸಿಸಿದೆ ಎನ್ನಬಹುದು. ಗೋವಿಂದ ಪೈಗಳು ಭಾಷಣಿಸಿದರು, ನಾನು ಲೇಖನಿಸಿದೆ. ಅವರ ಮನೆ ಬಾಗಿಲಿಲಿಸಿತ್ತು ಎಂದರೆ ಬಾಗಿಲು ಮುಚ್ಚಿತ್ತು ಎಂದು ನಾವು ಅರ್ಥಮಾಡಿಕೊಳ್ಳಬಹುದು. ನಾನು ಮನೆಯಿಂದ ಹೊರಡುವಾಗ ಶ್ರೀಮತಿ ಲಾಂಗೂಚಾರ್ಯರಿಗೆ ಬಾಗಿಲಿಸಿಕೊಳ್ಳಲು ಹೇಳಿದೆ ಎಂದರೆ ಮುಚ್ಚಿಕೊಳ್ಳ ಹೇಳಿದೆ ಎಂದರ್ಥವಾದರೆ, ಮನೆಗೆ ಹೋಗಿ "ಬಾಗಿಲಿಸೇ" ಎಂದು ಕೂಗಿದರೆ "ಬಾಗಿಲು ತೆರೆ" ಎಂದ ಹಾಗಾಗುತ್ತದೆ. ಅರ್ಥಾತ್ ಬಾಗಿಲು ಹಾಕಿಕೊಂಡಿದ್ದಾಗ "ಬಾಗಿಲಿಸು" ಧಾತುವಿಗೆ ತೆರೆ ಎಂದೂ, ಮುಚ್ಚಿಕೊಂಡಿದ್ದಾಗ ಅದಕ್ಕೇ ಇಕ್ಕಿಕೊ ಎಂದೂ ಅರ್ಥವಾಗುವುದು. ನಾನು ಕುದುರಿಸಿದರೆ ಆ ಪ್ರಾಣಿಯ ಮೇಲೆ ಸವಾರಿ ಮಾಡಿದಂತೆ, ಕತ್ತಿಸಿ ಎಂದರೆ ಆ ಪ್ರಾಣಿಯ ಮೇಲೆ ಸವಾರಿ ಮಾಡಿದಂತೆ (ಅದರ ಹಾಗೆ ಹಾಡಿದಂತೆ ಎಂದೂ, ಒದ್ದಂತೆ ಎಂದೂ ಸಂದರ್ಭಾನುಸಾರ) ಅರ್ಥವಾಗುವುದು.

ಈ ಇಸು ಪ್ರತ್ಯಯ ಬಲದಿಂದ ನಾವು ಅಸಾಧ್ಯ ಚಮತ್ಕಾರಗಳನ್ನು ಸಾಧಿಸಬಹುದು. ಉದಾಹರಣೆಗಾಗಿ: ಹುಬ್ಬಳ್ಳಿ ಮುಂಬಯಿಸಿತು ಎಂದರೆ ಹುಬ್ಬಳ್ಳಿಯಲ್ಲಿ ಮುಂಬಯಿಯಂಥ ಜನದಟ್ಟಣೆಯಾಯಿತು. ಅಲ್ಲಿಯಂತೆ ಇಲ್ಲಿಯೂ ಕಾಲ್ದಾರಿಗಳ ಮೇಲೆ ಜನರು ಸಂಸಾರ ಮಾಡುತ್ತಾರೆ ಎಂದಾಗುವುದು. ಇಷ್ಟೇ ಶಬ್ದಗಳಿಂದ ಇಷ್ಟು ಕಪಾಳಕ್ಕೆ ಹೊಡೆದಂತೆ ಅರ್ಥವನ್ನು ಹೊಳೆಸಲು ಬೇರೇನು ಉಪಾಯವಿದೆ? ಜನರು ಹೊರಗೆ ಏಕಾದಶಿಸುತ್ತಿರುವಾಗ ಅಧಿಕಾರಿಗಳು ಒಳಗೆ ದ್ವಾದಶಿಸುತ್ತಿದ್ದಾರೆ (ಅಥವಾ ಅದಕ್ಕೂ ಅರ್ಥಪೂರ್ಣವಾಗಿರಬೇಕಾದರೆ ದಶಮಿಸುತ್ತಿದ್ದಾರೆ) ಎಂದು ಹೇಳಿದರೆ ನಿಮ್ಮ ಮನಸ್ಸಿನಲ್ಲಿದ್ದುದನ್ನು ಎಲ್ಲಕ್ಕೂ ಚೆನ್ನಾಗಿ ಪ್ರದರ್ಶಿಸಿದಂತಾಗುವುದು.

ಮಂದಿಯ ಕೆಲಸದಲ್ಲಿ ಮೂಗಿಸುವವನು ಅಧಿಕ ಪ್ರಸಂಗಿ. ಈ ಪ್ರಕಾರ ಶಬ್ದಸೃಷ್ಟಿ ಮಾಡಿದರೆ ಸಮುದ್ರಗಟ್ಟಳೆ ಮಸಿ, ಗಾವುದಗಟ್ಟಳೆ ಕಾಗದ ಉಳಿಯುವುದು ಎಂದು ಬರ್ನಾರ್ಡ್‌ಶಾ ಭಾಷೆಯಲ್ಲಿ ಹೇಳಲಡ್ಡಿಯಿಲ್ಲ, ಆದರೆ ಅದರಿಂದ ಉಳಿಯುವ ಶತಮಾನಗಟ್ಟಳೆ ಸಮಯದಲ್ಲಿ ನಮ್ಮ ಲೇಖಕರು ಇನ್ನಷ್ಟು ಪುಸ್ತಕ ಬರೆದರೇನು ಗತಿ?!

೨೨. ಮಂತ್ರಿಗಳು ಮತ್ತು ಅವರ ವಾಕ್ ಸ್ವಾತಂತ್ರ್ಯ

ನಮ್ಮ ದೇಶದಲ್ಲಿ ರಾಜಕರಾಣಿಗಳಿಗೆ ಅದರಲ್ಲಿಯೂ ಕಾಂಗ್ರೆಸ್ಸಿನವರಿಗೆ, ಅದರಲ್ಲಿಯೂ ಶಾಸಕರಿಗೆ, ಅದರಲ್ಲಿಯೂ ಮಂತ್ರಿಗಳಿಗೆ ಯೋಚನೆ ಮಾಡದೆ ಮಾತಾಡುವ ಏಕಸ್ವಾಮ್ಯ ಇರುವಾಗ ಕೆಲವೇ ಮಂತ್ರಿ ಮಹನೀಯರ ಸಿಲ್ಲೀ ಭಾಷಣಗಳನ್ನು ಮಾತ್ರ ಜನರು ಎತ್ತಿಕೊಂಡು ಯಾಕೆ ಎಗರಾಡುತ್ತಾರೋ ತಿಳಿಯದು. ಉದಾಹರಣೆಗೆ ನಮ್ಮ ಪೌರಾಡಳಿತ ಮಂತ್ರಿ ಬಸವಲಿಂಗಪ್ಪನವರು ಏನು ಮಾತಾಡಿದರೂ, ಏನು ಮಾಡಿದರೂ ನುಡಿ ತಪ್ಪು, ನಡೆತಪ್ಪು ಹಿಡಿದು ಜನರು ಆಕಾಶವೇ ಕಳಚಿ ಬಿದ್ದಂತೆ ಕೂಗುತ್ತಾರೆ. ಗೌತಮಬುದ್ಧನಿಂದ ಹಿಡಿದು ಕುವೆಂಪುವರೆಗೆ, ಎಲ್ಲರೂ ಬ್ರಾಹ್ಮಣರನ್ನು ಟೀಕಿಸುತ್ತ ಬಂದಿದ್ದಾರೆ. ಬ್ರಾಹ್ಮಣರನ್ನು ಬೈಯುವುದರಲ್ಲಿ ಇವರಾರೂ ಬ್ರಾಹ್ಮಣರನ್ನು ಮೀರಿಸಲು ಸಾಧ್ಯವಿಲ್ಲ ಎನ್ನುವ ಹಾಗೆ ಬ್ರಾಹ್ಮಣರೇ ಬೈದಿದ್ದಾರೆ. ಇದೆಲ್ಲ ನಮ್ಮ ಜನರ ಹೆಪ್ಪುಗಟ್ಟಿದ ಸರೋವರದಂಥ ಬುದ್ಧಿಯಲ್ಲಿ ಒಂದು ಅಲೆಯನ್ನು ಎಬ್ಬಿಸಲು ಸಮರ್ಥವಾಗಿಲ್ಲ.

ಡಿಡಿಟಿಯನ್ನು ನುಂಗಿ ದಕ್ಕಿಸಿಕೊಳ್ಳಲು ಕಲಿತ ಸೊಳ್ಳೆಗಳ ಹಾಗೆ ಬ್ರಾಹ್ಮಣರು ಇದೆಲ್ಲವನ್ನು ನುಂಗಿ ನೀರು ಕುಡಿದು ಪುಷ್ಟರಾಗುತ್ತಿದ್ದಾರೆ. ಆದರೆ ಮಾನ್ಯ ಬಸವಲಿಂಗಪ್ಪನವರಿಗೆ ಈ ಅಧಿಕಾರವನ್ನು ನಾವೇಕೆ ನಿರಾಕರಿಸುತ್ತೇವೆ? ಬೇಂದ್ರೆಯವರು "ದೇವರದೊಂದು ಗೋರಿಯ ಕಟ್ಟಿ, ಧರ್ಮದ ಧೂಪಕೆ ಬೆಂಕಿಯ ಹಚ್ಚಿ" ಅಂದರೆ ಎಲ್ಲಾ ದೇವಭಕ್ತರೂ ಅದು ವರಪ್ರಸಾದ ಎನ್ನುವಂತೆ ಹಿಗ್ಗುತ್ತಾರೆ. ಬಸವಲಿಂಗಪ್ಪನವರು ದೇವರ ಪಟಗಳನ್ನು ಚರಂಡಿಗೆ ಹಾಕಿ ಎಂದರೆ ದೇವರನ್ನೇ ಚರಂಡಿಗೆ ಹಾಕಿದರು ಎನ್ನುವ ಹಾಗೆ ಕೋಲಾಹಲವೇಳುತ್ತದೆ. ಗೋ ಮಾಂಸ ತಿನ್ನಿ ಅಂತ ಹಿಂದುಗಳಿಗೆ ಸದುಪದೇಶ ಮಾಡಿದ ಮುಖ್ಯಮಂತ್ರಿಗಳು ಕೂಡ 'ಬಸವಲಿಂಗಪ್ಪನವರಿಗೆ ಬಾಯಿ ಚಪಲ ಬಹಳ. ಹೋಗಲಿ ಬಿಡಿ, ಪಾಪ', ಅಂತ ಹೇಳಿ ಅವರನ್ನು ಇನ್ ಸಲ್ಟ್ ಮಾಡುತ್ತಾರೆ.

ಬಸವಲಿಂಗಪ್ಪನವರ ಲೇಟೆಸ್ಟ್ ಅಪಕೀರ್ತಿಯಂದರೆ "ಮೈಸೂರಿನಲ್ಲಿ ಕನ್ನಡ ಸಾಹಿತ್ಯವೆಲ್ಲ ಭೂಸಾ" ಅಂದದ್ದು. ಮತ್ತಾವ ಡಿಪಾರ್ಟಮೆಂಟಿನಲ್ಲಿಯೂ ಸ್ಥಳ ಸಿಗುವುದಿಲ್ಲ ಎಂದಾದ ಮೇಲೆ ಮಾತ್ರ ಕನ್ನಡವಾದರೆ ಕನ್ನಡ ಅಂತ ಅಲ್ಲಿ ಹೋಗಿ ಸೇರುವ ವಿದ್ಯಾರ್ಥಿಗಳೂ ಈಗ ಬಸವಲಿಂಗಪ್ಪನವರ ಭೂಸಾ ಭಾಷಣದ ಮೇಲೆ ಮುಷ್ಕರದ ಅಗ್ನ್ಯಸ್ತ್ರವನ್ನೇ ಎತ್ತಿದ್ದಾರೆ. ಬಸವಲಿಂಗಪ್ಪನವರು ಕನ್ನಡದಲ್ಲಿರುವ ಭೂಸಾ ಸಾಹಿತ್ಯ ಮಾತ್ರ ಓದಿ ಬಲ್ಲರು. ಆದರೆ ಭೂಸಾವನ್ನು ಭೂಸಾ ಅಂತ ತಿಳಿದುಕೊಳ್ಳುವಷ್ಟು ಅವರಿಗೆ ತಿಳಿವಳಿಕೆ ಇರುವುದು ದೊಡ್ಡ ಮಾತಲ್ಲವೇ? ತಾವು ಓದಿದ್ದರ ಮೇಲಿಂದಲೇ ಇಡೀ ಸಾಹಿತ್ಯದ ಮೇಲೆ ವಿಮರ್ಶೆ ಮಾಡುವುದು ಮನುಷ್ಯ ಸಹಜ ಗುಣ. ಮಂತ್ರಿಗಳು ಮಂತ್ರಿಗಳಾದ ಮೇಲೆ ತಾವು ಮನುಷ್ಯರಲ್ಲ ಎಂದು ತಿಳಿದು ಕೊಂಡರೂ ನಾವಾದರೂ ಅವರು ಮನುಷ್ಯರೆಂದು ಯಾಕೆ ಒಪ್ಪಿಕೊಳ್ಳಬಾರದು? ಮಂತ್ರಿಗಳಾದ ಕೂಡಲೆ ಅವರು ವಾಕ್ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕೆ? ಮೂಲಂಗಿ ತಿಂದವರಿಗೆ ಮೂಲಂಗಿ ತೇಗು ಬಿಡಬಾರದು ಎಂದರೆ ಹೇಗೆ? ಮಂತ್ರಿಗಳೆಲ್ಲ ಸ್ವಾರ್ಥಿಗಳು, ಪೊಲೀಸರೆಲ್ಲ ಲಂಚಗುಳಿಗಳು. ಅಕ್ಕಸಾಲಿಗರೆಲ್ಲ ಬಂಗಾರ ತಿನ್ನುವವರು, ಹಿಂದುಗಳೆಲ್ಲ ಹೇಡಿ

ಗಳು, ತಮಿಳರೆಲ್ಲ ಕುತಂತ್ರಿಗಳು, ಕನ್ನಡಿಗರೆಲ್ಲ ತಿಂಡಿಪೋತರು, ಪುಣೇರಿಗಳು ಜಿಪುಣರು, ಮಾರವಾಡಿಗಳೆಲ್ಲ ಕಳ್ಳಪೇಟೆ ಮಾಡುವವರು ಎಂದೆಲ್ಲ ನಾವು ಹೇಳುವುದಿಲ್ಲವೆ? ಇಂಥದೇ ಥುಂಬ ಅಭಿಪ್ರಾಯ ಹೇಳುವ ಅಧಿಕಾರ ಬಸವಲಿಂಗಪ್ಪನವರಿಗೇಕೆ ಇರಬಾರದು?

ಬಸವಲಿಂಗಪ್ಪನವರ ವಿರುದ್ಧ ಇನ್ನೊಂದು ಹಕ್ಕು ಭಂಗ ಕ್ರಮವೂ ಸಾರ್ವಜನಿಕ ವೇದಿಕೆಯಲ್ಲಿ ನಡೆಯುತ್ತಿದೆ. ತಾವು ಮುಂಚಿನ ದಿನ ಢಾಣಾಡಂಗುರಾಗಿ ಹೇಳಿದುದನ್ನು ಮರುದಿನ ಖಡಾಖಂಡಿತವಾಗಿ ಹೇಳಲೇ ಇಲ್ಲ ಎಂದು ಘೋಷಿಸದ ಮಂತ್ರಿ ಅಥವಾ ರಾಜಕಾರಣಿ ಯಾರಿದ್ದಾನೆ? ಆದರೆ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವೆಲ್ಲ ಭೂಸಾ ಅಂದದ್ದನ್ನು ಮರುದಿನ ನಿರಾಕರಿಸಿ ಅಲ್ಲ, ತಿದ್ದುಪಡಿ ಮಾಡಿ ಹೇಳಿಕೊಟ್ಟರೆ ವಿಶ್ವವಿದ್ಯಾಲಯದ ಪ್ರೊಫೆಸರೊಬ್ಬರು 'ಅವರು ಹೇಳಿದ್ದಾರೆ ನಾನು ಸ್ವತಃ ಕೇಳಿದ್ದೇನೆ' ಎನ್ನಬಹುದೆ? ಅದೂ ಸಾಲದೆ ಇನ್ನೊಬ್ಬ ಪ್ರಿನ್ಸಿಪಾಲರು 'ಇನ್ನು ಮುಂದೆ ಮಂತ್ರಿಗಳ ಭಾಷಣಗಳಿಗೆ ಹೋಗುವಾಗ ಟೇಪ್‌ರಿಕಾರ್ಡ್‌ರ್ ಹಿಡಿದುಕೊಂಡು ಹೋಗಬೇಕು' ಎನ್ನುತ್ತಾರೆ! ಅಬ್ರಹ್ಮಣ್ಯಂ! ಸಮಸ್ತ ಜಗತ್ತಿನಲ್ಲಿಯೂ ರಾಜಕಾರಣಿಗಳಿಗೂ, ಕ್ರಿಮಿನಲ್ ಆರೋಪಿಗಳಿಗೂ ಇರುವ ಮೂಲಭೂತ ಹಕ್ಕು ಇದು ಅಂದರೆ ಮೊದಲು ಹೇಳಿದ್ದನ್ನು ಆಮೇಲೆ ನಿರಾಕರಿಸುವುದು, ಜಗತ್ತನ್ನೇ ರಕ್ಷಿಸುವ ಹೊಣೆಹೊತ್ತ ಅಮೆರಿಕದ ಅಧ್ಯಕ್ಷ ನಿಕ್ಸನ್ನರು ಕೂಡ ಹೇಳಿದ್ದನ್ನು ಹೇಳಿಲ್ಲ ಎನ್ನುತ್ತಾರೆ. ಆದರೆ ಯಾವ ಸುದ್ದಿಗಾರನೂ ನಿಮ್ಮೆದುರು ಟೇಪ್‌ರಿಕಾರ್ಡ್‌ರ್ ತಂದಿಟ್ಟು ಮಾತಾಡಿಸುತ್ತೇವೆ ಎಂದಿಲ್ಲ. ಭಾರತದಲ್ಲಿಯೂ ರಾಜಕಾರಣಿಗಳ ನಿರಾಕರಣೆಯನ್ನು ಖಟ್ಟಿಗೆ ಹಚ್ಚುವ ಸೂಚನೆಯನ್ನು ಯಾರೂ ಮಾಡಿಲ್ಲ. ಮಂತ್ರಿಗಳು ಸುಳ್ಳು ಹೇಳಲೇಬೇಕಾಗುತ್ತದೆ. ಕಕ್ಕಿದ್ದನ್ನು ಪುನಃ ತಿನ್ನಲೇ ಬೇಕಾಗುತ್ತದೆ. ನೀವು ಕಕ್ಕಿದ್ದನ್ನು ತಿಂದಿದ್ದೀರಿ ಅಂತ ಯಾರಾದರೂ ಪ್ರೂಫ್ ಮಾಡುತ್ತೇನೆಂದು ಹೊರಟರೆ ಅವರು ಮಾತಾಡುವುದೇ ಕಷ್ಟವಾದೀತು ನಾಳೆ. ಅಧಿಕಾರಕರ್ತರಿಗೂ, ಪತ್ರಿಕಾಕರ್ತರಿಗೂ ನಡುವೆ ಇರುವ ಅಲಿಖಿತ, ಆದರೆ ಪವಿತ್ರ ಒಪ್ಪಂದವೆಂದರೆ ಮಂತ್ರಿಗಳು ಪತ್ರಿಕೆಗಳಲ್ಲಿ ತಪ್ಪು ವರದಿಯಾಗಿದೆ ಎಂದು ಹೇಳಿದರೆ ಅದನ್ನು ಪ್ರತಿಭಟಿಸುವುದು ಕೂಡದು. ಯೋಗಿ ಎಲ್.ಎಸ್. ರಾಯರು ನೈಟ್ರಿಕ್ ಆಸಿಡ್ ನುಂಗಿದ ಹಾಗೆ ಪತ್ರಿಕಾಕರ್ತರು ಮಂತ್ರಿಗಳ ತಪ್ಪನ್ನು ತಾವು ನುಂಗಬೇಕು. ಪತ್ರಿಕಾಕರ್ತರು ದೇಶಕ್ಕಾಗಿ ಮಾಡುವ ಮಾನತ್ಯಾಗ ಇದು. ಒಂದು ವೇಳೆ ನಾಳೆಯಿಂದ ಮಂತ್ರಿಗಳ ಭಾಷಣಗಳನ್ನು ಟೇಪ್ ಮೂಲಕ ಸಾಬೀತು ಮಾಡುತ್ತೇವೆ ಎಂದು ಪತ್ರಿಕಾಕರ್ತರು ಹಟ ಹಿಡಿದರೆ ನಾಳೆ ಇದನ್ನು ಪ್ರತಿಬಂಧಿಸಲು ಒಂದು ಸುಗ್ರೀವಾಜ್ಞೆಯನ್ನೇ ಹೊರಡಿಸಬೇಕಾದೀತು ಮತ್ತು ಈ ಸುಗ್ರೀವಾಜ್ಞೆಗಂತೂ ವಿರೋಧ ಪಕ್ಷಗಳೂ ಬೆಂಬಲ ಕೊಡುವುದು ಖಂಡಿತ. ಅವಸರದಲ್ಲಿ ಮಾತಾಡಿ, ವಿರಾಮವಾಗಿ ನಿರಾಕರಿಸುವ ಮೂಲಭೂತ ಹಕ್ಕನ್ನು ಬೇಡುವವರಲ್ಲಿ ಅವರೂ ಇವರ ಹಾಗೆಯೇ.

೨೩. ಲಾಂಗೂಲ ಪತ್ರಂಗಳ್

ಪದ್ಮಶ್ರೀ ವಗೈರೆ ವಗೈರೆ ಬಿರುದಾಂಕಿತರಾದ ಶ್ರೀ ಮಲ್ಲಿಕಾರ್ಜುನ ಮನ್ಸೂರರೆ,

ನಿಮಗೆ ಈ ಪತ್ರ ಬರೆಯುವ ತೊಂದರೆಯನ್ನು ನಾನು ತೆಗೆದುಕೊಳ್ಳಬೇಕಾಗಿ ಬಂದದ್ದಕ್ಕೆ ತುಂಬಾ ವಿಷಾದವಾಗುತ್ತದೆ. ಸಾಮಾನ್ಯವಾಗಿ ನಾನು ಯಾರಿಗೂ ಪತ್ರ ಬರೆಯುವುದಿಲ್ಲ. ನನ್ನಿಂದ ಪತ್ರ ಬರೆಸಿಕೊಳ್ಳುವ ಯೋಗ್ಯತೆಯುಳ್ಳವರು ಈ ದೇಶದಲ್ಲಿ ತೀರ ಕಡಿಮೆಯೆಂದು ನನ್ನ ಭಾವನೆಯಾಗಿದೆ.

ಹೀಗಿರುವಾಗ ನಾನು ಬರೆಯಬೇಕಾದ ಪ್ರಸಂಗ ಬಂದದ್ದು ನೀವು ಈಚೆಗೆ ಕೊಟ್ಟ ಪತ್ರಿಕಾ ಸಂದರ್ಶನವನ್ನು ಓದಿದ್ದರಿಂದ. ನೀವು ನಮ್ಮ ಪ್ರೀತಿಯ ವಿಶ್ವವಿದ್ಯಾಲಯದಲ್ಲಿ ಸಂಗೀತ ವಿಭಾಗದ ಪ್ರಾರಂಭದ ವಿಷಯದಲ್ಲಿ ತುಂಬಾ ನೋವು, ವಿಷಾದ ಮೊದಲಾದ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ. ನಿಮ್ಮನ್ನು ಮತ್ತು ನಿಮ್ಮ ಹೆಸರನ್ನು ಈ ವಿಭಾಗದ ಸಲುವಾಗಿ ಧಾರಾಳವಾಗಿ ಉಪಯೋಗಿಸಿಕೊಂಡು ಆ ಮೇಲೆ ನಿಮ್ಮನ್ನು ಸಂಪೂರ್ಣ ಕಡೆಗಣಿಸಲಾಯಿತೆಂಬುದು ನಿಮ್ಮ ದೂರಾಗಿರುವಂತೆ ಕಾಣುತ್ತದೆ. ಸಂಗೀತ ವಿಭಾಗದ ಮುಖ್ಯಸ್ಥರ ಆಯ್ಕೆ ವಿಧಾನದ ಬಗ್ಗೆಯೂ ನಿಮ್ಮ ತಕರಾರು ಇರುವಂತೆ ತೋರುತ್ತದೆ.

ನೀವು ತುಂಬಾ ಅನ್‌ರೀಜನೇಬಲ್ ಆಗಿದ್ದೀರಿ ಅಂತ ನನ್ನ ಭಾವನೆ. ಈ ದೇಶದಲ್ಲಿ ಸಂಗೀತಗಾರರನ್ನೊಳಗೊಂಡು ಎಲ್ಲರೂ ಅಗತ್ಯವಿದ್ದಾಗ ಉಪಯೋಗಿಸಿಕೊಂಡು ಆ ಮೇಲೆ ರದ್ದೀ ಕಾಗದದ ಹಾಗೆ ಬುಟ್ಟಿಗೆ ವರ್ಗಾಯಿಸಲ್ಪಡುವುಕ್ಕಾಗಿಯೇ ಇರುತ್ತಾರೆ. ಹೀಗೆ ಉಪಯೋಗಿಸಲ್ಪಟ್ಟು ಕಡೆಗಣಿಸಲ್ಪಡುವುದು ಮಹಾಭಾಗ್ಯವೆಂದು ಬಗೆಯುವವರೇ ದೇಶಸೇವಕರು. ಅದೇ ನಿಷ್ಕಾಮಕರ್ಮ, ಹೀಗೆ ಉಪಯೋಗಿಸುವವರನ್ನು ನಾವು ನಾಯಕರೆಂದು ಕರೆಯುತ್ತೇವೆ. ನಾಯಕನ ಇಚ್ಛೆಗೆ ತಲೆವಾಗಿ ಅವನು ಕರೆದಾಗ ಪ್ರಸಾದವೆಂದು ಮುಂದೆ ಬರುವುದೂ, ನಾಯಕನ ದೃಷ್ಟಿ ಬೇರೆ ಕಡೆ ಸರಿದೊಡನೆ ಸರಿದು ಹಿಂದಿನ ಬೆಂಚಿನಲ್ಲಿ ಕೂಡ್ರುವುದೂ ದೇಶಸೇವಕನ ಕರ್ತವ್ಯ. ಇದು ಬಿಟ್ಟು ಸೇವಕರು ಮೊಂಡ ಮಗುವಿನ ಹಾಗೆ ಹಟ ಮಾಡಿದರೆ ಬೆನ್ನಿನ ಕೆಳಗಿನ ಭಾಗದಲ್ಲಿ ಕೈಬೆರಳುಗಳ ಗುರುತು ಮೂಡಿಸಿ ಬಾಯಿ ಮುಚ್ಚಿಸಬೇಕಾಗುವುದು. ಇದಕ್ಕೆ ಶಿಸ್ತಿನ ಕ್ರಮ ಎಂದು ಕರೆಯಲಾಗುತ್ತದೆ. ದಿನೇಶ ಸಿಂಗರಂಥ ರಾಜಕೀಯ ಕಿಲಾಡಿಗಳಿಗೇ ಏನಾಯಿತೆಂದು ನಿನ್ನಿನ ಪತ್ರಿಕೆಗಳಲ್ಲಿ ಓದಿರಬೇಕು ನೀವು. ನಿಮ್ಮಂಥ ಸಂಗೀತಗಾರರು ಯಾವಗಿಡದ ತೊಪ್ಪಲು. ನಿಮ್ಮ ಅಪಸ್ವರದಿಂದ (ಕ್ಷಮಿಸಿ, ನೀವು ದೇಶದ ಅಗ್ರಣಿ ಸಂಗೀತಗಾರರೆಂದು ನಾನು ಬಲ್ಲೆ-ಆದರೂ ನಿಮ್ಮದು ಅಪಸ್ವರವೇ ಸೈ) ನೀವು ನಿಷ್ಕಾಮ ಕರ್ಮಿಗಳು, ವಿನಮ್ರ ಸೇವಕರು, ಎಲೆಮರೆಯಕಾಯಿ ಇತ್ಯಾದಿ ಪ್ರಶಂಸೆಗಳಿಗೆ ಎರವಾಗುವುದೇ ಬಂತಷ್ಟೇ.

ಸಂಗೀತ ವಿಭಾಗಕ್ಕೆ ಮುಖ್ಯಸ್ಥರನ್ನು ಆರಿಸುವಾಗ ಯೋಗ್ಯತೆಯೊಂದಕ್ಕೇ ಪ್ರಾಧಾನ್ಯ ಕೊಡಬೇಕೆಂದೂ, ಪೂರ್ವನಿಶ್ಚಿತ ಉಮೇದ್ವಾರರ ನೇಮಕ ಸಲ್ಲದೆಂದೂ ನೀವು ಹೇಳಿದ್ದೀರಿ. ಈ ವಾದವನ್ನು ನಾವು ಸರ್ವಥಾ ಒಪ್ಪಲಾರೆವು. ಯೋಗ್ಯತೆ ಎಂದರೇನು? ಅಧಿಕಾರಿಗಳೂ ರಾಜಕಾರಣಿಗಳೂ ಯಾರನ್ನು ಆರಿಸುತ್ತಾರೋ ಅವರಲ್ಲಿ ಇರತಕ್ಕದ್ದೇ ಯೋಗ್ಯತೆ ಎಂದು

ಯಾವುದೋ ಅಚ್ಚ ಭಾರತೀಯ ಶಬ್ದಕೋಶದಿಂದ ನೀವು ತಿಳಿದುಕೊಳ್ಳಬಹುದು. ಭಾರತದಲ್ಲಿ ಎಲ್ಲವೂ ಈ ಅರ್ಥವನ್ನು ಅಂಗೀಕರಿಸಿಯೇ ನಡೆಯುತ್ತಿದೆ.

ಮನ್ಸೂರ ಮಹಾಶಯರೆ, ನೀವು ಸಂಗೀತದಲ್ಲಿ ಅಗಾಧ ವಿದ್ವಾಂಸರೆಂದು ನಾನು ಒಪ್ಪಬಹುದು. ಆದರೆ ನಿಮ್ಮ ದೃಷ್ಟಿಯಲ್ಲಿ ಯೋಗ್ಯತಾಸಂಪನ್ನ ಎನಿಸುವವರನ್ನು ಸಂಗೀತದ ಪ್ರೊಫೆಸರರನ್ನಾಗಿ ಮಾಡಲು ಸಾಧ್ಯವಿಲ್ಲ. ದಿನಕ್ಕೆ ಹನ್ನೆರಡೋ ಹದಿನಾರೋ ಗಂಟೆಗಳ ಕಾಲ ಸ್ವರಸಾಧನೆ ಮಾಡುವವರನ್ನು ಸಂಗೀತಾಧ್ಯಾಪಕರಾಗಿ ನೇಮಿಸಿದರೆ ವಿಶ್ವವಿದ್ಯಾಲಯದಲ್ಲಿ ದೊಂಬಿ ಏಳಬಹುದು. ಇಂಥ ಸಾಧನಾ ಹುಚ್ಚರು ತಮ್ಮ ವಿದ್ಯಾರ್ಥಿಗಳೂ ತಮ್ಮ ಹಾಗೆ ಅಥವಾ ನಿಮ್ಮ ಹಾಗೆ ತಾಲೀಮು ಮಾಡಬೇಕೆಂದು ಒತ್ತಾಯಪಡಿಸಿದರೆ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೂ ಬೆಂಕಿ ಹಚ್ಚಬಹುದು. ನಮಗೆ ಇತರ ಎಲ್ಲಾ ವಿದ್ಯೆಗಳಲ್ಲಿರುವ ಹಾಗೆ ಸಂಗೀತದಲ್ಲಿಯೂ ಬೇಕಾದದ್ದು ಸಂಗೀತ ಡಿಗ್ರಿಗಳೇ ಹೊರತು ಸಂಗೀತ ವಿದ್ಯೆಯಲ್ಲ. ಸಂಗೀತ ಡಿಗ್ರಿಗಳನ್ನು ಪಡೆದು ಈ ವಿದ್ಯಾರ್ಥಿಗಳು ನಾಳೆ ಆಕಾಶವಾಣಿಯಲ್ಲೋ, ಸಂಗೀತ ನಾಟಕ ಅಕಾಡೆಮಿಯಲ್ಲೋ ಅಧಿಕಾರಿಗಳಾಗಬೇಕೆನ್ನುತ್ತಾರೆ. ಆ ಅಧಿಕಾರ ಸ್ಥಾನದಿಂದ ನಿಮ್ಮಂಥ ವಿದ್ವಾಂಸರಿಗೆ ಬೆಲೆ ಕಟ್ಟುವ ಕೆಲಸ ನಾಳೆ ಅವರಿಂದ ಆಗಬೇಕಾಗಿದೆ. ದಿನಕ್ಕೆ ಹನ್ನೆರಡು ಗಂಟೆ ಸಾಪಾಸಾ ಒದರುತ್ತ ಕೂತರೆ ಅವರಿಗೆ ರಾಜಕೀಯಕ್ಕೆ ಸಮಯ ಎಲ್ಲಿ ಉಳಿಯಬೇಕು? ನೀವು ಅಸಾಧ್ಯವನ್ನು ಅಪೇಕ್ಷಿಸುತ್ತಿದ್ದೀರಿ.

ಪ್ರಿಯ ಮನ್ಸೂರರೆ, ನೀವು ಮೇಘಮಲ್ಹಾರ ಹಾಡಿ ಬರಡು ಮೋಡದಿಂದ ಮಳೆ ಬರಿಸಲು ಸಮರ್ಥರಾಗಬಹುದು; ಅಥವಾ ದೀಪಕ ರಾಗ ಹಾಡಿ ಹಣತೆಯ ಬತ್ತಿಗೆ ದೀಪ ಹೊತ್ತಿಸಬಹುದು. ಆದರೆ ನಮ್ಮ ದೇಶದ ಕೊರಡುಗಟ್ಟಿದ ನಮ್ಮ ಆಡಳಿತ ಪದ್ಧತಿಯಲ್ಲಿ ಏನೊಂದು ಜೀವಕಳೆ ಹುಟ್ಟಿಸಬಲ್ಲ ರಾಗ ನಿಮಗೆ ಗೊತ್ತಿಲ್ಲವೆಂದು ನಾನು ಪಂಥ ಕಟ್ಟುತ್ತೇನೆ.

ನಿಮ್ಮ ಅಭಿಮಾನಿಯಾದರೂ ಹಿತೈಷಿಯಾದ....

ಸಾಹಿತಿ, ನಾಟಕಕಾರ ಇತ್ಯಾದಿ ಇತ್ಯಾದಿಗಳಾದ ಶ್ರೀ ಎನ್ನೆಯವರೇ.

ನೀವು ಈಚೆಗೆ ಒಂದು ಗಣೇಶೋತ್ಸವದಲ್ಲಿ ಭಾಷಣ ಮಾಡಿದಿರೆಂದು ಪೇಪರುಗಳಲ್ಲಿ ವರದಿಯಾಗಿದೆ. ರಾಜಕಾರಣದವರು ಭಾಷಣ ಮಾಡತೊಡಗಿದ ಮೇಲೆ ಸಾಹಿತಿಗಳು ಸ್ವಲ್ಪ ಭಾಷಣ ಕಡಿಮೆ ಮಾಡಿದ್ದಾರೆ. ಆದ್ದರಿಂದ ಓದತಕ್ಕದ್ದೇನನ್ನಾದರೂ ಅವರು ಹೇಳಬಹುದೆಂದು ನಾನೀಗ ಇಂಥ ಭಾಷಣಗಳನ್ನು ಗಮನಿಸತೊಡಗಿದ್ದೇನೆ. ನಿಮ್ಮ ಸದರೀ ಭಾಷಣದಲ್ಲಿ ನೀವು ನಮ್ಮ ನಾಯಕರ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸಿ ಆದರ್ಶ ನಾಯಕತ್ವದ ಅಗತ್ಯ ಈ ದೇಶಕ್ಕೆ ಇದೆಯೆಂದು ಹೇಳಿದಿರಂತೆ.

ಈಗ ನಮ್ಮ ದೇಶಕ್ಕೆ ದೊರೆತಿರುವುದು ಆದರ್ಶ ನಾಯಕತ್ವವಲ್ಲೆಂದು ನೀವು ಯಾವ ಆಧಾರದಿಂದ ಹೇಳುತ್ತೀರಿ? ಆದರ್ಶ ಅಂದರೆ ಕನ್ನಡಿ ಎಂದು ಅರ್ಥವೆಂಬುದಾಗಿ ನಮ್ಮ ಸಂಸ್ಕೃತ ಪಂಡಿತರು ಹೇಳಿದ್ದು ನೆನಪಾಗುತ್ತದೆ. ನಮ್ಮ ನಾಯಕರೆಲ್ಲರಿಗೂ ಕನ್ನಡಿಯ ಮುಂದೆ ನಿಂತು ನೋಡಿಕೊಳ್ಳುವಾಗ ತಾವು ತುಂಬಾ ಚೆನ್ನಾಗಿದ್ದೇವೆ ಅನ್ನಿಸುತ್ತದೆಯೆಂದು ನಾನು ಎಲ್ಲಾ ನಾಯಕರ ಖಾಸಗಿ ಕಾರ್ಯದರ್ಶಿಗಳಿಂದ ತಿಳಿದುಕೊಂಡಿದ್ದೇನೆ. ಆದ್ದರಿಂದ ಅವರೆಲ್ಲರೂ ಅಕ್ಷರಶಃ ಆದರ್ಶ ನಾಯಕರಾಗಿದ್ದಾರೆಂದು ನನ್ನ ಸವಾಲು.

ನೀವು ವಿನಾಯಕನ ಹಬ್ಬದ ಕಾರ್ಯಕ್ರಮದಲ್ಲಿ ನಾಯಕರ ಬಗ್ಗೆ ಮಾತಾಡಿದ್ದೀರಾದ್ದರಿಂದ

ವಿನಾಯಕನ ಆದರ್ಶವನ್ನು ನಾಯಕರಿಗೆ ಬೋಧಿಸಿರಬಹುದು. ಆದರ ಅಗತ್ಯವೇ ಇಲ್ಲ. ನಮ್ಮ ನಾಯಕರು ಈಗಾಗಲೇ ವಿನಾಯಕನನ್ನು ಸರ್ವಾತ್ಮನಾ ಪ್ರತಿಬಿಂಬಿಸುತ್ತಿದ್ದಾರೆ. ಅವರ ಹೊಟ್ಟೆಗಳನ್ನು ನೋಡಿ ತಿಂದದ್ದು ಸ್ವಲ್ಪ ಹೆಚ್ಚಾದ ಮಾತ್ರಕ್ಕೆ ಅವನ ಹೊಟ್ಟೆ ಒಡೆಯಿತು. ಈ ನಾಯಕರೋ ಬ್ರಹ್ಮಾಂಡವನ್ನೇ ನುಂಗಿದರೂ ಇನ್ನೂ ಸ್ಥಳವಿರುವಂಥ ಇಲಾಸ್ಟಿಕ್ ಹೊಟ್ಟೆಯನ್ನು ಹೊಂದಿದ್ದಾರೆ. ಅವನು ವರ್ಷಕ್ಕೊಂದು ದಿನ ತಿಂದರೆ ಇವರು ವರ್ಷದುದ್ದಕ್ಕೂ ಕಬಳಿಸುತ್ತಾರೆ. ಅವನ ಹಾಗೆಯೆ ಇವರೂ ಹೆಗ್ಗಣಾರೂಢರು- ಇವು ಹಗಲೂ ರಾತ್ರಿ ದೇಶದ ಕೋಶಕ್ಕೆ ಗುದ್ದಿ ಕೊರೆಯುತ್ತವೆ. ಅವನ ಹಾಗೆ ಇವರೂ ನೌಕರ ಶಾಹಿಯ ಸರ್ಪಗಳನ್ನು ಹೊಟ್ಟೆಗಳಿಗೇ ಕಟ್ಟಿಕೊಂಡಿದ್ದಾರೆ.

ಸೊಂಡಿಲು ಇಲ್ಲದ ಮಾತ್ರಕ್ಕೆ ಇವರು ಆದರ್ಶ ನಾಯಕರಲ್ಲವೆಂದು ಹೇಳಬೇಡಿ.

ಇತಿ ನಿಮ್ಮವ
ಲಾಂಗೂಲಾಚಾರ್ಯ
(೨೩-೯-೧೯೭೩)

೨೪. ಜಬ್ಬಲಪುರದ ನರಭಕ್ಷಕ

ಬಡ ಪನ್ನಾಲಾಲ ಘೂಸಿರಾಮ ನಿಷ್ಕಾರಣವಾಗಿ ಸೆರೆಮನೆ ಸೇರಬೇಕಾಗಿ ಬಂದಿದೆ. ಆತ ಜಬ್ಬಲಪುರದ ಒಬ್ಬ ಗೌರವಾರ್ಹ ನಾಗರಿಕನಂತೆ. ಅವನಿಗೊಂದು ಚಟ, ನರಮಾಂಸ ಭಕ್ಷಣೆ, ಘೂಸಿ (ಹುಲ್ಲಿನ) ರಾಮನಿಗೆ ಈ ನರಮಾಂಸ ರುಚಿ ಹೇಗೆ ಹತ್ತಿತೋ ವೀರಭದ್ರನೇ ಬಲ್ಲ. ಹಾಂ! ಅವನ ಮೇಲೆ ಒಮ್ಮೆಲೇ ಸಿಟ್ಟಾಗಬೇಡಿರಿ. ಅವನೇನೂ ಮನುಷ್ಯರನ್ನು ಕೊಂದು ತಿನ್ನು ತ್ತಿದ್ದಿಲ್ಲ. ತಾವಾಗಿಯೇ ಸತ್ತು, ಸ್ಮಶಾನದಲ್ಲಿ ತಮ್ಮ ಬಂಧುಗಳಿಂದ ಚಿತೆಗೇರಿಸಲ್ಪಟ್ಟವರ ಬೆಂದ ಮಾಂಸವನ್ನು ಆತ ರಾತ್ರಿಕಾಲದಲ್ಲಿ ಹೋಗಿ ತಿನ್ನುತ್ತಿದ್ದನಂತೆ. ಸೆಕೆಂಡಿಗೊಂದರಂತೆ ಹುಟ್ಟುವ ಮಕ್ಕಳಿಂದ ದೇಶದಲ್ಲಿ ಅನ್ನಾಭಾವವಾಗಿರುವಾಗ ಹೊಸ ಆಹಾರ ಮೂಲವನ್ನು ಕಂಡುಹಿಡಿದ ಘೂಸಿರಾಮನಿಗೆ ಬಿರುದು ಕೊಡುವ ಬದಲಾಗಿ ಅವನನ್ನು ಸೆರೆಮನೆ ಕಾಣಿಸುವುದೆಂಥ ಪೆದ್ದು ತನ!

ಕೆಲವೇ ವರ್ಷಗಳ ಹಿಂದೆ ನಮ್ಮ ಮಂತ್ರಿಗಳೊಬ್ಬರು ಇಲಿ- ಹೆಗ್ಗಣಗಳನ್ನು ಮನುಷ್ಯರು ತಿನ್ನತೊಡಗಿದರೆ ಆಹಾರ ಸಮಸ್ಯೆ ತೀರುವುದೆಂದು ಸೂಚಿಸಿದ್ದರು. ಅವರ ಪ್ರಕಾರ ಇದರಿಂದ ಅಜ್ಜಿಯನ್ನು ಸುಟ್ಟಂತೆಯೂ ಆಯಿತು ಬಿಸಿನೀರು ಕಾಯಿಸಿದಂತೆಯೂ ಆಯಿತು ಎಂಬಂತೆ ಒಂದರಲ್ಲಿ ಎರಡು ಸಾಧಿಸಿದಂತಾಗುತ್ತದೆ, ಇಲಿಗಳು ನಿಮ್ಮ ಆಹಾರವನ್ನು ಸೂರೆ ಮಾಡುವ ಶತ್ರುಗಳು. ಅವುಗಳನ್ನು ತಿಂದೇ ಬಿಟ್ಟರೆ ಅವು ನಾಶವಾದಂತೆಯೂ ಆಯಿತು, ಹೊಟ್ಟೆ ತುಂಬಿದಂತೆಯೂ ಆಯಿತು. ಹೊಲಮಾಡಿದ್ದ ಸಾಬಿಯೊಬ್ಬನಿಗೆ ಯಾರೋ ಹೋಗಿ ಹೇಳಿ ದರಂತೆ "ನೋಡು, ಆಡು ನಿನ್ನ ಹೊಲವನ್ನು ಮೇಯುತ್ತಿದೆ!" ಅಂತ. "ಯಾರ ಆಡು?" ಎಂದು ಸಾಬಿ ಬೀಡಿಯ ಇನ್ನೊಂದು ದಮ್ಮು ಎಳೆದುಕೊಳ್ಳುತ್ತಾ ಕೇಳಿದ. "ನಿನ್ನದೇನೋ ಮಾರಾಯಾ!" ಎಂದ ವರದಿಗಾರ. "ತೋ ರಹನೇ ದೋ, ಬಕರಾ ಬೀ ಹಮಾರಾ, ಖೇತ್‌ಭೀ ಹಮಾರಾ. ಅನಾಜ್‌ಭೀ ಹಮ್ ಖಾತೇ ಹೈಂ ಔರ್ ಬಕರಾ ಭೀ ಹಮೀಂ ಖಾತೇ ಹೈಂ!" ಎಂದು ಮತ್ತೊಂದು ದಮ್ಮು ಎಳೆದುಕೊಂಡ ಸಾಬಿ. ಮಂತ್ರಿಗಳ ಲಾಜಿಕ್ಕೂ ಹೀಗೆಯೇ ಇತ್ತು.

ಸತ್ತ ಹೆಣ ಎತ್ತ ಬಿದ್ದರೇನು? ಎಂದು ಹಳೇ ಗಾದೆ ಉಂಟು. ಪಾರ್ಸೀ ಜನರು ತಾವು ಸತ್ತಮೇಲೂ ಪ್ರಾಣಿಗಳಿಗೆ ತಮ್ಮ ಶರೀರಗಳಿಂದ ಪ್ರಯೋಜನವಾಗಲೆಂದು ಎತ್ತರದ ಗೋಪು ರದಲ್ಲಿ ಅವುಗಳನ್ನು ಬಿಟ್ಟು ಹಕ್ಕಿಗಳಿಗೆ ಆಹಾರವಾಗಿಸುತ್ತಾರೆ. ಆದರೆ ಈಗ ಮನುಷ್ಯರಿಗೆ ಆಹಾರ ಸಾಲದಿರುವಾಗ ಹಕ್ಕಿಗಳಿಗೆ ಕಳೇವರಗಳನ್ನು ಬಿಡುವುದರಲ್ಲಿ ಅರ್ಥವಿಲ್ಲ. ಭಾರತದಲ್ಲಿ ಪ್ರತಿ ವರ್ಷ ಸುಮಾರು ೪೦ ಲಕ್ಷ ಜನ ಸಾಯುತ್ತಾರೆ. ಅವರು ತಮ್ಮೊಡನೆ ಐದರಿಂದ ಹತ್ತು ಕೋಟಿ ಪೌಂಡುಗಳಷ್ಟು ಪ್ರೋಟೀನುಗಳನ್ನು ಮಣ್ಣಿಗೋ ಬೆಂಕಿಗೋ ಕೊಂಡೊಯ್ಯುತ್ತಾರೆ. ಇದು ಶುದ್ಧ ದುಂದುಗಾರಿಕೆ. ಒಂದು ಕಾಲದಲ್ಲಿ ದೇಶದಲ್ಲಿ ಬೇಕಾದಷ್ಟು ಆಹಾರ ಬೆಳೆಯುತ್ತಿ ದ್ದಾಗ ಈ ರೂಢಿ ಹುಟ್ಟಿಕೊಂಡಿರಬೇಕು. ಈಗ ಜಗತ್ತು ಬದಲಾಗಿದೆ. ಹೀಗೆ ಪ್ರೋಟೀನನ್ನು ಪೋಲು ಮಾಡುವುದು ಸಾಧ್ಯವಿಲ್ಲ.

ಹೆತ್! ಎಂಥ ಕೊಳಕನಪ್ಪಾ ಈ ಲಾಂಗೂಲಾಚಾರಿ! ಎಂಬುದಾಗಿ ನೀವು ಓಕರಿ

ಸುತ್ತೀರೆಂದು ನಾನು ಬಲ್ಲೆ. ಆದರೆ ಕೇವಲ ಒಂದೂವರೆ ಶತಮಾನದ ಹಿಂದೆ ಈ ಈ ದೇಶದ ಕೆಲ ಮೂಲೆಗಳಲ್ಲಿ ನರಕಳೇವರ ಭಕ್ಷಕ ಜನಾಂಗಗಳಿದ್ದವೆಂದು ನಿಮಗೆ ಗೊತ್ತಿದೆಯೇ? ನಮ್ಮ ಹಿಂದುಸ್ತಾನಿ ಸಂಗೀತದ ಒಬ್ಬ ದಿಗ್ಗಜರ ಪೂರ್ವಿಕರು ತಮ್ಮ ಪರಲೋಕಕ್ಕೆ ಹೋದ ಪಿತೃಗಳ ಶವಗಳನ್ನು ಕಾಪಾಡಿಟ್ಟು ಆಹಾರ ಕೊರತೆಯ ಋತುಗಳಲ್ಲಿ ಅವರನ್ನು ತಿನ್ನುತ್ತಿದ್ದರೆಂದು ಅವರೇ ಬರೆದಿದ್ದಾರೆ. ವಾಮಾಚಾರದ ಯೋಗಸಾಧನೆಯಲ್ಲಿ ಸತ್ತಪ್ರಾಣಿಗಳ ಕೊಳೆತ ಮಾಂಸ ತಿನ್ನುವುದೂ ಒಂದು ತಂತ್ರವಾಗಿತ್ತು. ರಾಕ್ಷಸರು ನರಮಾಂಸ ಭಕ್ಷಕರಾಗಿದ್ದರು. ಬರಬರುತ್ತ ಅವರು ಆರ್ಯರಿಗೆ ಸೋತರು. ಅವರ ಹೆಣ್ಣು ಮಕ್ಕಳಲ್ಲಿ ಹಲವರನ್ನು ಆರ್ಯರು ಮದುವೆಯಾದರು. ನನ್ನ ರಕ್ತದಲ್ಲಂತೂ ಒಂದು ಬಿಂದುವಾದರೂ ರಾಕ್ಷಸ ಕುಲದ್ದಾಗಿದೆಯೆಂದು ನನಗೆ ಯಾವ ಅನುಮಾನವೂ ಇಲ್ಲ.

ನಿಮ್ಮ ಮನಸ್ಸು ಇದಕ್ಕೆ ಹೇಸಿಕೊಳ್ಳುತ್ತಿದೆಯೆಂದು ನಾನು ಬಲ್ಲೆ. ಆದರೆ ಹೇಸುವುದು, ರೋಸುವುದೆಲ್ಲ ಅಭ್ಯಾಸದ ಮಾತು, ನಾನು ನನ್ನ ಶೆಂಡಿಯನ್ನು (ಚಂಡಿಕೆ) ಕತ್ತರಿಸುವ ಮೊದಲು ಎಷ್ಟು ಹೇಸಿದನೆಂದು ನಿಮಗೆ ಗೊತ್ತೆ? ಆದರೆ ಕಾಲ ಮಹಿಮೆ. ಕತ್ತರಿಸಿಕೊಳ್ಳಬೇಕಾಯಿತು. ಶೆಂಡಿ ಇದ್ದದ್ದರಿಂದಲೇ ನನ್ನನ್ನು ಮದುವೆಯಾಗುವುದಕ್ಕೆ ಒಂದೆರಡು ಹುಡುಗಿಯರು ನಿರಾಕರಿಸಿದರೆಂದು ಗೊತ್ತಾದ ಮೇಲೆ ಶೆಂಡೀ ದಾನವನ್ನು ಮುಂದೆ ಹಾಕುವುದು ಇನ್ನು ಸಾಧ್ಯವಿಲ್ಲೆಂದು ತೀರ್ಮಾನಿಸಿದೆ. ಶೆಂಡಿಯನ್ನು ವಿಷಾದಪೂರ್ವಕ ಬಲಿಕೊಟ್ಟಮೇಲೆ ಅನೇಕ ದಿನಗಳವರೆಗೆ ನನಗೆ ಬಾಲ ಕಳೆದುಕೊಂಡ ನರಿಯ ಹಾಗೆಯೇ ಅನಿಸುತ್ತಿತ್ತು. ಬ್ರಾಹ್ಮಣನಾಗಿ ಶಿಖಾತ್ಯಾಗ ಮಾಡಿದ್ದಕ್ಕಾಗಿ ನರಕದಲ್ಲಿ ಯಮದೂತರು ನನ್ನ ಅನಾಥ ಶೆಂಡಿಯಿಂದಲೇ ನನ್ನನ್ನು ತೂಗಹಾಕಿದ ದೃಶ್ಯಗಳು ಎಷ್ಟೋ ದಿನ ಕನಸಿನಲ್ಲಿ ನನ್ನನ್ನು ಪೀಡಿಸಿದವು. ಆದರೆ ಕಾಲಾಂತರದಲ್ಲಿ ನಾನು ಶೆಂಡೀರಹಿತನಾಗಿ ಬದುಕಲು ಕಲಿಯಲಿಲ್ಲವೆ? ಮೊದಲನೇ ಸಲ ವಾಟರ್‌ಬರೀಸ್ ಕಂಪೌಂಡ್ ಕುಡಿದಾಗ ನನ್ನ ಹೊಟ್ಟೆಯಲ್ಲಿ ಶಾರ್ಕುಗಳೂ, ತಿಮಿಂಗಿಲಗಳೂ ಸಂಚರಿಸುವ ಹಾಗೆ ಅನಿಸಲಿಲ್ಲವೇ? ಈಗ ಬೇಫಿಕೀರಾಗಿ ನಾನು ಎಂಥಾ ಅಭೋಜ್ಯವನ್ನೂ ಔಷಧವೆಂದು ನುಂಗಲು ಕಲಿತಿದ್ದೇನೆ. ನನ್ನನ್ನು ಬಿಡಿ. ಬರಗಾಲದಲ್ಲಿ ವಿಶ್ವಾಮಿತ್ರ ಋಷಿಯೇ ನಾಯಿಮಾಂಸ ತಿನ್ನುವುದಕ್ಕೆ ಸಿದ್ಧನಾದ....... ಕಾಲಾಂತರದಲ್ಲಿ ನಾವು ನಮ್ಮ ಅಜ್ಜಿಯನ್ನು ಜೀರ್ಣಿಸಿಕೊಳ್ಳುವುದಕ್ಕೆ ಕಲಿತೇ ಕಲಿಯುತ್ತೇವೆ ಎಂದು ನನಗೆ ಭರವಸೆ ಇದೆ.

ನಾವೀಗ ಚಂದ್ರಲೋಕಕ್ಕೆ ಹೋಗಬಂದಾಗಿದೆ. ಮಂಗಳ ಲೋಕಕ್ಕೆ ಹೋಗುವುದೂ ಬಹಳ ತಡವಾಗದು. ಆಮೇಲೆ ಗುರು, ಶನಿ ಲೋಕಗಳಿಗೆ, ಅದರ ಅನಂತರ ನಮ್ಮ ಹತ್ತಿರದ ತಾರೆಯಾದ ಸೆಂಚೌರಿಗೆ. ಈ ಯಾತ್ರೆಗಳಿಗೆ ತಿಂಗಳುಗಟ್ಟಳೆ ಅಲ್ಲ, ವರ್ಷಗಟ್ಟಲೆ ಬೇಕಾಗುತ್ತದೆ. ಈ ಯಾತ್ರೆಗಳ ವಿಷಯ ವಿಜ್ಞಾನಿಗಳು ಏನನ್ನುತ್ತಾರೆ ಗೊತ್ತೆ? ಆಕಾಶದಲ್ಲಿ ವರ್ಷಗಟ್ಟಲೆ ಹೋಗುತ್ತಿರುವಾಗ ನಿಮಗೆ ನೀರೆಲ್ಲಿ ಸಿಗಬೇಕು? ಎಷ್ಟು ನೀರನ್ನು ನೀವು ಕೊಂಡುಹೋಗಬಲ್ಲಿರಿ? ನಿಮ್ಮ ಮೂತ್ರವನ್ನೇ ಶುದ್ಧೀಕರಿಸಿ ನೀವು ಪುನಃ ಕುಡಿಯಬೇಕಾಗುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಇದು ಹೇಸಿಕೆಯೆಂದು ನಿಮಗನ್ನಿಸುವುದಿಲ್ಲವೆ? ಆದರೆ ನೀವು ಸೆಂಚೆರಿ ನಕ್ಷತ್ರಕ್ಕೆ ಹೋಗಬೇಕಾದರೆ ನಿಮ್ಮ ಹೇಸಿಕೆ- ಪಾಸಿಕೆಗಳನ್ನು ಆಕಾಶಕ್ಕೆ ತೂರಲೇಬೇಕಾಗುತ್ತದೆ. ಈ ಯಾತ್ರೆಯಲ್ಲಿ ನಿಮ್ಮ ಸಹಪ್ರವಾಸಿಗಳಲ್ಲಿ ಯಾರಾದರೂ ಸತ್ತರೆ, ಅವರಲ್ಲಿರುವ

ಪ್ರೋಟೀನನ್ನು ವ್ಯರ್ಥವಾಗಿ ಹಾಳು ಮಾಡುವುದಕ್ಕೆ ವಿಜ್ಞಾನಿಗಳು ಒಪ್ಪುವುದಿಲ್ಲವೆಂದೂ ನನಗೆ ಖಂಡಿತವಿದೆ.

ನನ್ನ ಅಜ್ಜಿಯ ರುಚಿ ಅಷ್ಟು ಹಿತಕರವಾಗಿರಲಿಕ್ಕಿಲ್ಲ. ಆದರೆ ಅವಳನ್ನು ಸುಭೋಜ್ಯಳಾಗಿ ಮಾಡುವುದಕ್ಕೆ ವಿಜ್ಞಾನಿಗಳೂ, ತಂತ್ರಜ್ಞಾನಿಗಳೂ ತಕ್ಕ ಮಸಾಲೆಗಳನ್ನೂ ಪ್ರೊಸೆಸ್ಸುಗಳನ್ನೂ ಕಂಡು ಹಿಡಿದೇ ಹಿಡಿಯುವರು. ಅವಳಲ್ಲಿರಬಹುದಾದ ಮಡಿ- ಮೈಲಿಗೆ ಮೊದಲಾದ ಅನಿಷ್ಟ ವಾಸನಗೆಳನ್ನು ನಿವಾರಿಸಿ ಅತ್ಯಂತ ರುಚಿಕಟ್ಟಾದ ಖಾದ್ಯಗಳನ್ನು ತಯಾರಿಸುವ ಉಪಾಯಗಳನ್ನು- ಶೇಂಗಾದಿಂದ ಹಾಲು, ಮೊಸರು, ಕೊಬ್ಬಟ್ಟಿನಿಂದ ಲಾಡು ಮೊದಲಾದವುಗಳನ್ನು ತಯಾರಿಸುವ ವಿಧಾನಗಳನ್ನು ಕಂಡು ಹಿಡಿದ ನಮ್ಮ ಆಹಾರ ಸಂಶೋಧನಾ ಸಂಸ್ಥೆಯವರೇ- ಕಂಡು ಹಿಡಿಯುವರು.

೨೫. ಲಾಂಗೂಲ ಪತ್ರಿಕೆಯಿಂದ

ಇದು ಇಂದಿರಾ ಗಾಂಧಿಯವರು ಜೀವಂತವಿದ್ದಾಗ ೧೯೮೪ರಲ್ಲಿ ಎಪ್ರಿಲ್ ೧ರ ನೆನಪು ಮಾಡಿಕೊಂಡು ಪಾ.ವೆಂ. ಬರೆದ ವ್ಯಂಗ್ಯ ಲೇಖನ. ಯಾರೊಬ್ಬ ದೊಡ್ಡ ವ್ಯಕ್ತಿಯ ರಾಜೀನಾಮೆ ಮುಂದೆ ಬಂತೆಂದರೆ ಅದರ ಪ್ರತಿಕ್ರಿಯೆ ಯಾವ ರೀತಿಯಾಗಿ ಮೋಜಿನದಿರುತ್ತದೆ ಎಂಬುದಾಗಿ ಊಹನೆಯ ಕುದುರೆಯನ್ನು ಓಡಿಸಿದ್ದಾರೆ! - ಶ್ರೀ ಹಾ.

ಇಂದಿರಾ ರಾಜೀನಾಮೆ: ಯುಗಾದಿ ಉಡುಗೊರೆ

ನವದೆಹಲಿ, ಏಪ್ರಿಲ್ ೧- ಭಾರತದ ಪ್ರಧಾನಮಂತ್ರಿ ಶ್ರೀಮಂತಿ ಇಂದಿರಾ ಗಾಂಧಿಯವರು ತಮ್ಮ ಪ್ರಧಾನಮಂತ್ರಿ ಪದವಿಗೆ ರಾಜೀನಾಮೆ ಕೊಡಲು ನಿರ್ಧರಿಸಿದ್ದಾರೆ.

ಅವರು ತಮ್ಮ ಹೆಸರಿಂದಲೇ ಗುರುತಿಸಲ್ಪಡುವ ಕಾಂಗ್ರೆ ಪಕ್ಷದ ಅಧ್ಯಕ್ಷ ಪದವನ್ನೂ ಬಿಟ್ಟು ಕೊಡಲಿದ್ದಾರೆ.

ಇಂದು ಮಧ್ಯಾಹ್ನ ಅವಸರದಲ್ಲಿ ಕರೆದ ಪತ್ರಿಕಾ ಪರಿಷತ್ತಿನಲ್ಲಿ ಶ್ರೀಮತಿ ಗಾಂಧಿಯವರು ಈ ನಿರ್ಣಯಗಳನ್ನು ಒಳಗೊಂಡ ಹೇಳಿಕೆಯೊಂದನ್ನು ಸ್ವತಃ ಬಿಡುಗಡೆ ಮಾಡಿದರು. ಹೇಳಿಕೆ ಹಸಿರು ಬಣ್ಣದಲ್ಲಿ ಮುದ್ರಿತವಾಗಿತ್ತು.

ಇಂದು ರವಿವಾರವಾಗಿದ್ದು ಯಾವ ಮಹತ್ವದ ಸುದ್ದಿಯನ್ನೂ ಸುದ್ದಿ ಸೂರಿಗಳು ಎದುರು ನೋಡುತ್ತಿದ್ದಿಲ್ಲವಾದ್ದರಿಂದ ಪತ್ರಿಕಾ ಪರಿಷತ್ತು ಸ್ವಲ್ಪ ವಿರಳ ಹಾಜರಿಯಿಂದ ಕೂಡಿತ್ತು. ವಿಶೇಷವಾಗಿ ವಿದೇಶಿ ಸುದ್ದಿಗಾರರು ಹೆಚ್ಚು ಸಂಖ್ಯೆಯಲ್ಲಿ ಗೈರು ಹಾಜರಿಯಾಗಿ ಇದ್ದುದು ಎದ್ದು ಕಾಣುತ್ತಿತ್ತು.

ಆದರೆ ಅವರೇನೂ ಹೆಚ್ಚಿಗೆ ಕಳೆದುಕೊಳ್ಳಲಿಲ್ಲ. ಶ್ರೀಮತಿ ಗಾಂಧಿಯವರು ಸ್ವಹಸ್ತದಿಂದ ವಕ್ತವ್ಯವನ್ನು ಬಿಡುಗಡೆ ಮಾಡಿದರೂ ಪ್ರಶ್ನೆಗಳಿಗೆ ಉತ್ತರ ಕೊಡಲು ನಿರಾಕರಿಸಿದರು. "ಅಲ್ಲಿ ಏನಿದೆಯೋ ಅಷ್ಟೇ ನನಗೆ ಹೇಳಲಿರುವುದು" ಎಂದವರು ಒಂದೇ ವಾಕ್ಯದಲ್ಲಿ ಮಾತಾಡಿದರು.

ಹೇಳಿಕೆ ಸಂಕ್ಷಿಪ್ತವಾಗಿದ್ದರೂ ಅದರಲ್ಲಿ ಪ್ರಧಾನಿಗಳು ಸಾಕಷ್ಟು ಕಾಲ, ಸಾಕಷ್ಟು ಆಳವಾಗಿ ಮತ್ತು ಅಗಲವಾಗಿ ಆಲೋಚನೆ ಮಾಡಿದ ನಂತರವೇ ತಾನು ಈ ಗಂಭೀರ ನಿರ್ಣಯವನ್ನು ಕೈಕೊಂಡದ್ದಾಗಿ ವಿದಿತಪಡಿಸಿದ್ದಾರೆ. ಶ್ರೀಯುತ ರಾಜೀವಗಾಂಧಿಯವರನ್ನು ಯಾವುದೇ ಪದಕ್ಕೆ ಸೂಚಿಸುವ ಇಚ್ಛೆ ತಮಗಿಲ್ಲವೆಂದೂ ಹೇಳಿಕೆಯಲ್ಲಿ ಸ್ಪಷ್ಟಪಡಿಸಲಾಗಿತ್ತು.

ಗಮನಾರ್ಹ ಅಂಶವೆಂದರೆ ಶ್ರೀ ರಾಜೀವ ಗಾಂಧಿಯವರು ಈ ಹೇಳಿಕೆ ಬಿಡುಗಡೆ ಮಾಡುವಲ್ಲಿ ಹಾಜರಿರಲಿಲ್ಲ. ಆದರೆ ಶ್ರೀಮತಿ ಗಾಂಧಿಯವರು ಯಾವುದೊಂದು ಚಿಂತೆ, ಕ್ಲೇಶ ಅಥವಾ ವ್ಯಥೆಯುಳ್ಳವರಂತೆ ಕಾಣಿಸದೆ ಮುಖವೆಲ್ಲ ನಗುವಾಗಿದ್ದರು. ಅವರು ಅಪರೂಪವಾಗಿ ಹಸಿರು ಸೀರೆ ಉಟ್ಟಿದ್ದರು. ರುದ್ರಾಕ್ಷಿ ಮಾಲೆ ಧರಿಸಿದ್ದ ಅವರ ಹಣೆಯಲ್ಲಿ ಭಸ್ಮ ರೇಖೆಗಳು ಅಸ್ಪಷ್ಟವಾಗಿ ಗೋಚರಿಸುತ್ತಿದ್ದುದು ಇನ್ನೊಂದು ಅಪರೂಪದ ಸಂಗತಿಯಾಗಿತ್ತು.

ದೂರವಾಣಿಗಳು ನಿಷ್ಕ್ರಿಯ: ಶ್ರೀಮತಿ ಗಾಂಧಿಯವರು ರಾಜೀನಾಮೆ ಕೊಡಲು ನಿರ್ಧರಿ

ಸಿದ್ದರೂ ಈಗಾಗಲೇ ರಾಷ್ಟ್ರಪತಿಗಳಿಗೆ ಅದನ್ನು ಸಲ್ಲಿಸಿದ ಹಾಗೆ ಕಾಣಿಸಲಿಲ್ಲ. ರಾಷ್ಟ್ರಪತಿ ಜೇಲ್‌ಸಿಂಗರನ್ನಾಗಲಿ, ಅವರ ಕಾರ್ಯದರ್ಶಿಯನ್ನಾಗಲಿ ಸಂಪರ್ಕಿಸಲು ಸಾಧ್ಯವಾಗಲಿಲ್ಲ. ವಾಸ್ತವವಾಗಿ ರಾಷ್ಟ್ರಪತಿ ಭವನದ ಫೋನುಗಳೆಲ್ಲ ಸ್ತಬ್ಧವಾಗಿದ್ದವು.

ಶ್ರೀ ರಾಜೀವಗಾಂಧಿಯವರ ವಸತಿಯಿಂದ ದೂರವಾಣಿಗೆ ಉತ್ತರ ಸಿಕ್ಕಿದರೂ ಎಳಸು ಹೆಣ್ಣುದನಿಯೊಂದು ಶ್ರೀಗಾಂಧಿಯವರು ಮಾತಾಡಲು ಲಭ್ಯವಿಲ್ಲೆಂದು ಹೇಳಿತು. ನಿಜ ಕೇಳಿದರೆ ಅದು ಟೇಪ್ ಮಾಡಿಟ್ಟ ಸಿದ್ಧ ಉತ್ತರವೆಂದು ಅನಿಸುತ್ತಿತ್ತು.

ಆಕಾಶವಾಣಿಯ ಆಶ್ಚರ್ಯಕರ ವರ್ತನೆ

ನವದೆಹಲಿ, ಏಪ್ರಿಲ್ ೧- ಶ್ರೀಮತಿ ಗಾಂಧಿಯವರ ರಾಜೀನಾಮೆಯ ಸುದ್ದಿಯನ್ನು ಮೊದಲೇ ಲಭ್ಯವಿದ್ದರೂ ಆಕಾಶವಾಣಿ ತನ್ನ ಮಧ್ಯಾಹ್ನ ಒಂದು ಗಂಟೆಯ ಪ್ರಸಾರದಲ್ಲಿ ಬಿತ್ತರಿಸಲಿಲ್ಲ. ಮುಂದಿನ ಪ್ರಸಾರದಲ್ಲಿ ಬಿತ್ತರಿಸಿದರೂ ಅದು ಸಾಮಾನ್ಯವಾಗಿ ಇಂಥ ಮಹಾವಾರ್ತೆಗಳು ಬಂದಾಗ ಮಾಡುವಂತೆ ಅಡ್ಡ ಹೊತ್ತಿನ ವಿಶೇಷ ಬಿತ್ತರಣೆಯನ್ನೇನೂ ಕೈಕೊಳ್ಳಲಿಲ್ಲ.

ಮಾತ್ರವಲ್ಲ, ಯಾವಾಗಲೂ "ಪ್ರಧಾನಮಂತ್ರಿ ಶ್ರೀಮತಿ ಗಾಂಧಿಯವರು" ಎಂಬ ಪಲ್ಲವಿಯೊಡನೆಯೇ ತಪ್ಪದೆ ಪ್ರಾರಂಭವಾಗುವ ವಾರ್ತಾಪ್ರಸಾರ ಇಂದು ಈ ಜಗತ್ತನ್ನೇ ಅಲುಗಿಸುವ ಸುದ್ದಿಯನ್ನು ಯಾವುದೋ ಸಾಧಾರಣ ನಾಗರಿಕನ ಸಾಧಾರಣ ಸುದ್ದಿಯೆಂಬಂತೆ ನಡುವಿನಲ್ಲಿ ಒಂದೆರಡು ನಿಮಿಷಗಳಲ್ಲಿ ಹೇಳಿ ಮುಗಿಸಿತು.

ಅಧಿಕಾರ ಪೀಠದಿಂದ ಇಳಿಯುತ್ತಾರೆಂದಾದೊಡನೆ ಶ್ರೀಮತಿ ಗಾಂಧಿಯವರು ಆಕಾಶವಾಣಿಯ ದೃಷ್ಟಿಯಲ್ಲಿ ಇಷ್ಟು ಇಳಿದು ಹೋದರೇ? ಎಂದು ದಾರಿಹೋಕರು ಕೇಳುತ್ತಿದ್ದಾರೆ.

ಆದರೆ ಕಾಂಗ್ರೆಸ್ ಪಕ್ಷದ ಅಂತರಂಗಜ್ಞರೆನಿಸುವ ಒಬ್ಬ ರಾಜಕಾರಣಿಯ ಪ್ರಕಾರ (ಅವರು ಹೆಸರು ಹೇಳಿಸಿಕೊಳ್ಳಲು ಸಿದ್ಧರಿಲ್ಲ) ಆಕಾಶವಾಣಿ ಮಂತ್ರಿ ಶ್ರೀ ಎಚ್.ಕೆ. ಎಲ್. ಭಗತ್‌ರಿಗೂ, ಶ್ರೀಮತಿ ಗಾಂಧಿಯವರಿಗೂ ಈಚೆಗೆ ಮತಭೇದ ಹೆಚ್ಚುತ್ತಿತ್ತು ಮತ್ತು ಆಕಾಶವಾಣಿಯ ಈ ವಿಪರೀತ ವರ್ತನೆ ಬುದ್ಧಿಪೂರ್ವಕವಾಗಿತ್ತು.

ಈ ಸಂಭವ ಕಡಿಮೆ. ಯಾಕೆಂದರೆ ಶ್ರೀ ಭಗತರು ಈಗ ವಿದೇಶಗಳಲ್ಲಿದ್ದು ಅವರಿಂದ ಇಷ್ಟು ತುರ್ತು ಆಜ್ಞೆ ಬರುವುದು ಸುಲಭವಲ್ಲ. ಶ್ರೀಮತಿ ಗಾಂಧಿಯವರೇ ತಾವು ಪದತ್ಯಾಗ ಮಾಡುವ ಸಂದರ್ಭದಲ್ಲಾದರೂ "ಆಲ್ ಇಂದಿರಾ ರೇಡಿಯೋ" ಎಂಬ ಹೊಟ್ಟೆ ಕಿಚ್ಚಿನ ಅಡ್ಡ ಹೆಸರನ್ನು ತೊಡೆದುಹಾಕಲು ಬಯಸಿರಬಹುದು.

ಭಾರತದ ಶ್ರೇಯಸ್ಸಿಗೆ ತಪಸ್ಸು?

ನವದೆಹಲಿ, ಏಪ್ರಿಲ್ ೧- ತಮ್ಮ ರಾಜೀನಾಮೆಯ ಬಗ್ಗೆ ಶ್ರೀಮತಿ ಇಂದಿರಾ ಗಾಂಧಿಯವರು ಯಾವುದೇ ವಿಷದೀಕರಣ ಕೊಟ್ಟಿಲ್ಲವಾದರೂ ಆ ಬಗ್ಗೆ ರಾಜಕೀಯ ವಲಯಗಳಲ್ಲಿ ಅನೇಕಾನೇಕ ಊಹಾಪೋಹಗಳು ವಾತಾವರಣವನ್ನು ದಟ್ಟಗೊಳಿಸಿವೆ.

ಒಂದು ಊಹೆಯ ಪ್ರಕಾರ ಶ್ರೀಮತಿ ಗಾಂಧಿಯವರು ಆಗಲೇ ತಮ್ಮ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಂಡಿದ್ದಾರೆ. ಪ್ರಧಾನ ಮಂತ್ರಿತ್ವ, ಕಾಂಗ್ರೆಸ್ ಅಧ್ಯಕ್ಷತ್ವ ಎರಡನ್ನೂ ಅವರು

ಬಿಡುವರೆಂದಾದ ಮೇಲೆ ದೇಶದ ರಾಜಕೀಯದಿಂದ ಅವರು ಪೂರ್ತಿ ಕೈತೊಳೆದುಕೊಂಡಂತೆಯೆ. ಆದರೆ ಅರವತ್ತೈದು ದಾಟಿದ್ದರೂ ಇನ್ನೂ ಉತ್ಸಾಹದಿಂದ ಪುಟಿಯುತ್ತಿರುವುದರಿಂದ ಅವರು ಸುಮ್ಮನೆ ಶ್ರೀಮಾನ್ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಹಾಗೆ "ಹಿರಿಯ ರಾಜಕಾರಣಿ"ಯಾಗಿ ಉಳಿಯುವುದು ಅಕಲ್ಪನೀಯ.

ಒಂದು ಸಾಮಾನ್ಯವಾಗಿ ವಿಶ್ವಾಸಾರ್ಹ ಮೂಲದ ಪ್ರಕಾರ ಶ್ರೀಮತಿ ಗಾಂಧಿಯವರು ಹಿಮಾಲಯ ಪರ್ವತದಲ್ಲಿ ಒಂದು ಆಶ್ರಮ ಸ್ಥಾಪನೆ ಮಾಡಿ ಅಲ್ಲಿ ದೇಶಕ್ಕಾಗಿ ಉಗ್ರ ತಪಸ್ಸನ್ನು ಕೈಕೊಳ್ಳುವರು. ಸಾಮಾನ್ಯವಾಗಿ ತಮ್ಮ ಅಂತರಂಗವನ್ನು ಯಾರ ಮುಂದೆಯೂ ಇಂದಿರಾಗಾಂಧಿ ಬಿಡಿಸಿ ಹೇಳುವವರಲ್ಲವಾದರೂ ಒಂದು ಖಾಸಗಿ ಮಾತುಕತೆಯಲ್ಲಿ ದೇಶದ ಸಮಸ್ಯೆಗಳ ಬಗ್ಗೆ ಅವರ ಬಾಯಿಂದ ಒಂದು ವಿಚಿತ್ರ ಮಾತು ಹೊರಬಿದ್ದ ಸಂಗತಿ ಕೇಳಬರುತ್ತಿದೆ. ಭಾರತವನ್ನು ಉಳಿಸಲು ಇನ್ನು ಯಾವ ಸಾಮಾನ್ಯ ವ್ಯಾವಹಾರಿಕ, ರಾಜಕೀಯ ಅಥವಾ ಲೌಕಿಕ ಉಪಾಯ ಫಲಕಾರಿಯಾಗಲಾರದೆಂದು ತಮಗೆ ಮನವರಿಕೆಯಾಗಿದೆಯೆಂದು ಅವರು ಹೇಳಿದರಂತೆ. ಶ್ರೀ ಅರವಿಂದ ಯೋಗಿಗಳ ಗ್ರಂಥಗಳನ್ನು ಅವರು ಈಚೆಗೆ ಓದುತ್ತಿದ್ದಾರೆಂದು ನಂಬಲಾಗಿದೆ.

ಶ್ರೀಮತಿ ಗಾಂಧಿಯವರ ಆಧ್ಯಾತ್ಮಿಕ ಒಲವುಗಳು ಆಗಲೇ ಸರ್ವವಿದಿತವಾಗಿವೆ. ತಪಸ್ವಿಗಳು, ಬ್ರಹ್ಮಚಾರಿಗಳು ದೇವಾಲಯಗಳೇ ಮೊದಲಾದ ಲೋಕೋತ್ತರ ಸನ್ನಿಧಾನಗಳ ಕಡೆ ಅವರು ಸದಾ ಆಕರ್ಷಿತರಾಗುತ್ತಾರೆ. ಈಚೆಗೆ ಹಿಮಾಲಯ ಪರ್ವತಗಳಲ್ಲಿ ಅವರ ಪರವಾಗಿ ಕೆಲವೊಂದು ಸ್ಥಳಗಳ ನಿರೀಕ್ಷೆ ನಡೆದಿತ್ತೆಂದು ವರದಿ ಇದೆ. ತಮ್ಮ ರಾಜೀನಾಮೆಯ ಸುದ್ದಿಯನ್ನು ಕೊಡಲು ಅವರು ಸುದ್ದಿಗಾರರನ್ನು ಬರಮಾಡಿಕೊಂಡಾಗ ಅವರ ಕೊರಳಲ್ಲಿ ರುದ್ರಾಕ್ಷಿಮಾಲೆ ಎಂದಿಗಿಂತ ಪ್ರಮುಖವಾಗಿಯೇ ಕಾಣಿಸಿಕೊಂಡದ್ದನ್ನೂ, ಹಣೆಯ ಮೇಲೆ ವಿಭೂತಿಯ ಅಸ್ಪಷ್ಟ ಗುರುತು ಇದ್ದುದನ್ನೂ ತುಂಬ ಮಹತ್ವದ ಹೆಗ್ಗುರುತುಗಳೆಂದು ಈ ವಲಯಗಳು ಎತ್ತಿ ತೋರಿಸುತ್ತವೆ.

ಶ್ರೀಮತಿ ಗಾಂಧಿಯವರು ಕಾಶ್ಮೀರದ ಕೌಲ ಮನೆತನದಲ್ಲಿ ಹುಟ್ಟಿದವರಾಗಿದ್ದು ಕೌಲರು ಪ್ರಸಿದ್ಧ ತಾಂತ್ರಿಕ ಶೈವ ಪಂಥದವರೆಂಬುದು ಗಮನಾರ್ಹ.

ವಿಶ್ವಾದ್ಯಂತ ವಿಸ್ಮಯ

ನವದೆಹಲಿ, ಏಪ್ರಿಲ್ ೧- ಶ್ರೀಮತಿ ಇಂದಿರಾ ಗಾಂಧಿಯವರ ರಾಜೀನಾಮೆಯ ಸುದ್ದಿಗೆ ವಿಶ್ವದಲ್ಲೆಲ್ಲ ವಿಸ್ಮಯದ ಪ್ರತಿಕ್ರಿಯೆ ಪ್ರಕಟವಾಗಿದೆ.

ಆದರೆ ಅಮೆರಿಕದ ಅಧ್ಯಕ್ಷ ರೇಗನ್ನರು ಮಾತ್ರ ತಮಗೆ ಅಂಥಾ ಆಶ್ಚರ್ಯವಾಗಲಿಲ್ಲವೆಂದು ಟೆನೆಸಿ ನದಿಯಲ್ಲಿ ಮೀನು ಹಿಡಿಯುತ್ತ ಹೇಳಿದರು. ಅವರು ಒಂದು ವಾರದ ಮತ್ಸ್ಯ ವಿಹಾರ ಸುಖವನ್ನು ಅನುಭವಿಸುತ್ತಿದ್ದಾರೆ.

ಇಂಥದೇನಾದರೂ ಸಂಭವಿಸಬಹುದೆಂದು ತಾವು ಕೆಲ ಕಾಲದಿಂದ ನಿರೀಕ್ಷಿಸುವಂತೆ ತಮಗೆ ಬಂದ ವರದಿಗಳು ಸೂಚಿಸುತ್ತಿದ್ದವೆಂದು ಅಧ್ಯಕ್ಷ ರೇಗನ್ನರು ಸಂತುಷ್ಟ ನಸುನಗೆಯೊಡನೆ ಹೇಳಿದರು.

ಶ್ರೀಮತಿ ಗಾಂಧಿಯವರ ಆಂತರಿಕ ಮತ್ತು ವಿದೇಶನೀತಿ ಅಮೇರಿಕಕ್ಕೆ ಕೆಲ ವಿಷಯಗಳಲ್ಲಿ ಇಷ್ಟವಾಗದಿದ್ದರೂ ಅವರು ಅಪ್ರಿಯ ನಿರ್ಣಯಗಳನ್ನು ಕೈಕೊಳ್ಳಬಲ್ಲ ಧೈರ್ಯಶಾಲಿ ಮಹಿಳೆಯಾಗಿದ್ದು ಇದರಲ್ಲಿ ಅವರು ತಮ್ಮನ್ನು ಹೋಲುತ್ತಿದ್ದರೆಂದು ರೇಗನ್ ಮೆಚ್ಚಿಗೆ ವ್ಯಕ್ತಪಡಿಸಿದರು.

ಅತಿಭಾರ: ಕಿಸಿಂಜರ್: ಹಿಂದಿನ ಅಮೆರಿಕನ್ ವಿದೇಶಮಂತ್ರಿ ಡಾ. ಹೆನ್ರಿ ಕಿಸಿಂಜರರು ಇಂದಿರಾ ರಾಜೀನಾಮೆ ತಮಗೆ ಪೂರ್ತಿ ವಿಸ್ಮಯಕರವಾಯಿತೆಂದರು. ಅವರು ಕೂಡ ಶ್ರೀಮತಿ ಗಾಂಧಿಯವರ ಧೈರ್ಯವನ್ನು ಕೊಂಡಾಡಿದರಾದರೂ ಭಾರತದಂಥ ದೇಶಕ್ಕೆ ಇಂಥ ಧೈರ್ಯಶಾಲಿಯನ್ನು ಬಹಳಕಾಲ ಹೊರುವ ಶಕ್ತಿ ಇದೆಯೇ ಎಂಬುದು ಪ್ರಶ್ನೆಯಾಗಿತ್ತೆಂದರು. ವಿಶ್ವ ರಾಜಕಾರಣಿಗಳಲ್ಲಿ ಬುದ್ಧಿ-ಬುದ್ಧಿಗಳ ಕತ್ತಿಯಾಟದಲ್ಲಿ ಇಂದಿರಾ ಒಬ್ಬರನ್ನೇ ತಮ್ಮ ಸಮಾನಿಕರೆಂದು ಕಿಸಿಂಜರ್ ಭಾವಿಸಿದ್ದಾರೆ.

ಬ್ರಿಟಿಷ್ ಅಭಿಪ್ರಾಯ: ವಿಷಾದಕರ: ಬ್ರಿಟಿಷ್ ಪ್ರಧಾನಿ ಶ್ರೀಮತಿ ಮಾರ್ಗರೆಟ್ ಥ್ಯಾಚರ್ ಶ್ರೀಮತಿ ಗಾಂಧಿಯವರ ರಾಜೀನಾಮೆ ವಿಷಾದಕರ ಎಂದರು. ಶ್ರೀಮತಿ ಗಾಂಧಿಯವರ ನಿರ್ಗಮನದಿಂದ ತಾವು (ಥ್ಯಾಚರ್) ಜಗತ್ತಿನ ಏಕಮಾತ್ರ ಪ್ರಮುಖ ಮಹಿಳಾ ಪ್ರಧಾನಿಯಾಗಿ ಉಳಿಯುತ್ತಿದ್ದು ತಮಗೆ ಒಂಟಿತನ ಅನಿಸುವುದು ಖಂಡಿತ ಎಂದವರು ಹೇಳಿದರು. ಇಂದಿರಾಗಾಂಧಿಯವರು ಸ್ವಲ್ಪ ಕಡಿಮೆ ಸಮಾಜವಾದಿಯಾಗಿದ್ದರೆ ಸ್ವಲ್ಪ ಹೆಚ್ಚು ಕಾಲ ಅಧಿಕಾರದಲ್ಲಿ ಉಳಿಯಬಹುದಿತ್ತೇ ಎಂದು ಶ್ರೀಮತಿ ಥ್ಯಾಚರರಿಗೆ ಅನುಮಾನ ಇದೆ.

ರಶಿಯ: ಹೇಳುವುದಕ್ಕೇನೂ ಇಲ್ಲ: ಮಾಸ್ಕೋದಲ್ಲಿ ನಮ್ಮ ಪ್ರತಿನಿಧಿ ಉಚ್ಚ ಸರಕಾರಿ ವಲಯಗಳನ್ನು ಸಂಪರ್ಕಿಸಿದಾಗ ಈ ಬಗ್ಗೆ ಯಾರೂ ತತ್‌ಕ್ಷಣ ಏನೂ ಹೇಳಲು ಒಪ್ಪಲಿಲ್ಲ. ರಶಿಯದ ಅಧಿಕೃತ ಪ್ರತಿಕ್ರಿಯೆ ತಿಳಿಯಲು ಕನಿಷ್ಠಪಕ್ಷ ಒಂದು ವಾರ ಬೇಕಾದೀತೆಂದು ವಿದೇಶೀ ನಿರೀಕ್ಷಕರು ಭಾವಿಸಿದ್ದಾರೆ. ವಾಸ್ತವಿಕವಾಗಿ ರಾಜೀನಾಮೆ ಸುದ್ದಿಯನ್ನು ಮಾಸ್ಕೋ ಅಥವಾ ಯಾವುದೇ ಸೋವಿಯೆತ್ ಆಕಾಶವಾಣಿ ಇನ್ನೂ ಬಿತ್ತರಿಸಿಯೇ ಇಲ್ಲ. ನಾಳಿನ ಪತ್ರಿಕೆಗಳಲ್ಲಿ ಈ ಸುದ್ದಿ ಪ್ರಕಟವಾಗುವುದೂ ಸಂಶಯಾಸ್ಪದ. ಮಾಸ್ಕೋದಲ್ಲಿ ಯಾರೊಬ್ಬ ಮಹತ್ವದ ದೇಶಿ ಅಥವಾ ವಿದೇಶಿ ವ್ಯಕ್ತಿ ಅಧಿಕೃತವಾಗಿ ನಿಧನಹೊಂದಬೇಕಾದರೇನೇ ಅವನ ವೈದ್ಯಕೀಯ ನಿಧನದಿಂದ ೭೨ ಗಂಟೆ ಕಾಲ ಹಿಡಿಯುತ್ತದೆಂದು ಒಬ್ಬ ರಶಿಯನ್ ತಮಾಷೆಗಾರ ಹೇಳುತ್ತಾನೆ. ಇನ್ನು ರಾಜೀನಾಮೆ ಸುದ್ದಿಗೆ ಏನವಸರ?

ಆದರೆ ಅನಧಿಕೃತ ಪ್ರತಿಕ್ರಿಯೆ ನೀಡುತ್ತ ಒಬ್ಬ ಅಧಿಕಾರಿ ಶ್ರೀಮತಿ ಇಂದಿರಾ ಗಾಂಧಿಯವರ ರಾಜೀನಾಮೆಯಲ್ಲಿ ಅಮೆರಿಕನ್ ಸಾಮ್ರಾಜ್ಯವಾದಿಗಳ ಕೈವಾಡ ಇದೆಯೆಂಬುದು ಖಚಿತ ಎಂದನು.

ಪ್ರಧಾನಮಂತ್ರಿ ನಿವಾಸದಿಂದ ಕಾಗದದ ಹೊಗೆ: ಗುಪ್ತಪತ್ರಗಳ ಹೋಳಿ?

ನವದೆಹಲಿ, ಎಪ್ರಿಲ್ ೧- ಪ್ರಧಾನಮಂತ್ರಿ ಇಂದಿರಾಗಾಂಧಿಯವರ ನಿವಾಸದ ಹೊಗೆ ಬಂಬಿನಿಂದ ಉದ್ದನ್ನ ಕಾಗದದ ಹೊಗೆ ಕಂಬವೊಂದು ಹೊರಹೊಮ್ಮುತ್ತಿರುವುದಾಗಿ ಈ

ಸಂಚಿಕೆ ಮುದ್ರಣಕ್ಕೆ ಹೋಗುತ್ತಿರುವಾಗ ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

ಅಧಿಕಾರ ತ್ಯಾಗಕ್ಕೆ ಪೂರ್ವಭಾವಿಯಾಗಿ ಇಂದಿರಮ್ಮನವರು ಗುಪ್ತಪತ್ರಗಳ ದಹನ ಮಾಡುತ್ತಿದ್ದಾರೆಂದು ಇದನ್ನು ಅರ್ಥೈಸಲಾಗಿದೆ.

ಪ್ರಧಾನಿ ಪದಕ್ಕೆ ಮೇನಕಾ ಗಾಂಧಿ? ಸಂಜಯ ಮಂಚದ ವರಾತ

ನವದೆಹಲಿ, ಎಪ್ರಿಲ್ ೧- ಶ್ರೀಮತಿ ಇಂದಿರಾಗಾಂಧಿ ತೆರವು ಮಾಡಲಿರುವ ಪ್ರಧಾನ ಮಂತ್ರಿ ಪದಕ್ಕೆ ಬರುವವರು ಯಾರು? ಎಂಬ ಪ್ರಶ್ನೆ ರಾಜಕೀಯ ವರ್ಗಗಳಲ್ಲಿ ಬಿಸಿಬಿಸಿಯಾಗಿ ಚರ್ಚಿಸಲ್ಪಡುತ್ತಿರುವಾಗ ದಿವಂಗತ ಸಂಜಯ ಗಾಂಧಿಯವರ ಪತ್ನಿ ಮೇನಕಾ ಗಾಂಧಿಯವರೇ ಇದಕ್ಕೆ ತಕ್ಕ ಧುರೀಣರೆಂದು ಅ.ಭಾ. ಸಂಜಯ ಮಂಚದ ವಕ್ತಾರರು ಇಂದಿಲ್ಲಿ ಹೇಳಿದರು.

ದೇಶಕ್ಕೆ ನೆಹರೂ ಮನೆತನದ ಮೇಲೆ ಅಕ್ಷಮ್ಯ ವಿಶ್ವಾಸವಿದೆಯೆಂಬುದು ನಿರ್ವಿವಾದ. ದಿವಂಗತ ಸಂಜಯಗಾಂಧಿ ಜೀವಂತರಾಗಿದ್ದರೆ ಅವರೇ ಪ್ರಧಾನಮಂತ್ರಿಯಾಗುತ್ತಿದ್ದರು. ರಾಜೀವ ಗಾಂಧಿಯವರನ್ನು ತಾವು ಸೂಚಿಸುವುದಿಲ್ಲವೆಂದು ಶ್ರೀಮತಿ ಗಾಂಧಿ ಆಗಲೇ ಹೇಳಿದ್ದಾರೆ. ಹೇಗಿದ್ದರೂ ರಾಜೀವ ಗಾಂಧಿಯವರ ಜಠರಕ್ಕೆ ರಾಜಕೀಯ ಸರಿಯಾಗಿ ಒಗ್ಗುವುದಿಲ್ಲವೆಂದು ಇಷ್ಟರಲ್ಲೇ ವಿದಿತವಾಗಿದೆ.

ಆದ್ದರಿಂದ ಶ್ರೀಮತಿ ಮೇನಕಾಗಾಂಧಿ ಭಾರತದ ಪರಮಾಧಿಕಾರ ಪದಕ್ಕೆ ಅನಿವಾರ್ಯ ಮತ್ತು ಏಕಮಾತ್ರ ಸೂಕ್ತ ಅಭ್ಯರ್ಥಿಯೆಂದು ಸಂಜಯ ಮಂಚದ ಭಾವನೆ.

ಮೇನಕಾಗಾಂಧಿ ಪಂಜಾಬಿ ಮೂಲದವರಾದ್ದರಿಂದ ಅವರನ್ನು ಪ್ರಧಾನಿಯಾಗಿ ಮಾಡಿದರೆ ಪಂಜಾಬ್ ಸಮಸ್ಯೆಯನ್ನು ಬಿಡಿಸಲು ಅನುಕೂಲವೆಂದೂ ವಾದಿಸಲಾಗುತ್ತದೆ.

ದೇಶಕ್ಕೆ ಅನಿಷ್ಟ: ಬಿ.ವಿ. ರಾಮನ್

ಬೆಂಗಳೂರು, ಎಪ್ರಿಲ್ ೧- ವಿಶ್ವಖ್ಯಾತ ಜ್ಯೋತಿಷಿ ಬಿ.ವಿ. ರಾಮನ್ನರ ಮತದಲ್ಲಿ ಫಾಲ್ಗುಣ ಅಮಾವಾಸ್ಯೆ ದಿನ ಬಂದ ಈ ರಾಜೀನಾಮೆ ಸುದ್ದಿ ದೇಶಕ್ಕೆ ಘೋರ ಅನಿಷ್ಟ ಸೂಚಕವಾಗಿದೆ.

ವಕ್ರಶನಿ ಉಚ್ಚದಲ್ಲಿದ್ದು ಕುಜನು ಸ್ವಕ್ಷೇತ್ರ ಗತನಾಗಿರುವುದರಿಂದ ದೇಶಕ್ಕೆ ಯುದ್ಧ ಕ್ಷಾಮಡಾಮರ ವಿಪತ್ತುಗಳು ಘಟಿಸಲಿರುವಾಗ ಶ್ರೀಮತಿ ಗಾಂಧಿ ದುರ್ಮುಹೂರ್ತದಲ್ಲಿ ರಾಜೀನಾಮೆ ಕೊಟ್ಟು ಸಂಕಟ ಹೆಚ್ಚಿಸಿದ್ದಾರೆಂದು ಅವರು ಹೇಳಿದ್ದಾರೆ.

ನೊಗ ಹೊರಲು ಮೊರಾರ್ಜಿ ಸಿದ್ಧ

ನವದೆಹಲಿ, ಏಪ್ರಿಲ್, ೧- ಇಂದು ಸಾಯಂಕಾಲ ವಿಮಾನ ಮೂಲಕ ದೆಹಲಿಗೆ

ಬಂದಿಳಿದ ಹಿಂದಿನ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿಯವರು ಇಂದಿರಾ ರಾಜೀನಾ ಮೆಗೂ, ತಮ್ಮ ಆಗಮನಕ್ಕೂ ಸಂಬಂಧವಿಲ್ಲವೆಂದು ಸಾಧಿಸಿದರು.

ತಡವಾದರೂ ಶ್ರೀಮತಿ ಗಾಂಧಿ ರಾಜೀನಾಮೆ ಕೊಟ್ಟು ಒಳ್ಳೇದು ಮಾಡಿದರೆಂದು ಅವರು ಹೇಳಿದರು. ದೇಶಕ್ಕೆ ತನ್ನ ಭವಿಷ್ಯ ಕಂಡುಕೊಳ್ಳಲು ಒಂದೇ ಕುಟುಂಬ ಅಥವಾ ವ್ಯಕ್ತಿಯ ಅವಲಂಬನೆ ಅಪಾಯಕರ. ತಾವು ಇನ್ನೊಮ್ಮೆ ಪ್ರಧಾನಮಂತ್ರಿಯಾದರೆ ಒಂದೇ ವ್ಯಕ್ತಿ ಅಥವಾ ಕುಟುಂಬ ಹತ್ತು ವರ್ಷಗಳಿಗಿಂತ ಹೆಚ್ಚು ಕಾಲ ಪ್ರಧಾನಮಂತ್ರಿಯಾಗಿ ಉಳಿಯದಂತೆ ಸಂವಿಧಾನ ತಿದ್ದುಪಡಿ ತರುವುದಾಗಿ ಮೊರಾರ್ಜಿ ತಿಳಿಸಿದರು.

ಒಂದು ಪ್ರಶ್ನೆಗೆ ಉತ್ತರಿಸುತ್ತ, ದೇಶ ಕರೆಕೊಟ್ಟರೆ ತಾವು ಮತ್ತೆ ರಾಷ್ಟ್ರದ ನೊಗಕ್ಕೆ ಹೆಗಲು ಕೊಡಲು ಸಿದ್ಧವೆಂದು ಅವರು ನುಡಿದರು.

ಅವರ ಅಪರ ವಯಸ್ಸಿನ ಪ್ರಸ್ತಾಪ ಮಾಡಿದಾಗ ನೀವು ಪ್ರಧಾನಮಂತ್ರಿ ಪದಕ್ಕೆ ಸೂಚಿ ಸುವ ಯಾವನೇ ಪುರುಷನ ಹತ್ತಿರ ತಾನು ಕುಸ್ತಿಗೆ ಸಿದ್ಧವೆಂದು ಮೊರಾರ್ಜಿ ಆಹ್ವಾನವಿತ್ತರು.

ದೇಶ ಇನ್ನೊಂದು ಸಲ ಮಹಿಳಾ ಪ್ರಧಾನಿಯನ್ನು ಹೊರಲಾರದೆಂದು ಮೊರಾರ್ಜಿ ಮತ.

ರಾಜೀನಾಮೆ ಬೇಡ

ಆರ್.ಜಿ.ಆರ್. ಮೋರ್ಚಾ

ಬೆಂಗಳೂರು, ಏಪ್ರಿಲ್:೧-

ಶ್ರೀಮತಿ ಇಂದಿರಾ ಗಾಂಧಿಯವರು ಇಂದಿನ ಇಕ್ಕಟ್ಟಿನ ಪ್ರಸಂಗದಲ್ಲಿ ದೇಶದ ಕೈ ಬಿಡಬಾ ರದೆಂದು ಅವರ ಮೇಲೆ ಒತ್ತಡ ತರಲು ಕರ್ನಾಟಕದ ಮಾಜಿಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾಯರು ಬೆಂಗಳೂರಿನಿಂದ ದೆಹಲಿಗೆ ಒಂದು ಬೃಹತ್ ಯುವಮೋರ್ಚಾವನ್ನು ಹೊರಡಿಸುವುದಾಗಿ ಅವರೇ ಸ್ವತಃ ಹೇಳಿದ್ದಾರೆ.

ಹೊರಡುವಾಗ ಒಂದು ಲಕ್ಷ ಕಾಂಗ್ರೆ ಭಟರು ಅದರಲ್ಲಿ ಸೇರಲಿದ್ದಾರೆಂದೂ ದೆಹಲಿ ತಲುಪುವುದರೊಳಗೆ ಅದು ಒಂದು ಕೋಟಿಯ ಮಹಾಪ್ರವಾಹವಾಗಬಹುದೆಂದೂ ಈ ಪ್ರವಾಹಕ್ಕೆ ಮಣಿದು ಶ್ರೀಮತಿ ಗಾಂಧಿಯವರು ತಮ್ಮ ನಿರ್ಣಯ ಹಿಂದೆಗೆ ದುಕೊಳ್ಳುವರೆಂದೂ ರಾಯರ ಮತ.

ಬೆಳ್ಳಿಯ ಗದೆ ಹಿಡಿದು ಸ್ವತಃ ಗುಂಡೂರಾಯರು ಮೋರ್ಚಾದ ಅಗ್ರಸ್ಥಾನದಲ್ಲಿರುವರು.

ಮೊಯ್ಲಿ ಸೇರುವುದಿಲ್ಲ

ಶ್ರೀಮತಿ ಗಾಂಧಿಯವರ ರಾಜೀನಾಮೆ ಕುರಿತು ಪ್ರತಿಕ್ರಿಯೆ ಕೇಳುವುದಕ್ಕೆ ನಿಮ್ಮ ಪ್ರತಿನಿಧಿ ಕರ್ನಾಟಕ ವಿಧಾನಸಭಾ ವಿರೋಧಿ ಧುರೀಣ ವೀರಪ್ಪ ಮೊಯ್ಲಿಯವರ ಮನೆಗೆ ಹೋದಾಗ ಅವರು ಮೊದಲು ಪ್ರತಿನಿಧಿಯ ಯಾವುದೇ ಕಿಸೆಯಲ್ಲಿ ಟೇಪ್ ರೆಕಾರ್ಡ್‌ರ್ ಇಲ್ಲವೆಂದು ತಮ್ಮ ಕಾರ್ಯದರ್ಶಿಯಿಂದ ದೇಹ ತಪಾಸಣೆ ಮಾಡಿಸಿ ಖಾತ್ರಿ ಮಾಡಿಕೊಂಡು ಆಮೇಲೆಯೆ ಮಾತಾಡಿದರು.

ರಾಷ್ಟ್ರನಾಯಕಿಯ ರಾಜೀನಾಮೆ ಅತ್ಯಂತ ಆಘಾತಕರವೆಂದೂ, ಅದನ್ನು ಕೈಬಿಡಲು ಶ್ರೀಮತಿಯವರಿಗೆ ತಾವು ಕರ್ನಾಟಕದಿಂದ ಒಂದು ಲಕ್ಷ ತಂತಿಕಳಿಸಲು ಸಂಘಟನೆ ಮಾಡಲಿರುವುದಾಗಿಯೂ ಮೊಯ್ಲಿ ಹೇಳಿದರು.

ಆದರೆ ಅವರು ಗುಂಡೂರಾಯರ ಮೋರ್ಚಾದಲ್ಲಿ ಸೇರಲು ಇಷ್ಟಪಡುವುದಿಲ್ಲ. ಕಾರಣ ಕೊಡಲು ಅವರು ನಿರಾಕರಿಸಿದರು.

ಇದು ಹೆಗಡೆ ಕುತಂತ್ರ: ಬಂಗಾರಪ್ಪ

ಬೆಂಗಳೂರು, ಏಪ್ರಿಲ್:೧

ಶ್ರೀಮತಿ ಗಾಂಧಿಯವರ ರಾಜೀನಾಮೆ ಬಗ್ಗೆ ಪ್ರತಿಕ್ರಿಯೆ ಕೇಳಲು ಕ್ರಾಂತಿರಂಗದ ನಾಯಕ ಶ್ರೀ ಎಸ್. ಬಂಗಾರಪ್ಪನವರನ್ನು ಸಂಪರ್ಕಿಸಿದಾಗ ಅವರು ದೇಶಕ್ಕೆ ಆಘಾತಕರವಾದ ಈ ನಿರ್ಣಯಕ್ಕೆ ಕರ್ನಾಟಕ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಕುತಂತ್ರವೇ ಕಾರಣವೆಂಬುದಕ್ಕೆ ತಮ್ಮ ಹತ್ತಿರ ನಿಸ್ಸಂದಿಗ್ಧವಾದ ಪುರಾವೆಗಳಿವೆಯೆಂದು ಹೇಳಿದರು.

ವಿಶ್ವಕೋರ್ಟಿನ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ವಿಚಾರಣಾ ಸಮಿತಿ ನೇಮಿಸಿದರೆ, ಅದರ ಮುಂದೆ ಪುರಾವೆಗಳನ್ನು ಹಾಜರುಪಡಿಸುವುದಾಗಿ ಬಂಗಾರಪ್ಪ ತಿಳಿಸಿದರು.

ಸಂತ ಲೊಂಗೋವಾಲ ಪ್ರಧಾನಿಯಾಗಲಿ: ಸುಬ್ರಹ್ಮಣ್ಯಸ್ವಾಮಿ ಸಲಹೆ

ನವದೆಹಲಿ, ಏಪ್ರಿಲ್: ೧

ಈಚೆಗೆ ಜನತಾಪಕ್ಷದ ಅಧ್ಯಕ್ಷ ಪದಕ್ಕೆ ಸ್ಪರ್ಧಿಸಿ ಸೋತ ಶ್ರೀ ಸುಬ್ರಹ್ಮಣ್ಯಂ ಸ್ವಾಮಿಯವರು ಅಕಾಲಿ ನಾಯಕ ಸಂತ ಲೊಂಗೋವಾಲರನ್ನು ಮುಂದಿನ ಪ್ರಧಾನಿಯಾಗಿ ಸರ್ವಪಕ್ಷಗಳೂ ಸೇರಿ ಆರಿಸುವುದಾದರೆ ಒಂದೇ ಪೆಟ್ಟಿಗೆ ಪಂಜಾಬು ಸಮಸ್ಯೆ ಪರಿಹಾರವಾಗುವುದೆಂದು ಅಪ್ಪಟ ಹೊಸ ಸೂಚನೆ ಮಾಡಿದ್ದಾರೆ. ಆಗ ಪಾಕಿಸ್ತಾನದೊಡನೆ ಯುದ್ಧವಾದರೆ ಸಿಖ್ಖರು ಜೀವದ ಹಂಗುದೊರೆದು ದೇಶ ರಕ್ಷಣೆ ಮಾಡುವರೆಂದು ಸ್ವಾಮಿ ಮತ.

ಚರಣ್, ವಾಜಪೇಯಿ ಚರ್ಚೆ

ನವದೆಹಲಿ, ಏಪ್ರಿಲ್:೧

ಪ್ರಧಾನಿಯ ರಾಜೀನಾಮೆಯ ಸುದ್ದಿ ಬಂದ ತತ್‌ಕ್ಷಣ ಲೋಕದಳದ ಶ್ರೀ ಚರಣ್‌ಸಿಂಗ್ ಮತ್ತು ಭಾಜಪಾಧ್ಯಕ್ಷ ಶ್ರೀ ಅಟಲಬಿಹಾರಿ ವಾಜಪೇಯಿ ಸುದ್ದಿಗಾರರನ್ನು ತಪ್ಪಿಸಿಕೊಂಡು ಚರಣಸಿಂಗ್ ನಿವಾಸದಲ್ಲಿ ಒಂದು ಗಂಟೆ ಏಕಾಂತ ಮಂತ್ರಾಲೋಚನೆಯಲ್ಲಿ ಮಗ್ನರಾಗಿದ್ದರು.

ಅವರು ಹೊರಗೆ ಬಂದಾಗ ಒಳಗೆ ಹೋಗುವಾಗ ಇದ್ದಷ್ಟು ಉತ್ಸಾಹದಲ್ಲಿರಲಿಲ್ಲ.

ಇಬ್ಬರೂ ಪ್ರಯತ್ನ ಪೂರ್ವಕ ನಗುತ್ತ ಛಾಯಾ ಚಿತ್ರಕ್ಕೆ ಪೋಸು ಕೊಟ್ಟರು. ರಾಜೀನಾಮೆ ಬಗ್ಗೆ ಮುಂದಿನ ಚುನಾವಣೆಯನ್ನು ಎದುರಿಸಲು ಧೈರ್ಯವಿಲ್ಲದೆ ಇಂದಿರಾ ಕೆಳಗಿಳಿಯುತ್ತಿ

ದ್ದಾರೆಂದು ಏಕಕಂಠದಿಂದ ಅವರು ಹೇಳಿದರೂ ಭವಿಷ್ಯದ ಬಗ್ಗೆ ಚರ್ಚಿಸಲು ಸುತಾರಂ ಒಪ್ಪಲಿಲ್ಲ.

ಹೆಗಡೆ ಪ್ರತಿಕ್ರಿಯೆ ನಾಳೆ

ಬೆಂಗಳೂರು, ಏಪ್ರಿಲ್: ೧- ಕರ್ನಾಟಕ ಮುಖ್ಯಮಂತ್ರಿ ಹೆಗಡೆಯವರನ್ನು ಪ್ರಧಾನಿ ರಾಜೀನಾಮೆ ಬಗ್ಗೆ ವಿಚಾರಿಸಿದಾಗ ತಮಗೆ ಯೋಚಿಸಲು ಇನ್ನೂ ಪುರುಸೊತ್ತು ಆಗಿಲ್ಲವೆಂದು ಹೇಳಿ, ನಾಳೆ ಮುಂಜಾನೆವರೆಗೆ ಕಾಯಲು ಕೇಳಿಕೊಂಡರು.

ಪೂಜಾರಿ ಸಭೆಯಲ್ಲಿ ಗಲಾಟೆ

ಮಂಗಳೂರು, ಏಪ್ರಿಲ್: ೧- ಶೆಡ್ಯೂಲ್ಡ್ ಬ್ಯಾಂಕೊಂದರ ಸಾಲ ಮೇಳದಲ್ಲಿ ಪಾಲ್ಗೊಂಡಿದ್ದ ಸಚಿವ ಶ್ರೀ ಜನಾರ್ಧನ ಪೂಜಾರಿಯವರ ಸಭೆಯಲ್ಲಿ ಕೋಲಾಹಲವೆದ್ದು ಹೋಯಿತು.

ಶ್ರೀ ಪೂಜಾರಿಯವರು ಸಾಲಾರ್ಥಿಗಳು ತುಂಬಿದ್ದ ಸಭೆಯಲ್ಲಿ ಭಾಷಣ ಮಾಡುತ್ತ ಬ್ಯಾಂಕ್ ಅಧಿಕಾರಿಗಳ ಬಗ್ಗೆ ಕೆಲ ಅಸತ್ಯವಲ್ಲದಿದ್ದರೂ ಅಪ್ರಿಯ ಮಾತುಗಳನ್ನು ಅಗತ್ಯಕ್ಕಿಂತ ಹೆಚ್ಚಿನ ನಿಷ್ಠುರತನದಿಂದ ಹೇಳುತ್ತಿದ್ದರು. ಈ ನಡುವೆ ಆಕಾಶವಾಣಿಯಲ್ಲಿ ಬಂದ ಸುದ್ದಿಯನ್ನು ಬ್ಯಾಂಕ್ ನೌಕರರೊಬ್ಬರು ಬಂದು ಅಧಿಕಾರಿಗಳ ಕಿವಿಯಲ್ಲಿ ಹಾಕಿದರು.

ಆವರೆಗೆ ಪೆಚ್ಚುಮೋರೆ ಹಾಕಿ ತರಾಟೆಯನ್ನು ಕೇಳುತ್ತಿದ್ದ ಅಧಿಕಾರಿಗಳೊಬ್ಬರು ಸುದ್ದಿ ಕೇಳಿದವರೇ ಎದ್ದು ಪೂಜಾರಿ ವಿರುದ್ಧ ಘೋಷಣೆಮಾಡಿ ಸಭಾತ್ಯಾಗ ಮಾಡಿದರು. ಅವರ ಹಿಂದೆ ಅಧಿಕಾರಿಗಳೆಲ್ಲ ಎದ್ದು ಹೋಗಿಬಿಟ್ಟರು.

ಪೂಜಾರಿಯವರು ಪರಿಸ್ಥಿತಿಯನ್ನರಿತು ಭಾಷಣವನ್ನು ಅಷ್ಟಕ್ಕೇ ಮುಗಿಸಿ ಎದ್ದು ಹೋದರು.

ಸಾಲಾರ್ಥಿಗಳಿಗೆ ಇದು ಅರ್ಥವಾಗಲು ಕೆಲ ನಿಮಿಷಗಳೇ ಹಿಡಿದವು.

ಶ್ರೀ ಪೂಜಾರಿಯವರು ತಕ್ಷಣ ದೆಹಲಿಗೆ ಹೊರಟು ಹೋದರು.

ಕಾಂಗ್ರೆಸ್ ವಲಯಗಳಲ್ಲಿ ಪ್ರಳಯ ಗಾಬರಿ

ನವದೆಹಲಿ, ಏಪ್ರಿಲ್: ೧

ಶ್ರೀಮತಿ ಗಾಂಧಿಯವರ ರಾಜೀನಾಮೆಯಿಂದ ಕಾಂಗ್ರೆಸ್- ಐ ಪಕ್ಷದ ವಲಯಗಳಲ್ಲಿ ಹೇಳಲಾರದ ಗಾಬರಿ ಹಬ್ಬಿದೆ. ಪಕ್ಷದ ಕಾರ್ಯಾಧ್ಯಕ್ಷ ಶ್ರೀ ಕಮಲಾಪತಿ ತ್ರಿಪಾಠಿಯವರನ್ನು ಕಾಣಹೋದಾಗ ಅವರು ತಲೆ ಹಿಡಿದುಕೊಂಡು ಕುಳಿತುಬಿಟ್ಟಿದ್ದರು. "ಏನು ಹೇಳಲಿ? ನನ್ನನ್ನೊಂದು ಮಾತು ಕೇಳದೆ ದುಡುಕಿ ಬಿಟ್ಟರು!" ಎಂದರು.

ಅನೇಕ ನಾಯಕರು ನಾಳೆ ಯುಗಾದಿ ಹಬ್ಬದ ನಿಮಿತ್ತ ರಾಜಧಾನಿಯಲ್ಲಿರಲಿಲ್ಲ. ಇದ್ದವರು

ಏನೂ ಹೇಳಲು ಒಪ್ಪಲಿಲ್ಲ.

ಆದರೆ ಗುಂಪುಗಳ ನಾಯಕರ ಮನೆಗಳಲ್ಲಿ ಗುಂಪುಗಳ ಸಭೆಗಳು ಸೇರಿದ್ದವು. ದೇಶದ ಭವಿಷ್ಯಕ್ಕಿಂತ ನಮ್ಮ ಸ್ವಂತದ ಭವಿಷ್ಯದ ಚಿಂತೆ ನಮ್ಮಮುಂದೆ ಧುತ್ತೆಂದು ನಿಂತಿದೆ ಎಂದು ಒಬ್ಬ ಪ್ರಮುಖರು ಪ್ರಾಂಜಲವಾಗಿ ಒಪ್ಪಿಕೊಂಡರು.

ಶ್ರೀಮತಿ ಗಾಂಧಿಯವರು ಕೊನೆಗೂ ತಮ್ಮ ನಿರ್ಣಯ ಬದಲಿಸಬಹುದೆಂಬ ಆಶೆಯೊಂದನ್ನು ಅವರು ಇರಿಸಿಕೊಂಡಿದ್ದಂತೆ ಕಂಡಿತು.

ಕೊನೆಯಚ್ಚು

ನವದೆಹಲಿ, ಎಪ್ರಿಲ್ ೨- ಶ್ರೀಮತಿ ಇಂದಿರಾ ಗಾಂಧಿಯವರು ರಾಜೀನಾಮೆ ಕೊಡುವುದಿಲ್ಲ.

ಇಂದು ಮಧ್ಯರಾತ್ರಿ ೦-೧ ನಿಮಿಷಕ್ಕೆ ಪ್ರಧಾನಮಂತ್ರಿ ಭವನದಿಂದ ದೂರವಾಣಿ ಮೂಲಕ ಎಲ್ಲ ಸುದ್ದಿ ಸಂಸ್ಥೆಗಳಿಗೆ ಬಂದ ಸಂದೇಶ ಪ್ರಕಾರ ಹಿಂದಿನ ದಿನದ ರಾಜೀನಾಮೆ ಹೇಳಿಕೆ ಒಂದು ಎಪ್ರಿಲ್ ಫೂಲ್ ಕೀಟಲೆಯಾಗಿದ್ದು, ನಿನ್ನೆ ಎಪ್ರಿಲ್ ೧ನೇ ತಾರೀಖೆಂದು ನೆನೆದುಕೊಳ್ಳದೆ ಸುದ್ದಿ ಸೂರಿಗಳು ಗಾಳವನ್ನು ನುಂಗಿ ಮೋಸ ಹೋದದ್ದು ಪ್ರಧಾನಮಂತ್ರಿಗಳಿಗೆ ಆಶ್ಚರ್ಯವನ್ನೂ, ಹಿಡಿಸಲಾರದ ನಗುವನ್ನೂ ತಂದಿದೆ.

Grams: Karnataka
Fax: 0836/362760

Phone : (0836) 364305 - 07
(080) 2214384

ಲೋಕ ಶಿಕ್ಷಣ ಟ್ರಸ್ಟ್

ಗ್ರಂಥಮಾಲೆಯ ಪ್ರಕಟಣೆಗಳು

ಹುಬ್ಬಳ್ಳಿ-ಗುಲಬರ್ಗಾ-ಬೆಂಗಳೂರು

	ಪುಸ್ತಕದ ಹೆಸರು	ಲೇಖಕರ ಹೆಸರು	ಬೆಲೆ
1.	ಕೃಷ್ಣಾವತಾರ ಭಾಗ-1,3,4,6,7,9-10	ಮೂಲ: ಶ್ರೀ ಕೆ.ಎಂ. ಮುನ್ಷಿ ಅನು: ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ	20-00
2.	ಕೃಷ್ಣಾವತಾರ ಭಾಗ-2,5,8	" "	25-00
3.	ನೆನಪಿನಂಗಳದಲ್ಲಿ	ಶ್ರೀ ಜಿ.ಎಂ. ಪಾಟೀಲ	20-00
4.	ಆಯುರ್ವೇದ	ಡಾ. ರಂಗೇಶ ಪರಮೇಶ್ ಆರ್.ಮತ್ತು ಡಾ.ಜಯಪ್ರಕಾಶ ನಾರಾಯಣ	10-00
5.	ಕೃಷ್ಣಾವತಾರದ ಕೊನೆಯ ಗಳಿಗೆಗಳು	ಪ್ರೊ. ಕೆ.ಎಸ್. ನಾರಾಯಣಾಚಾರ್ಯ	25-00
6.	ಮೊಹರೆ ಹನುಮಂತರಾಯರು	---------------	6-00
7.	ಅನಾಸಕ್ತಿ ಯೋಗ	ಮೂಲ: ಶ್ರೀ ಎಮ್.ಕೆ. ಗಾಂಧಿ ಅನು: ಶ್ರೀ ನಿಟ್ಟೂರ ಶ್ರೀನಿವಾಸರಾಯರು	15-00
8.	ವಿಚಾರಜ್ಯೋತಿ	ಪ್ರೊ. ಕೆ.ಟಿ. ಪಾಂಡುರಂಗಿ	12-00
9.	ಭಾವೋದ್ವೇಗ ಮತ್ತು ನಿಮ್ಮ ಆರೋಗ್ಯ	ಡಾ. ಸಿ. ಆರ್. ಚಂದ್ರಶೇಖರ್	4-00
10.	ಶತಾಯುಷಿ ಪಂ. ಸುಧಾಕರ ಚತುರ್ವೇದಿ (107ರ ಮೆಲುಕು)	ನಂ. ನಾಗಲಕ್ಷ್ಮೀ	15-00
11.	ಮಾನಸಿಕ ಒತ್ತಡ	ಡಾ. ಕೆ. ಆರ್. ಶ್ರೀಧರ	10-00
12.	ಮಹಿಳೆಯರ - ಮಕ್ಕಳ ಮಾನಸಿಕ ಸಮಸ್ಯಗಳು	ಡಾ. ಸಿ. ಆರ್. ಚಂದ್ರಶೇಖರ್	22-00
13.	ಸಾಮಾನ್ಯರಲ್ಲಿ ಅಸಾಮಾನ್ಯರು	ಶ್ರೀಮತಿ ಸುಧಾ ಮೂರ್ತಿ	30-00
14.	ರೊದ್ದ ಶ್ರೀನಿವಾಸರಾಯರು	ಶ್ರೀ ಹನುಮಂತರಾವ ದೇಶಪಾಂಡೆ	25-00
15.	ಸೌದಾಮಿನಿ	ಪ್ರೊ. ವಿ. ಆರ್. ಜೋಶಿ	25-00
16	ಸತ್ಯ ಶೋಧನೆ. ಭಾಗ-1	ಅನುವಾದ: ಕನ್ನಡಿಗರಿಬ್ಬರು	50-00
17	" " ಭಾಗ-2	" "	50-00
18	ಓದುಗರೊಡನೆಯ ಹರಟೆಗಳು	ಪಾ.ವೆಂ.ಆಚಾರ್ಯ	20-00

ಪುಸ್ತಕ ದೊರೆಯುವ ಸ್ಥಳ

ಪ್ರಸಾರಾಂಗ ವಿಭಾಗ ಸಂಯುಕ್ತ ಕರ್ನಾಟಕ ಪ್ರೆಸ್
ಕೊಪ್ಪಿಕರರೋಡ್, ಹುಬ್ಬಳ್ಳಿ-20 ಅಥವಾ
2 ರೆಸಿಡೆನ್ಸಿ ರೋಡ್, ಬೆಂಗಳೂರು-25
(ಅಂಚೆ ವೆಚ್ಚ ಪ್ರತ್ಯೇಕ)